ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಗುಲ್ಬರ್ಗಾ, ಬಳ್ಳಾರಿ ಹಾಗೂ ಶಹಬಾದ್‌ನಲ್ಲಿ ಪೋಲೀಸ್ ಠಾಣೆಗಳ ಲಾಕಪ್‌ಗಳಲ್ಲಿ ಸಂಭವಿಸಿದ ಸಾವುಗಳ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ದಿವಸದ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ವಿವರಣೆಯನ್ನು ಕೊಡಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ನಿನ್ನೆ ಸದನದಲ್ಲಿ ಮಂತ್ರಿಗಳು ಇಲ್ಲವೆಂಬುದನ್ನು ಪ್ರಸ್ತಾಪ ಮಾಡಿದರು. ಅದರ ಜೊತೆಗೆ ವಿರೋಧಪಕ್ಷದ ನಾಯಕರೂ ಕೂಡ ಸದನದಲ್ಲಿ ಇಲ್ಲವೆಂದು ಆಪಾದನೆ ಮಾಡಿದ್ದಾರೆ. ನಾನು ಸದನದಲ್ಲಿ ಇಲ್ಲದೇ ಇದ್ದುದು ನಿಜ. ನಿನ್ನೆ ಚರ್ಚೆಯಾಗುತ್ತಿದ್ದ ವಿಚಾರವೂ ಅಷ್ಟೇ ಗಂಭೀರವಾದುದು, ಗಹನವಾದುದು. ಆದರೆ ದುರ್ದೈವ, ನನ್ನ ದೂರದ. ಹತ್ತಿರದ ಸಂಬಂಧಿಕರೊಬ್ಬರಿಗೆ ಹೃದಯಾಘಾತವಾಗಿ, ಆಸ್ಪತ್ರೆಗೆ ಸೇರಿಸಿದ್ದಾರೆಂದು ಸುದ್ದಿ ಬಂದುದರಿಂದ, ಆ ವಿಷಯವನ್ನು ನಮ್ಮ ಸದಸ್ಯರಿಗೆ ತಿಳಿಸಿ ಅವರನ್ನು ನೋಡಿಕೊಂಡು ಬರುವುದಕ್ಕೆ ನಾನು ಹೋಗಿದ್ದೆ. ನಾನು ಬರುವುದರೊಳಗೆ ವಿರೋಧಪಕ್ಷದ ನಾಯಕರು ಇಲ್ಲವೆಂದು ಸಹಜವಾಗಿಯೇ ಹೇಳಿದ್ದಾರೆ. ಆದರೆ ವಸ್ತುಸ್ಥಿತಿ ಇದು. ಆದ್ದರಿಂದ ವಸ್ತುಸ್ಥಿತಿಯನ್ನು ಶ್ರೀಮಾನ್ ವಾಟಾಳ್ ನಾಗರಾಜ್ ಅವರ ಗಮನಕ್ಕೆ ತರುತ್ತೇನೆ. ಇಂತಹ ಸಂದಿಗ್ಧ ಸಂದರ್ಭ ಬಂದಾಗ ಅವರೂ ಕೂಡ ಅದೇ ಕೆಲಸವನ್ನು ಮಾಡುತ್ತಾರೆ.

(ಬ್ಲೇಸಿಯಸ್ ಡಿಸೋಜ ಅವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಶ್ರೀ ವಾಟಾಳ್ ನಾಗರಾಜ್.—ತಾವು ಆಗಲೇ ಸಿಕ್ಕಿದಾಗ ಆಸ್ಪತ್ರೆಗೆ ಹೋಗಬೇಕಾಯಿತು ಎಂದು ಹೇಳಿದ್ದೀರಿ, ನಾನು ಒಪ್ಪುತ್ತೇನೆ. ನನ್ನ ಪ್ರಶ್ನೆ ಅದಲ್ಲ. ಇಲ್ಲಿ ನಮ್ಮ ಕಡೆ ೨೫ ಕುರ್ಚಿ ಖಾಲಿ ಇತ್ತು. ಅವರ ಕಡೆ ೧೫೦ ಕುರ್ಚಿ ಖಾಲಿ ಇದ್ದವು. ಇದರಿಂದ ಈ ಚರ್ಚೆ ಎಷ್ಟು ಗಹನವಾಗಿದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಹೇಳಿದ್ದುದು ಪತ್ರಿಕೆಗಳಲ್ಲಿ ಬಂದಿದೆ, ಅದಕ್ಕಾಗಿ ನಾನು ವಿವರಣೆ ಕೊಡುವುದು ಸರಿಯೆಂದು ತಿಳಿದು ವಿವರಣೆ ಕೊಟ್ಟಿದ್ದೇನೆ. ಇವತ್ತು ಮುಖ್ಯವಾಗಿ, ರಾಜ್ಯದಲ್ಲಿ ಪೋಲೀಸ್ ಠಾಣೆಗಳ ಲಾಕಪ್ಪಿನಲ್ಲಿ ನಡೆದಿರತಕ್ಕ ಕೊಲೆ ವಿಚಾರ ಪ್ರಸ್ತಾಪ ಮಾಡಬೇಕೆಂದು ನಾನು ನಿಂತಿದ್ದೇನೆ. ನನ್ನ ಗಮನಕ್ಕೆ ಬಂದಿರತಕ್ಕ ಸುಮಾರು ೪ ಪೋಲೀಸ್ ಠಾಣೆಯ ಕೊಲೆಗಳು ಏನಿದೆ ಇದನ್ನು ಕೊಲೆ ಎನ್ನುವುದಕ್ಕಿಂತ ಪೋಲೀಸ್ ಠಾಣೆಯ ಸಾವು ಎಂದು ಹೇಳೋಣ. ಮೊದಲು ಶಹಬಾದ ನಲ್ಲಿ ೨೪-೧೨-೧೯೮೯ರಲ್ಲಿ ಗೋಪಾಲ್ ಎಂಬ ಹರಿಜನ ಯುವಕನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಅಲ್ಲಿ ಅವನ ಸಾವು ಆಯಿತು ಎಂಬ ಒಂದು ವರದಿ ಇದೆ, ಹಾಗೆಯೇ ಗುಲ್ಬರ್ಗಾದಲ್ಲಿ ೧೪-೧-೧೯೯೦ರಂದು ಮತ್ತೊಂದು ಇಂಥಾದ್ದೇ ವರದಿ, ಬಳ್ಳಾರಿಯಲ್ಲಿ ೧೬-೧-೧೯೯೦ರಲ್ಲಿ ಮತ್ತೊಂದು ಘಟನೆ. ಒಟ್ಟಾರೆ ಈ ಘಟನೆಗಳನ್ನು ಕುರಿತು ನಾವು ಚರ್ಚೆ ಮಾಡುವಾಗ, ಹೊಸ ಸರ್ಕಾರ ಬಂದಮೇಲೆ ಪೋಲೀಸ್ ವ್ಯವಸ್ಥೆಯಲ್ಲಿ, ಪೋಲೀಸ್ ಆಲೋಚನೆಯಲ್ಲಿ ಏನಾದರೂ ಪರಿವರ್ತನೆ ಆಗಿದೆಯೇ ? ಈ ವಿಚಾರದಲ್ಲಿ ಒಂದೊಂದು ಘಟನೆಯನ್ನೂ ವಿವರವಾಗಿ ಹೇಳುವುದಕ್ಕೆ ಮುಂಚೆ. ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಮೊದಲು ನೋಡಬೇಕು. ಮಾನ್ಯ ಮುಖ್ಯಮಂತ್ರಿಗಳು, ಮೊನ್ನೆ ಗುಲ್ಬರ್ಗಾಕ್ಕೆ ಹೋಗಿದ್ದಾಗ, ಈ ವಿಚಾರದಲ್ಲಿ ಸ್ವಲ್ಪ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ನಾನು ಅವರ ಮಾತಿನ ವಿವರಣೆಯನ್ನು ಕೊಡುವುದಕ್ಕೆ ಮುಂಚೆ ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂದು ಕೇಳುತ್ತೇನೆ. ಮುಖ್ಯವಾಗಿ ಅವರು ಒಂದು ಮಾತು ಹೇಳಿದ್ದಾರೆ. ಅದನ್ನು ನಾನು ಕೋಟ್ ಮಾಡುತ್ತೇನೆ. ಇದು ದಿನಾಂಕ ೧೯-೧-೧೯೯೦ರ ಪ್ರಜಾವಾಣಿ ವರದಿ “ಪೋಲೀಸ್ ಕಾರ್ಯ ನಿರ್ವಹಣೆಯಲ್ಲಿ ನಾವು ರಾಜಕೀಯ ಹಸ್ತಕ್ಷೇಪ ಮಾಡಿಲ್ಲ, ಇಂತಹವರನ್ನು ಹಿಡಿಯಿರಿ, ಇಲ್ಲವೇ ಬಂಧಿತರನ್ನು ಬಿಡಿ ಎಂದು ಕಳೆದ ಒಂದೂವರೆ ತಿಂಗಳ ಅಧಿಕಾರದಲ್ಲಿ ಹೇಳಿಲ್ಲ” ಎಂಬ ಮಾತನ್ನು ಹೇಳಿದ್ದಾರೆ. ಅಲ್ಲಿಂದ ಪ್ರಾರಂಭಿಸೋಣ. ಶಹಾಬಾದ್‌ನಲ್ಲಿ ನಡೆದಂಥ ಪ್ರಕರಣದಲ್ಲಿ ಮುಖ್ಯವಾಗಿ, ನಾವು ತಿಳಿದುಕೊಂಡಿರುವ ಹಾಗೆ, ಅಲ್ಲಿ ಕಾಂಗ್ರೆಸ್‌ನ ಮುಖಂಡರೊಬ್ಬರು, ಬರವಣಿಗೆಯಲ್ಲಿ ಅಲ್ಲ, ಟೆಲಿಫೋನಿನ ಮೂಲಕ ಪೋಲೀಸ್ ಠಾಣೆಗೆ ಒಂದು ದೂರು ಕೊಡುತ್ತಾರೆ. ಆ ದೂರಿನ ಮೇಲೆ ಹರಿಜನ ಯುವಕರನ್ನು ಹಿಡಿಯುತ್ತಾರೆ. ಅಮಾನುಷವಾದ ದಂಡನೆಗೆ ಆತ ಒಳಗಾಗುತ್ತಾನೆ. ಕಡೆಗೆ ಲಾಕಪ್

ನಲ್ಲಿ ಅವನ ಸಾವು ಸಂಭವಿಸುತ್ತದೆ. ಸುಮಾರು ೧೮ ದಿವಸಗಳ ಕಾಲ ಸಂಬಂಧಪಟ್ಟ ಪೋಲೀಸ್ ಅಧಿಕಾರಿ, ಕೈಗೆ ಸಿಗುವುದಿಲ್ಲ. ಆಮೇಲೆ ಐಪಿಸಿ ೩೦೨ರ ಪ್ರಕಾರ ಕೊಲೆ ಪ್ರಕರಣ ದಾಖಲು ಮಾಡಿಕೊಂಡು ಆ ಪೋಲೀಸ್ ಅಧಿಕಾರಿಯನ್ನು ಅರೆಸ್ಟ್ ಮಾಡಿದ್ದಾರೆ. ಅದು ಆಮೇಲೆ ೧೪ನೇ ತಾರೀಖು ಕಲ್ಬುರ್ಗಿಯಲ್ಲಿ ನಡೆದಂಥ ಪ್ರಕರಣದಲ್ಲಿ ತದ್ವಿರುದ್ಧವಾದ ಘಟನೆ ನಡೆದಿದೆ. ಗುಲ್‌ಬರ್ಗಾದಲ್ಲಿ ನಡೆದ ಪ್ರಕರಣದಲ್ಲಿ ಕಾಂಗ್ರೆಸ್‌ನ ಮುಖಂಡರ ಕೊಲೆಯಾಗಿದೆ ಎನ್ನತಕ್ಕದ್ದು ನಾವು ಪತ್ರಿಕೆಗಳಲ್ಲಿ ಓದಿರತಕ್ಕ ಸುದ್ದಿ. ಆದರೆ ಅಲ್ಲಿಗೂ ಇಲ್ಲಿಗೂ ಆಗಿರತಕ್ಕಂಥ ವ್ಯತ್ಯಾಸವನ್ನು ನಾವು ನೋಡಬೇಕು. ಶಹಾಬಾದ್‌ನಲ್ಲಿ ನಡೆದಂಥ ಪ್ರಕರಣದಲ್ಲಿ. ತಕ್ಷಣ ಅಲ್ಲಿಯ ಜನ ಕುಪಿತರಾಗಿ ಸುಮಾರು ಆರು ಸಾವಿರ ಜನ ಈ ಒಂದು ಸಾವಿನ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಯನ್ನು ಮಾಡುತ್ತಾರೆ. ಅಲ್ಲಿಯ ಅಂಬಣ್ಣ ಚಪ್ಪರ್ ಎಂಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಈ ಒಂದು ಸಾವಿಗೆ ಕಾರಣ ಎನ್ನುತ್ತಾರೆ. ಅದಷ್ಟೇ ಹೇಳಿ ನಿಲ್ಲಿಸಿದ್ದರೆ ಈ ವಿಚಾರದ ಪ್ರಸ್ತಾವವನ್ನು ನಾನು ಹೆಚ್ಚು ದೂರಕ್ಕೆ ಒಯ್ಯುತ್ತಿರಲಿಲ್ಲ. ಆದರೆ ಕಾಂಗ್ರೆಸ್‌ನ ಮುಖಂಡರು, ಮಾಜಿ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಒಟ್ಟಾರೆಯ ಕಾರಣದಿಂದಾಗಿ ಹರಿಜನ ಯುವಕ ಸಾಯುತ್ತಾನೆ ಎನ್ನತಕ್ಕದ್ದು, ಜನತಾಪಕ್ಷದವರು ಮಾಡಿರತಕ್ಕಂಥ ಟೀಕೆ. ಅಧ್ಯಕ್ಷರೆ. ತಾವು ಇದನ್ನು ಬಹಳ ಮುಖ್ಯವಾಗಿ ಗಮನಿಸಬೇಕೆಂದು ನಾನು ತಮ್ಮನ್ನು ಈ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಆದರೆ ಗುಲ್‌ಬರ್ಗಾದಲ್ಲಿ ಕಾಂಗ್ರೆಸ್‌ನ ಒಬ್ಬ ಸದಸ್ಯ ಅಥವಾ ಮುಖಂಡ ಕೊಲೆ ಆಗಿದ್ದಾನೆ ಎಂದು ಹೇಳಿದರೆ ಮುಖ್ಯಮಂತ್ರಿಗಳು ಅಲ್ಲಿ ಧಾವಿಸುತ್ತಾರೆ. ಅಲ್ಲಿಯೇ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುತ್ತಾರೆ. ಸತ್ತವನ ಕುಟುಂಬದವರಿಗೆ ಪರಿಹಾರ ಕೊಡುತ್ತಾರೆ. ಗಾಯಗೊಂಡುವರಿಗೂ ಪರಿಹಾರವನ್ನು ಪ್ರಕಟಣೆ ಮಾಡುತ್ತಾರೆ. ಕಾಂಗ್ರೆಸ್ (ಐ)ನ ಮುಖಂಡನೇ ಸತ್ತಿದ್ದಾನೆ ಎಂದು ಹೇಳಿ ಪ್ರಚಾರವನ್ನೂ ತೆಗೆದುಕೊಳ್ಳುತ್ತಾರೆ,

ಆದರೆ ಶಹಬಾದ್ ಪ್ರಕರಣದ ಮತ್ತೊಂದು ರೂಪವನ್ನು ನಾವು ನೋಡಿದರೆ ಅರ್ಥವಾಗುತ್ತದೆ. ನಾನು ಆದರ ಡಿಟೇಲ್ಸ್‌ಗೆ ಹೋಗುವುದಿಲ್ಲ. ಏತಕ್ಕೆ ಡಿಟೇಲ್ಸ್‌ಗೆ ಹೋಗುವುದಿಲ್ಲವೆಂದರೆ, ಗುಲ್ಬರ್ಗ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದಾರೆ. ನ್ಯಾಯಾಂಗ ತನಿಖೆಯಲ್ಲಿರುವಾಗ ನಾವು ಇಲ್ಲಿ ಅದನ್ನು ಪ್ರಸ್ತಾಪ ಮಾಡಿದರೆ ಅವರು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ತೊಂದರೆಯಾಗಬಹುದು. ಆದರೆ ಇಲ್ಲಿ ಹರಿಜನ ಯುವಕ ಏನು ಕೊಲೆಯಾಗಿದ್ದಾನೆ ಆ ಬಗ್ಗೆ ನ್ಯಾಯಾಂಗ ತನಿಖೆ ಆರ್ಡರ್ ಮಾಡುವುದಿಲ್ಲ. ಆ ಪೋಲಿಸ್ ಅಧಿಕಾರಿಯನ್ನು ಅರೆಸ್ಟ್ ಮಾಡುವುದಕ್ಕೆ ಸುಮಾರು ೧೮ ದಿವಸ ತೆಗೆದುಕೊಂಡಿದ್ದಾರೆ. ಆದರೆ ಗುಲ್ಬರ್ಗದಲ್ಲಿ ಇದು ತ್ವರಿತವಾಗಿ ಆಗುತ್ತದೆ, ಈ ವ್ಯತ್ಯಾಸವೇತಕ್ಕೆ ? ನಮ್ಮದು ಪ್ರವೇಶವಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ನಾವು ಒಪ್ಪಿಕೊಂಡರೆ ಹಾಗಿದ್ದಾರೆ, ಶಹಬಾದ್ ಕೇಸ್‌ನಲ್ಲಿ ಟೆಲಿಫೋನ್ ಮೂಲಕ ಕೊಟ್ಟಂತಹ ದೂರನ್ನು ತತ್‌ಕ್ಷಣ ಪೋಲೀಸ್ ಅಧಿಕಾರಿ ಕೈಗೆ ತೆಗೆದುಕೊಂಡು ಆ ಯುವಕನನ್ನು ಅರೆಸ್ಟ್ ಮಾಡತಕ್ಕಂಥ ಅಥವಾ ಪೋಲೀಸ್ ಠಾಣೆಯಲ್ಲಿ ಆ ಯುವಕನಿಗೆ ಶಿಕ್ಷೆ ವಿಧಿಸತಕ್ಕಂಥ ಸ್ಥಿತಿಗೆ ಕೊಂಡೊಯ್ದಿದ್ದಾರೆ. ಬಳ್ಳಾರಿಯದು ಅದಕ್ಕಿಂತಲೂ ವಿಚಿತ್ರ, ಅಲ್ಲಿ ಕಾಂಗ್ರೆಸ್‌ನವರಿಂದ ದೂರು ಇಲ್ಲ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಮುಖಂಡರ ಕೊಲೆಯೂ ಆಗಿಲ್ಲ. ಬಳ್ಳಾರಿಯಲ್ಲಿ ೧೬ನೇ ತಾರೀಖು ಗೋಪಾಲ ಎನ್ನುವವರ ಕೊಲೆ ಕೌಲ್ ಬಜಾರ್ ಪೋಲೀಸ್ ಠಾಣೆಯಲ್ಲಿ ಆಯಿತು. ಗೋಪಾಲನ ಸಾವು ಪೋಲೀಸ್ ಠಾಣೆಯಲ್ಲಿ ಆಯಿತು ಎನ್ನುವುದನ್ನು ಹೇಳುವುದಕ್ಕಿಂತ ಮುಂಚೆ ಹಿಂದೆ ಆತನ ಮೇಲೆ ಯಾವುದಾದರೂ ಅಪರಾಧಗಳು ದಾಖಲಾಗಿದ್ದವೇ ? ಅಥವಾ ಯಾವುದಾದರೂ ದೂರುಗಳು ಇದ್ದುವೇ. ಆ ದಿವಸ ಆತನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗುವುದಕ್ಕಿಂತ ಮುಂಚೆ ಯಾರದಾದರೂ ಆತನ ಮೇಲೆ ಫಿರ್ಯಾದಿ ಇತ್ತೆ ಎಂದು ವಿಮರ್ಶೆ ಮಾಡಿದರೆ ಅವನ ಮೇಲೆ ಫಿರ್ಯಾದಿ ಯಾವುದೂ ಇಲ್ಲ. ಆತನನ್ನು ಅದೇ ದಿವಸ ಅರೆಸ್ಟ್ ಮಾಡಿ, ಅದೇ ದಿವಸ ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಪುನಃ ಪೋಲೀಸ್ ಠಾಣೆಯಲ್ಲಿಯೇ ಸಾವೀಗಿಡಾಗಿದ್ದಾನೆ, ಆದರೆ ಅಲ್ಲಿ ಹಾಕತಕ್ಕಂಥ ಸೆಕ್ಷನ್ಸ್ ಐ ಪಿ.ಸಿ ೩೦೪ (೨) ಹೀಗೆ ಒಂದೊಂದು ಕಡೆ ಆಗಿರತಕ್ಕಂಥ ಕೊಲೆಗೆ ಒಂದೊಂದು ರೀತಿಯಾದಂತಹ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ ಹಾಕಿದ್ದಾರೆ, ಒಂದೊಂದು ರೀತಿಯಾದಂತಹ ಆಡಳಿತಾತ್ಮಕವಾದಂಥ ಎನ್‌ಕ್ವೈರಿ ಎನ್ನುವ ವ್ಯವಸ್ಥೆ. ಈ ಕಾರಣದಿಂದ ಮೊದಲು ಬಳ್ಳಾರಿ ಪ್ರಕರಣದಲ್ಲಿ ಗೋಪಾಲನನ್ನು ಅರೆಸ್ಟ್ ಮಾಡುವದಕ್ಕೆ ಕಾರಣಗಳೇನು? ಯಾರದೋ ಒಬ್ಬರದು ಎಕ್ಸೈಜ್ ಕಂಟ್ರಾಕ್ಟ್‌ರ ಹಣ ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ ಎಂತಲೊ ಅಥವಾ ಇವನದು ಅದರಲ್ಲಿ ಪಾಲು ಇದೆ ಎನ್ನುವ ಸಂಶಯದಿಂದಲೋ ಅವನನ್ನು ಹಿಡಿದುಕೊಂಡು ಬಂದರು ಆದರೆ ಈ ಸಂಶಯ ಆತನ ಮೇಲೆ ಬರುವುದಕ್ಕೆ ಮುಂಚೆ ಹಿಂದಿನ ಆತನ ಚಾರಿತ್ರ್ಯಗಳನ್ನು ನೋಡಬೇಕು. ಆ ಚಾರಿತ್ರ್ಯಗಳನ್ನು ನೋಡುವುದಿಲ್ಲ. ಆ ಕಾರಣ, ಪೋಲೀಸ್ ಠಾಣೆಗಳಲ್ಲಿ ಆಗತಕ್ಕಂಥ ಕೊಲೆಗಳಲ್ಲಿ ಒಬ್ಬೊಬ್ಬ ವ್ಯಕ್ತಿಗೆ ಅಥವಾ ಒಂದೊಂದು ರಾಜಕೀಯ ಕಾರಣಕ್ಕಾಗಿ ಬೇರೆ ಬೇರೆಯಾದಂತಹ ಮಾನದಂಡವನ್ನು ಇಟ್ಟುಕೊಂಡು ಅಳೆಯತಕ್ಕಂಥ ಅಥವಾ ಬೇರೆ ಬೇರೆ ರೀತಿಯಾದಂತಹ

ತನಿಖೆಗಳನ್ನು ಮಾಡತಕ್ಕಂಥ ಬೇರೆ ಬೇರೆ ರೀತಿಯಾದಂಥ ಸೆಕ್ಷನ್‌ಗಳನ್ನು ಹಾಕತಕ್ಕಂಥ ಪ್ರವೃತ್ತಿ ಏನಿದೆ ಇದು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ವಿರುದ್ಧವಾದಂಥ ಭಾವನೆಗೆ ಎಡೆಕೊಡುತ್ತದೆ. ಹಾಗೆ ಇದೆ ಎಂದು ನಾನು ಹೇಳುವುದಿಲ್ಲ, ಅಂತಹ ಭಾವನೆಗೆ ಎಡೆಕೊಡುತ್ತದೆ. ಹಾಗೆ ಎಡೆಕೊಡದ ಹಾಗೆ, ಅಂತಹ ಶಂಕೆಗಳು ಬರದಹಾಗೆ ಪತ್ರಿಕೆಗಳಲ್ಲಿ ಬಂದಿರತಕ್ಕಂಥಸುದ್ದಿಯಂತೆಯೇ ಮಾನ್ಯ ಮುಖ್ಯಮಂತ್ರಿಗಳು ನಡೆದಿದೆ ಎನ್ನುವುದಾದರೆ ಅಥವಾ ಹಸ್ತಕ್ಷೇಪ ಇಲ್ಲವೆನ್ನುವುದಾದರೆ ನಾನು ಅವರಿಂದಸ್ಪಷ್ಟೀಕರಣ ಬಯಸುತ್ತೇನೆ. ನಾನು ಇಂತಹ ವಿಭಿನ್ನವಾದಂಥ ನಿಲುವುಗಳನ್ನು ಸರ್ಕಾರದಿಂದ ನಿರೀಕ್ಷೆ ಮಾಡಲಿಲ್ಲ, ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳಿಂದ.

ಆದರೆ, ಆ ನಿರೀಕ್ಷೆಗೆ ತದ್ವಿರುದ್ಧವಾದಂತಹ ಪ್ರಕ್ರಿಯೆಗಳು ಅಲ್ಲಿ ನಡೆಯುತ್ತಿವೆ. ಅದು ಅಷ್ಟಕ್ಕೆ ಸೀಮಿತವಾಗಿಲ್ಲ ಲಾಕಪ್‌ಗಳಲ್ಲಿ ನಡೆದ ಮೂರು ಪ್ರಕರಣಗಳನ್ನು ನಾನು ತಮ್ಮ ಗಮನಕ್ಕೆ ಏನು ತಂದೆ, ಈ ಮೂರು ಪ್ರಕರಣಗಳಲ್ಲಿ ವಿಭಿನ್ನತೆಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅವರ ಜೊತೆಗೆ, ಇಂಥ ಹಲವು ಪ್ರಕರಣಗಳು ಚುನಾವಣೆಯ ನಂತರ ನಡೆಯುತ್ತಿವೆ. ಇವತ್ತು ನಮ್ಮ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ 'ಹೊಳೆನರಸೀಪುರ ತಾಲ್ಲೂಕಿನಲ್ಲಿ ಭಯೋತ್ಪಾದಕ ವಾತಾವರಣ' ಎಂದು ಬಂದಿದೆ ಇದರ ವಿವರಕ್ಕೆ ನಾನು ಹೋಗುವುದಿಲ್ಲ, ಆದರೆ, ಇದು ಇಷ್ಟಕ್ಕೆ ಸೀಮಿತವಾಗಿ ಈ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ತುಮಕೂರಿನಲ್ಲಿ ಒಂದು ಪ್ರಸಂಗ ನಡೆದಿದೆ. ಅಲ್ಲಿ ಗಂಡಸರೆಲ್ಲಾ ಊರು ಬಿಟ್ಟು ಹೋಗಿದ್ದಾರೆ. ಭಯಭೀತರಾಗಿ ಹೆಂಗಸರು ನಾವು ಬದುಕಿರಬೇಕೇ ಬೇಡವೇ ಎನ್ನುವ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ ಆ ಮೇಲೆ ಹೊಸಕೋಟೆ ತಾಲ್ಲೂಕಿನ ವಾಗಟ ಎನ್ನುವ ಗ್ರಾಮ ಪಂಚಾಯಿತಿಗೆ ನಾನೂ ಹೋಗಿದೆ , ಅದು ಸನ್ಮಾನ್ಯ ಸದಸ್ಯರಾದ ಚಿಕ್ಕೇಗೌಡರ ಕ್ಷೇತ್ರ. ಅವರು ಈಗ ಸದನದಲ್ಲಿ ಇಲ್ಲ. ವಾಗಟದಲ್ಲಿ ಒಂದು ಘಟನೆಯಾದ ಮೇಲೆ ನಾನು ಹೋಗಿದ್ದೆ. ಅದು ಒಂದು ಪಂಚಾಯಿತಿಯ ಅಥವಾ ಮಂಡಲದ ಹೆಡ್ ಕ್ವಾರ್ಟರ್ ಆಗಿದೆ, ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲಿ ಅಲ್ಲಿ ಮಂಡಲ ಪ್ರಧಾನ ಮತ್ತು ಉಪಪ್ರಧಾನರು ಕೊಲೆಯಾದರು. ಸಂಬಂಧವೇನೋ ನನಗೆ ಗೊತ್ತಿಲ್ಲ. ಕೊಲೆಯಾಗಿರುವ ಕಾರಣಕ್ಕಾಗಿ ವಾಗಟದಲ್ಲಿ ಪೋಲೀಸರನ್ನು ನೇಮಿಸಿದ್ದಾರೆ. ಪೋಲೀಸರು ಅಲ್ಲೇ ಇದ್ದಾರೆ. ಕೆಲವು ದಿವಸಗಳ ಹಿಂದೆ ಆ ಪೋಲೀಸರ ಸಮ್ಮುಖದಲ್ಲಿ ಸಾಯಂಕಾಲ ೭-೩೦ ಗಂಟೆ ಸಮಯದಲ್ಲಿ ಒಬ್ಬ ವಿದ್ಯಾರ್ಥಿಯ ಕೊಲೆಯಾಗಿದೆ. ಯಾರು ರಕ್ಷಣೆ ಮಾಡಬೇಕಾಗಿತ್ತೋ ಅವರು ಅವನ್ನು ನಿಂತು ನೋಡುತ್ತಿದ್ದಾರೆ, ಇವನು ಇಲ್ಲಿ ಹೊಡೆಯುತ್ತಾ ಇದ್ದರೆ ಅಲ್ಲಿದ್ದ ಪೋಲೀಸ್ ಪೇದೆ ಗಾಳಿಯಲ್ಲಿ ಗುಂಡು ಹಾರಿಸಿದನಂತೆ. ಆ ವಿದ್ಯಾರ್ಥಿ ಕೊಲೆಯಾಯಿತು. ಬೆಂಗಳೂರು ಜಿಲ್ಲೆಯ ಸೂಪರಿಂಟೆಂಡೆಂಟ್‌ರವರು ಅಲ್ಲಿಗೆ ಹೋಗುವವರೆಗೂ ಡೆಡ್ ಬಾಡಿಯನ್ನು ಆಚೆಗೆ ತೆಗೆದುಕೊಂಡು ಬರುವುದಕ್ಕಾಗಿರಲಿಲ್ಲ. ಒಂದು ವೇಳೆ ಅವಕಾಶ ಸಿಕ್ಕಿದ್ದರೆ ಆ ಹುಡುಗ ಉಳಿದುಕೊಳ್ಳುವುದಕ್ಕೆ ಸಾಧ್ಯವಿತ್ತು. ನಾನು ಅಲ್ಲಿಗೆ ಹೋಗಿದ್ದಾಗ ಕೊಲೆಯಾದ ವಿದ್ಯಾರ್ಥಿಯ ತಂದೆ ತಾಯಿಗಳನ್ನು ವಿಚಾರಿಸಿದರೆ, ಅವರು ಕಣ್ಣಿನಲ್ಲಿ ನೀರು ಹಾಕಿಕೊಂಡು ನಮಗೆ ಏನೂ ಕೊಡಬೇಡಿ, ಏನೋ ಪ್ರಜಾಪ್ರಭುತ್ವ ಅಂತೀರಿ, ಜನತಂತ್ರ ಅಂತೀರಿ, ಚುನಾವಣೆ ಅಂತೀರಿ, ಶಾಸನಬದ್ಧವಾದಂಥ ಸರ್ಕಾರ ಇದೆ ಅಂತೀರಿ, ನಮಗೆ ಇಲ್ಲಿ ಬದುಕುವುದಕ್ಕೆ ಅವಕಾಶ ಕೊಡದೇ ಇದ್ದರೆ, ದಯಮಾಡಿ ಸರ್ಕಾರವೋ ಅಥವಾ ಯಾರಾದರೂ ಈ ಆಸ್ತಿಯನ್ನು ತೆಗೆದುಕೊಂಡು ಎಲ್ಲಾದರೂ ರಕ್ಷಣೆ ಇರತಕ್ಕಂಥ ಜಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಎಂದು ಕೇಳಿದರು. ಆ ಮೇಲೆ ಇನ್ನೊಂದು ಕಡೆ ಒಬ್ಬರು ಹಿರಿಯರು ಇದ್ದರು. ಅವರು ರೈತ ಮುಖಂಡರಾಗಿದ್ದಾರೆ. ಕೆಲವರು ಹಿಂದಿನ ಪ್ರಕರಣದಲ್ಲಿ ೫-೬ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ಅವರ ದೇಹದ ಅರ್ಧಭಾಗ ಸುಟ್ಟು ಹೋಗಿದೆ. ಏಕೆ ಸುಟ್ಟು ಹೋಗಿದೆ ಅಂದರೆ ತಪ್ಪಿಸಿಕೊಳ್ಳುವುದಕ್ಕಾಗಿ ಹೊಗೆ ಹೋಗತಕ್ಕಂಥ ಕೊಳವೆಯ ಮೂಲಕ ಆಚೆ ದಾಟು ಹೋಗುವುದಕ್ಕೆ ಪ್ರಯತ್ನ ಮಾಡಿದಾಗ ಅವರ ಕೈ, ಕಾಲುಗಳು ಅರ್ಧ ಸುಟ್ಟು ಹೋಗಿವೆ. ಅವರ ಜಮೀನಿನಲ್ಲಿ ಕೆಲಸ ಮಾಡುವುದಕ್ಕೆ ಜನರು ಸಿಕ್ಕುವುದಿಲ್ಲ. ಇವರು ಆಚೆಗೆ ಹೋದರೆ ಒಳಗೆ ಬರುತ್ತಾರೋ ಇಲ್ಲವೋ ಎನ್ನುವ ಶಂಕೆ ಇದೆ. ಕೊಲೆ ಆದ ದಿವಸ ಸುಮಾರು ಎರಡೂ ಕಾಲು ಎಕರೆ ದ್ರಾಕ್ಷಿ ತೋಟವನ್ನು ಬುಡ ಸಮೇತ ಕತ್ತರಿಸಿದ್ದಾರೆ. ಈಗಲೂ ಅವನ್ನು ಪ್ರತ್ಯಕ್ಷವಾಗಿ ನೋಡಬಹುದು. ಇಡೀ ತೋಟ ಒಣಗಿ ನಿಂತಿದೆ. ನಾವು ಯಾರ ಸಲುವಾಗಿ ಇಲ್ಲಿ ಮಾತನಾಡುವುದು ? ಯಾರ ಸಲುವಾಗಿ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ ? ಯಾವ ಕಾರಣಕ್ಕಾಗಿ ಚರ್ಚೆ ಮಾಡುತ್ತಿದ್ದೇವೆ ? ಇಲಾಖೆಯ ದೋಷಗಳು ಇದ್ದರೆ ಅವನ್ನು ಸರಿಪಡಿಸುವುದು ಹೇಗೆ ? ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಪತ್ರಿಕೆಗಳಲ್ಲಿ ಹೇಳಿದ್ದಾರೆ,

೧-೪೦ ಪಿ. ಎಂ.

ಪೋಲೀಸ್ ಠಾಣೆ ಆಗಿರತಕ್ಕಂಥ ಪ್ರಕರಣದ ಬಗ್ಗೆ ನಾನು ಆಗಲೇ ಒಂದು ಮಾತನ್ನು ಹೇಳಿದ್ದೇನೆ. ವಾಗಟ ಪ್ರಕರಣದ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ, ಅದನ್ನು ಓದುತ್ತೇನೆ. "ತಮ್ಮ ಬದುಕಿನ ಮೇಲೆ ವಿಶ್ವಾಸ ಕಳೆದುಕೊಂಡಿರುವ ಜನರಲ್ಲಿ ಭೀತಿಯ ವಾತಾವರಣ ಉಂಟಾಗಿದೆ. ಪೊಲೀಸ್ ಇಲಾಖೆ, ಸರ್ಕಾರ ವಿಶೇಷ ಆಸಕ್ತಿ ತಳೆದು ಪರಿಸ್ಥಿತಿಯನ್ನು ಸುಧಾರಿಸಿ ಜನರಲ್ಲಿ ವಿಶ್ವಾಸ ಮೂಡಿಸಬೇಕೆಂದು ಪ್ರಾರ್ಥಿಸಿದ್ದಾರೆ. ಬದುಕತಕ್ಕಂಥ ಜನಕ್ಕೆ ವಿಶ್ವಾಸ ಮೂಡಿಸಿ ಎಂದು ಕೇಳಿದ್ದಾರೆ. ಇದುವರೆಗೂ ಅದು ಆಗಲಿಲ್ಲ. ಪೋಲೀಸರ ಸಮ್ಮುಖದಲ್ಲಿ ಆಗಿರತಕ್ಕಂಥ ಈ ಪ್ರಕರಣದಲ್ಲಿ, ಕೊಲೆಗಾರರು ಯಾರೆಂದು ನಿಂತು ನೋಡಿದ್ದಾರೆ. ಇಷ್ಟು ದಿವಸವಾದರೂ ಆರೋಪಿಗಳನ್ನು ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಅಂದರೆ ಪೋಲೀಸರ ಕೇಸ ಏನು ? ಇಲ್ಲಿ ಏನಾದರೂ ರಾಜಕಾರಣಿಗಳ ಪ್ರವೇಶ ನಡೆದಿದೆಯೇ ? ಈ ವಿಚಾರಗಳ ಬಗ್ಗೆ ಪರೀಕ್ಷೆ ಮಾಡುವುದು ಬೇಡವೇ ? ಇದೇ ರೀತಿಯಲ್ಲಿ ಕೋಲಾರ ಜಿಲ್ಲೆಯ ಡಿವೈಎಸ್‌ಪಿಯವರ ಅನೇಕ ಪ್ರಕರಣಗಳನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ನಮ್ಮ ಪಕ್ಷದ ಶಾಸಕರಾದಂಥ ಶ್ರೀಮಾನ್ ನಾರಾಯಣಸ್ವಾಮಿಯವರೂ ಕೂಡ ಹೇಳಿದ್ದಾರು, ತಾವು ಕೂಡ ಆ ಬಗ್ಗೆ ವಿಚಾರಣೆ ಮಾಡಿಸುತ್ತೇನೆ ಎಂದು ಹೇಳಿದ್ದೀರಿ. ನಾನೇ ತಮ್ಮನ್ನು ಕಂಡು ಈ ಬಗ್ಗೆ ಕೇಳಿಕೊಂಡಿದ್ದೇನೆ. ಆ ಬಗ್ಗೆ ಏನು ವಿಚಾರಣೆಯಾಗಿದೆ ಎಂದು ನನಗೆ ಗೊತ್ತಾಗಲಿಲ್ಲ. ಹೊಳೆನರಸೀಪುರದ ಪ್ರಕರಣ ಏನೆಂದು ಸ್ಪಷ್ಟವಾಗುತ್ತಿಲ್ಲ. ಈಗಂತೂ ಜನರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ. ಈ ಪ್ರಕರಣಕ್ಕೂ ಹಿಂದೆ ನಡೆದಿರತಕ್ಕಂಥ ಘಟನೆಗಳಿಗೂ ಏನಾದರೂ ಸಂಬಂಧವಿದೆಯೋ ಏನೋ, ಅದೂ ಕೂಡ ನನಗೆ ಗೊತ್ತಿಲ್ಲ, ಅಥವಾ ಅಂಥ ಘಟನೆಗಳಿಗೆ ಪ್ರತೀಕಾರವೋ ಏನೋ ಎಂಬ ಬಗ್ಗೆ ಅದರ ಅಂತರ್ಯ ನನಗಂತೂ ಅರ್ಥವಾಗುತ್ತಿಲ್ಲ. ಒಟ್ಟಿನಲ್ಲಿ ಹಿಂದೆಯೂ ಕೂಡ ಅಂಥ ಕೆಲವು ಪ್ರಕರಣಗಳು ನಡೆದಿರಬಹುದು. ಅದನ್ನು ನಾನು ಕೇಳಿ ತಿಳಿದಿದ್ದೇನೆ. ಆಗ ಒಂದು ತರಹದ ಭಯಭೀತಿ ಇತ್ತು. ಆ ಭೀತಿಯನ್ನು ಜನರು ಈಗ ನಿಯಂತ್ರಣ ಮಾಡಿದ್ದಾರೆ. ಅಳಿಯುದನ್ನು ನೆಪಮಾಡಿಕೊಂಡು ಅಂತಹ ವಾತಾವರಣವನ್ನು ಪುನಃ ಸೃಷ್ಟಿ ಮಾಡಿದರೆ ಅದನ್ನು ನಿಯಂತ್ರಣ ಮಾಡುವವರು ಯಾರು ? ಈ ತರಹ ಪ್ರಕರಣಗಳ ಮೇಲೆ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಆಗುತ್ತಾ ಇವೆ. ಪೋಲೀಸ್ ಇಲಾಖೆಯ ಬಗ್ಗೆ ನಮ್ಮ ಜನರಲ್ಲಿ ಎಷ್ಟೊಂದು ಗೌರವ, ವಿಶ್ವಾಸ ನಂಬಿಕೆ ಇತ್ತು, ಅವುಗಳೆಲ್ಲವೂ ಇವೊತ್ತು ಹೋಗತಕ್ಕಂಥ ಸಂದರ್ಭ ಒದಗಿ ಬಂದಿದೆ. ಆ ಒಂದು ಸ್ಥಿತಿಗೆ ನಾವು ಮುಟ್ಟಿದ್ದೇವೆ. ಈ ಎಲ್ಲ ವಿಷಯಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗದೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ೨೪-೧೨-೧೯೮೮ರಂದು ನಡೆದ ಹರಿಜನ ಯುವಕನೊಬ್ಬನ ಕೊಲೆಯ ಪ್ರಕರಣಕ್ಕೆ ೩೦೨ನೇ ಸೆಕ್ಷನ್ ಹಾಕಿ ಅವರನ್ನು ಅರೆಸ್ಟ್ ಮಾಡಿದ್ದಾರೆ. ನಾನು ಇಲ್ಲಿ ಹರಿಜನ ಯುವಕನ ಕೊಲೆಯ ಬಗ್ಗೆ ಮಾತ್ರ ಹೇಳುತ್ತಾ ಇಲ್ಲ. ನಾನು ಕೇಳಬಯಸುವುದೇನೆಂದರೆ, ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಗೆ ಏತಕ್ಕಾಗಿ ಆರ್ಡರ್ ಮಾಡಿಲ್ಲ ? ಗುಲ್ಬರ್ಗಾದಲ್ಲಿ ಕಾಂಗ್ರೆಸ್ಸಿನ ಒಬ್ಬ ಪ್ರಮುಖ ಕೊಲೆಯಾಗಿದ್ದಾನೆ ಎನ್ನುವ ಕಾರಣಕ್ಕಾಗಿ ನ್ಯಾಯಾಂಗ ತನಿಖೆ ಮಾಡಿಸುತ್ತೀರಲ್ಲ, ಈ ದ್ವಂದ್ವಗಳು ಏಕೆ ? ವಿಚಾರಣೆ ಅಲ್ಲಿ ಏನು ಆಗುತ್ತದೊ ಇಲ್ಲೂ ಅದೇ ಆಗಬೇಕು. ಇವತ್ತು ಪೋಲೀಸ್ ಆಡಳಿತದಲ್ಲಿ ಏನಾದರೂ ದೋಷ ಬಂದಿದ್ದರೆ ಅದಕ್ಕೆ ಏನು ಕಾರಣ ಎಂದು ನೋಡಬೇಕು, ಎಲ್ಲದಕ್ಕೂ ಮಾನ್ಯ ಮುಖ್ಯಮಂತ್ರಿಗಳನ್ನು ಜವಾಬ್ದಾರರು ಎಂದು ಹೇಳುವುದಕ್ಕಾಗುವುದಿಲ್ಲ ಕೆಲವೊಂದು ಅಧಿಕಾರಿಗಳು ಪ್ರಾಮಾಣಿಕರಾಗಿರದೆ ಕೆಳಹಂತದಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ನನ್ನ ಸರಕಾರ ಬಂದಿದೆ. ನಾನು ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆಯಿಂದ ವರ್ತಿಸಿದಲ್ಲಿ ಹೀಗೆ ಅನಾಹುತಗಳು ನಡೆಯುವ ಸಂದರ್ಭಗಳು ಒದಗಿ ಬರುತ್ತವೆ. ಶಹಬಾದ್ ಪ್ರಕರಣದಲ್ಲಿ ಟೆಲಿಫೋನ್ ಮಾಡಿದರೆ ಕೇಸ್ ರಿಜಿಸ್ಟರ್ ಆಗುತ್ತದೆ.

ಶಾಂತಮಲ್ಲಪ್ಪ ಪಾಟೀಲ್ ಎನ್ನುವವರು ಟೆಲಿಫೋನ್‌ನಲ್ಲಿ ಹೇಳಿದರು ಎಂದು ಹರಿಜನ ಯುವಕನನ್ನು ಕರೆದುಕೊಂಡು ಹೋಗಿ ಒದ್ದುಕೊಂಡು ಹಾಕಿರುವ ಪರಿಸ್ಥಿತಿ ಬಂದಿದೆ. ದೋಷ ಕೆಳಮಟ್ಟದಲ್ಲಿರಬಹುದು ದಯವಿಟ್ಟು ಇದನ್ನು ಗಮನಿಸಬೇಕು. ಅದಕ್ಕಾಗಿ ಮೊದಲೇ ಹೇಳಿದೆ ನಿಮಗೆ ಸೀಟು ಬಂದಿದೆ, ಆದರೆ ವೋಟು ಬಂದಿಲ್ಲ ಎಂದು. ರಾಜ್ಯದ ಶೇಕಡ ೫೮ಕ್ಕಿಂತ ಹೆಚ್ಚು ಜನ ಈ ಸರ್ಕಾರದ ವಿರುದ್ಧ ಮತ ಕೊಟ್ಟಿರುವುದು ನಿಮ್ಮ ಗಮನದಲ್ಲಿರಬೇಕೆಂದು ಹೇಳುತ್ತೇನೆ. ನಿಮಗೆ ಬಂದಿರುವ ೪೧ ಪರ್ಸೆಂಟ್ ಪ್ಲಸ್ ವೋಟ್ ಮಾತ್ರ. ಆದರೆ ಕೆಳಗಡೆ ಕೆಲಸ ಮಾಡುವ ರಾಜಕೀಯ ಕಾರ್ಯಕರ್ತರು ಏನಿದ್ದಾರೆ ಅವರು ಯಾವ ಪಕ್ಷವೇ ಆಗಲಿ ಅವರಿಗೆ ತಮ್ಮ ಸರ್ಕಾರ ಬಂತೆಂದು ಸಹಜವಾಗಿ ಉತ್ಸಾಹ ಇರುತ್ತದೆ. ಹಿಂದಿನ ಸರ್ಕಾರದಲ್ಲಿ ಕೆಲಸ ಮಾಡಿದ ಜನತಾ ಪಕ್ಷದವರೋ, ಜನತಾ ದಳದವರೋ ಅವರಲ್ಲಿ ಆತಂರಿಕವಾಗಿ ವೈಯುಕ್ತಿಕವಾಗಿ ಅನೇಕ ಭಿನ್ನಾಭಿಪ್ರಾಯ

ಗಳಿರಬಹುದು. ಆ ಭಿನ್ನಾಭಿಪ್ರಾಯದ ಕಾರಣ ನಿಮ್ಮ ಸರ್ಕಾರ ಬಂದಿದೆ ಎಂದು ಯಜಮಾನಿಕೆ ಮಾಡುವ ಪ್ರಯತ್ನ ಮಾಡಬಹುದು, ಇದು ರಾಜಕೀಯ ಭಿನ್ನಾಭಿಪ್ರಾಯ. ಆದರೆ ಪೋಲಿಸರಿಗೆ ಏನು ಕೆಲಸ ಇದೆ, ನ್ಯಾಯವನ್ನು ಎತ್ತಿಹಿಡಿಯುವಂತಹ, ಶಾಸನವನ್ನು ಜಾರಿ ಕೊಡಬೇಕಾದಂತಹ ಮತ್ತು ಲಾ ಅಂಡ್ ಆರ್ಡರ್‌ನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಬಿಟ್ಟು ಪೋಲೀಸ್ ಠಾಣೆಗಳಲ್ಲಿ ಕೊಲೆ ಆಗುವಂತಹ ಅಥವಾ ಬೇರೆ ಬೇರೆ ಭಾಗಗಳಲ್ಲಿ ನೀವು ಹೊಡೆದರೆ ಅವರೂ ಹೊಡೆಯಲಿ ಇವರೂ ಹೊಡೆಯಲಿ ಇದರಿಂದ ನಮಗೇನೂ ಕೆಲಸ ಇಲ್ಲವೆನ್ನುವಂತಹ ಪರಿಸ್ಥಿತಿಗೆ ಹೋದರೆ ಇದು ಆಲ ಸ್ಯಾಂಧಕಾರವೋ ಅಥವಾ ಸರ್ಕಾರದಲ್ಲಿ ಆಗಿರತಕ್ಕಂಥ ಚಿಂತನೆಯಲ್ಲಿ ಬದಲಾವಣೆಯೋ ಅಥವಾ ಸರ್ಕಾರವನ್ನು ಒಪ್ಪಿಸುವ ಉತ್ಸಾಹದಿಂದ ಪೋಲೀಸರೇ ಈ ಕೆಲಸ ಮಾಡುತ್ತಿದ್ದಾರೊ ಎಂದು ಭಾವನೆ ಮಾಡಬೇಕೊ ಇಲ್ಲವೋ ಒಟ್ಟಾರೆ ಪೋಲೀಸ್ ವ್ಯವಸ್ಥೆಯಲ್ಲೇ ಏನಾದರೂ ದೋಷಗಳಿವೆಯೋ, ಅವರಿಗೆ ಕಾರ್ಯ ಮಾಡುವುದಕ್ಕೆ ತೊಂದರೆಗಳಿವೆಯೋ ಎನ್ನುವುದನ್ನು ಆಲೋಚನೆ ಮಾಡಬೇಕು. ಅದಕ್ಕಾಗೇ ನಾನು ಹೇಳಿದೆ. ಸಮಗ್ರವಾದ ಈ ಪ್ರಭಾವಳಿಯ ಒಳಗಡೆ ಒಟ್ಟಾರೆ ಪೋಲೀಸ್ ಇಲಾಖೆಯ ಕಾರ್ಯ ನಿರ್ವಹಣೆಗೆ ಏನಾದರೂ ದೋಷವಿದ್ದರೆ ಅದನ್ನು ಪರೀಕ್ಷೆ ಮಾಡುವುದಕ್ಕಾಗಿ ಯಾವುದಾದರೂ ಒಂದು ರೀತಿಯ ಪ್ರಯತ್ನ ನೀವು ಮಾಡಬೇಕು. ಹಾಗೆ ಮಾಡುವಾಗ ಕಾರ್ಯನಿರ್ವಹಿಸುವಲ್ಲಿ ಪೋಲೀಸರಿಗೆ ತೊಂದರೆ ಇದ್ದರೂ ಕೂಡ ಆ ವಿಚಾರವನ್ನೂ ಜೊತೆಯಲ್ಲಿ ಕುರಿತು ಚರ್ಚೆ ಮಾಡುವಂತಹ ಪ್ರಯತ್ನವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇವತ್ತು ಬಳ್ಳಾರಿ ಲಾಕಪ್ ಸಾವಿನ ಬಗ್ಗೆ ತನಿಖೆಗೆ ಆಗ್ರಹಿಸಿ ಅನೇಕ ರಾಜಕೀಯ ಪಕ್ಷಗಳ ಮುಖಂಡರು ನಿನ್ನೆ ಸಭೆ ಸಮಾರಂಭ ನಡೆಸಿದ್ದಾರೆ, ಮೌನ ಮೆರವಣಿಗೆ ಮಾಡಿದ್ದಾರೆ. ಸಿಬಿಐ ತನಿಖೆ ಮಾಡಿ ಎಂದು ಕೇಳಿದ್ದಾರೆ. ಹಿಂದೆಯೆಲ್ಲಾ ಯಾವುದು ಬಂದರೂ ಸಿಬಿಐ ತನಿಖೆ ಎನ್ನುತ್ತಿದ್ದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಾಲಪ್ಪನವರ ಕೇಸ್ ಬಿಟ್ಟರೆ ಬೇರೆಯದಕ್ಕೆ ನಾವು ಕೇಳಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಕೇಳಿಸಿದ್ದೀರಿ ಸ್ವಾಮಿ. ನೀವಲ್ಲದಿದ್ದರೆ ನಿಮ್ಮ ಸ್ನೇಹಿತರು ಕೇಳಿದ್ದಾರೆ. ಯಾವುದು ಬಂದರೂ ಸಿಬಿಐ ತನಿಖೆ. ಇವತ್ತು ನಾನು ಕೇಳುತ್ತಿಲ್ಲ, ಬಳ್ಳಾರಿ ಜನ ಕೇಳುತ್ತಿದ್ದಾರೆ, ಸಿಬಿಐ ತನಿಖೆ ಮಾಡಿಸಿ. ನಾನು ಏಕೆ ಹೇಳುವುದಕ್ಕೆ ಹೋಗುವುದಿಲ್ಲ ಎಂದರೆ ನಮ್ಮ ಪೋಲಿಸರ ಬಗ್ಗೆ ನಮಗೆ ನಂಬಿಕೆ ಇಲ್ಲ ಎನ್ನುವುದಾದರೆ ಹೊರಗಡೆ ಹೋಗಬೇಕು, ನನಗೆ ಆ ನಂಬಿಕೆ ಇದೆಯೆಂದು ವಿಶ್ವಾಸ ಕಳೆದುಕೊಳ್ಳುವವರೆಗೆ ನಾನು ಆ ಕೆಲಸ ಮಾಡುವುದಿಲ್ಲ. ಆ ವಿಶ್ವಾಸ ಕಳೆದುಕೊಂಡಾಗ ನಾನೂ ಅದೇ ಮಾತನ್ನು ಕೇಳಬೇಕಾಗುತ್ತದೆ. ಅವರು ಕೇಳಿದ್ದಾರೆ, ಆದ್ದರಿಂದ ಸಿಬಿಐ ತನಿಖೆ ಮಾಡಿಸಿ ಸಿ.ಬಿ.ಐ. ನಿಂದ ತನಿಖೆ ಮಾಡಿಸುವುದಕ್ಕೆ ಏನು ತೊಂದರೆ ಇದೆ. ಸತ್ಯ ಹೊರಗೆ ಬರಲಿ ಆ ಕೆಲಸವನ್ನು ಅವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಹೇಳಿಕೆಯು ಕಳಕಳಿಯನ್ನು ಆಧರಿಸಿ ತನಿಖೆ ಮಾಡಿಸಿ ಎಂದು ಕೇಳಿಕೊಳ್ಳುತ್ತೇನೆ. ತಾವು ಗುಲ್ಬರ್ಗಾದಲ್ಲಿ ಹೇಗೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರೋ ಹಾಗೆಯೇ ಶಹಬಾದ್‌ನ ಕೇಸ್‌ನ್ನು ಕೂಡಾ ನ್ಯಾಯಾಂಗತನಿಖೆಗೆ ಒಪ್ಪಿಸಬೇಕು. ಏಕೆಂದರೆ, ಅದರಲ್ಲಿ ಎರಡು ಭಾಗ ಇದೆ. ಒಂದು ಠಾಣೆಯಲ್ಲಿ ಆದಂಥ ಸಾವು, ಮತ್ತೊಂದು ಅದರಿಂದಾಗಿ, ಪ್ರತಿಕ್ರಿಯೆಯಾಗಿ ಗೋಲಿಬಾರ್‌ನಿಂದ ಸತ್ತಿರತಕ್ಕಂಥದ್ದು. ಅಲ್ಲಿ ಮೂರು ಜನರು ಸತ್ತಿದ್ದಾರೆ ಎಂದು ನೀವು ಹೇಳುತ್ತೀರಿ, ನಾಲ್ಕು ಜನರು ಸತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ನಮ್ಮ ಅನಧಿಕೃತ ವರದಿ ಪ್ರಕಾರ ೪ ಎಂದು ಹೇಳುತ್ತೇವೆ, ನಿಮ್ಮ ಅಧಿಕೃತ ವರದಿ ಪ್ರಕಾರ ಮೂರು ಎಂದು ಹೇಳುತ್ತೀರಿ. ಯಾವುದು ಸತ್ಯ ಎಂದು ನನಗೆ ಗೊತ್ತಿಲ್ಲ. ಜೊತೆ ಜೊತೆಯಲ್ಲಿಯೇ ಬೀದರ್‌ನಲ್ಲಿ ಒಂದು ಪ್ರಕರಣ ನಡೆದಿದೆ ಇದನ್ನು ನಾನು ಏತಕ್ಕೆ ಹೇಳಿದೆಯೆಂದರೆ ನಾವು ಬರೀ ಠಾಣೆಗೆ ಅಷ್ಟೇ ಸೀಮಿತವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಕಾರಣವೇನೆಂದರೆ, ಕಾಂಗ್ರೆಸ್‌ನ ಸದಸ್ಯರು ಟೆಲಿಫೋನ್ ಮೂಲಕ ಹೇಳಿದ್ದರಿಂದಾಗಿ, ಶಹಬಾದ್‌ನ ಪೋಲೀಸ್ ಠಾಣೆಯ ಲಾಕ್-ಅಪ್‌ನಲ್ಲಿ ಸಾವಿಗೆ ಕಾರಣ ಆಯಿತು. ಏನ್ನುವುದಾದರೆ ಬೀದರ್‌ನಲ್ಲಿ ನಡೆದಿರತಕ್ಕಂಥ ಪ್ರಕರಣದಲ್ಲಿ ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯನನ್ನು ಇವರು ಯಾರೂ ಅಲ್ಲ ಎನ್ನುವ ಹಾಗೆ ಪೋಲೀಸರು ಅಮಾನುಷವಾಗಿ ದಂಡನೆ ಮಾಡಿದ್ದಾರೆ. ಅಲ್ಲಿಗೆ ಏನು ಉಳಿಯಿತು ? ಚುನಾಯಿತ ಸದಸ್ಯರು ಯಾರೇ ಇರಲಿ, ಅವರು ಯಾವ ಪಕ್ಷಕ್ಕೆ ಸೇರಿರಲಿ ಅವರನ್ನು ಈ ರೀತಿ ಮಾಡಿದ್ದಾರೆ. ಆದ್ದರಿಂದ ಈ ಪ್ರಕರಣಗಳ ಬಗ್ಗೆ ತಾವು ಹೆಚ್ಚು ಬೆಳಕನ್ನು ಚೆಲ್ಲಬೇಕು, ನಿಮ್ಮ ಕಾಲದಲ್ಲಿ ಈ ಕೆಲಸ ಆಗಬಾರದು. ನಿಮ್ಮ ಕಾಲದಲ್ಲಿ ಬೇರೆ ಬೇರೆ ಠಾಣೆಯ ಸಾವುಗಳಿಗೆ ಬೇರೆ ಬೇರೆ ರೀತಿಯಾದಂಥ ನೋಟ ಅಥವಾ ಆಲೋಚನೆ ನಡೆದಿದೆ ಎನ್ನತಕ್ಕಂಥ ಅಪಕೀರ್ತಿ ನಿಮಗೆ ಬರಬಾರದು ಎನ್ನುವ ದೃಷ್ಟಿಯಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇದಕ್ಕೆ ಸಮಂಜಸವಾದ ಉತ್ತರವನ್ನು

ನಾನು ನಿಮ್ಮಿಂದ ನಿರೀಕ್ಷೆ ಮಾಡಿ, ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಟಿ.ಆರ್. ನಾಗರಾಜ್ (ಚಾಮರಾಜನಗರ) — ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದಂಥ ವೀರೇಂದ್ರ ಪಾಟೀಲರು ೨೦ ವರ್ಷಗಳ ಹಿಂದೆ ಈ ಸಭೆಯಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಇಂಥ ಅನೇಕ ಪ್ರಕರಣಗಳು ನಡೆದವು. ಅದರಲ್ಲಿ ಮಧುಗಿರಿ ಪ್ರಕರಣ ಒಂದು, ಮುನಿಯಮ್ಮನ ಪ್ರಕರಣ ಒಂದು, ಪಯ್ಯಾಳಿಕಾವಲ್ ಪ್ರಕರಣಗಳು. ಇಂಥ ಅನೇಕ ಪ್ರಕರಣಗಳು ನಡೆದವು. ಮಧುಗಿರಿ ಪ್ರಕರಣದಲ್ಲಿ ಭಾರೀ ದೊಡ್ಡ ದುರಂತ ನಡೆದಾಗ ಈ ಸಭೆಯಲ್ಲಿ ಗೃಹಮಂತ್ರಿಗಳಾಗಿದ್ದಂಥ ಶ್ರೀ ಎಂ. ವಿ. ರಾಮರಾಯರು ತಮ್ಮ ಇಲಾಖೆಯಲ್ಲಿ ತಮ್ಮ ಸಕಾ ರದಲ್ಲಿ ಅನ್ಯಾಯ ನಡೆದಿದೆ ಎಂದು ಹೇಳಿ ಈ ಸಭೆಯಲ್ಲಿ, ಈ ಸದನದಲ್ಲಿ ರಾಜಿನಾಮೆಯನ್ನು ನೀಡಿದಂಥ ನಿದರ್ಶನ ನಮ್ಮ ಮುಂದಿದೆ. ಏನೋ ದುರ್ದೈವ ಇವರು ಮುಖ್ಯಮಂತ್ರಿಗಳಾದ ತಕ್ಷಣವೇ ಬೆನ್ನ ಹಿಂದೆಯೇ ಗುಲ್ಬರ್ಗಾ ನಂತರ ಬಳ್ಳಾರಿ ಎರಡೂ ಲಾಕಪ್‌ಗಳಲ್ಲಿ ಈ ರೀತಿಯಲ್ಲಿ ದುರಂತಗಳು ಸಂಭವಿಸಿದ್ದು ಅತ್ಯಂತ ಶೋಚನೀಯವಾದದ್ದು. ಈ ಪರಿಸ್ಥಿತಿಗೆ ಬರಬಾರದು. ಕರ್ನಾಟಕದಲ್ಲಿ ಪೋಲೀಸ್ ಇಲಾಖೆಗೆ ಬಹಳ ಒಳ್ಳೆಯ ಹೆಸರು ಇತ್ತು. ಎಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ ನಿಜ. ಕೆಲವು ಒಳ್ಳೆಯ ದಕ್ಷ ಅಧಿಕಾರಿಗಳು ನಮ್ಮಲ್ಲಿದ್ದರು, ಇದ್ದಾರೆ, ಇವತ್ತು ಪರಿಸ್ಥಿತಿಯನ್ನು ನೋಡಿದಾಗ, ಇಡೀ ಇಲಾಖೆಯವರೇ ಒಂದು ಗೊಂದಲದಲ್ಲಿ ಸಿಕ್ಕಿದ್ದಾರೆ. ಅವರು ಗೊಂದಲದಲ್ಲಿ ಸಿಕ್ಕಿರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಪ್ರತಿದಿನ ಸುಲಿಗೆ, ದರೋಡೆ ಎಲ್ಲೆಲ್ಲೂ ನಡೆಯುತ್ತಿದೆ. ನಿನ್ನೆಯ ಪ್ರಕರಣವೊಂದನ್ನು ಬಹುಶಃ ತಾವು ಪತ್ರಿಕೆಯಲ್ಲಿ ನೋಡಿರಬಹುದು. ಚಾಮುಂಡಿ ಬೆಟ್ಟ ಎಷ್ಟು ಜನನಿಬಿಡವಾದಂಥ ಪ್ರದೇಶ ಇಂಥ ಪ್ರದೇಶಕ್ಕೆ ಯಾತ್ರಾರ್ಥಿಗಳು, ಹೋದರೆ ಅವರನ್ನು ತಡೆದು ಅಲ್ಲಿ ಲೂಟಿ ಮಾಡಿರತಕ್ಕಂಥ ಪ್ರಸಂಗ ಪತ್ರಿಕೆಯಲ್ಲಿ ಬಂದಿದೆ. ಪ್ರತಿದಿನ ಇಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ, ಆದ್ದರಿಂದ ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಪೋಲೀಸ್ ಇಲಾಖೆಯ ಕಾಯಕಲ್ಪ ಆಗಬೇಕು ಎಂದು ನನಗನ್ನಿಸುತ್ತದೆ.

ಪೋಲೀಸ್ ಇಲಾಖೆಯಲ್ಲಿ ಬಹಳ ಗೊಂದಲ ಇದೆ. ಇಲಾಖೆಯ ಅಧಿಕಾರಿಗಳು ಜಾಸ್ತಿ ಆಗಿದ್ದಾರೆ, ಬಹಳ ಗೊಂದಲ ಇದೆ. ಅವರಲ್ಲಿ ಯಾರನ್ನು ಹೊಡೆಯಬೇಕು, ಯಾರನ್ನು ಬಿಡಬೇಕು ಎನ್ನುವ ಪರಿಸ್ಥಿತಿ ಇಲ್ಲವೇ ಇಲ್ಲ. ತಮಗೆ ಒಂದು ನಿದರ್ಶನ ಕೊಡುತ್ತೇನೆ. ೧೯೮೨ನೇ ಇಸವಿಯಲ್ಲಿ ಕರ್ನಾಟಕ ಬೇಕು ಕನ್ನಡ ಆಡಳಿತ ಭಾಷೆ ಆಗಬೇಕು ಎಂದು ವಿಧಾನ ಸೌಧಕ್ಕೆ ಮೆರವಣಿಗೆಯಲ್ಲಿ ಬಂದಾಗ ಆವತ್ತು ಬೆಂಗಳೂರು ನಗರದಲ್ಲಿ ಲೂಯೀಸ್ ನ್ನುವವರು ನನಗೆ ಬೂಡ್ಸ್‌ನಲ್ಲಿ ಏಟು ಹೊಡೆದರು, ಇದು ಬಹಳ ಶೋಚನೀಯ. ನಾನು ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ೧೯೮೨ನೇ ಇಸವಿಯಲ್ಲಿ ಕೆಂಪೇಗೌಡ ಸರ್ಕಲ್‌ನಲ್ಲಿರತಕ್ಕ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಈ ಘಟನೆ ಆಗಿದ್ದು. ನಾವು ಏನು ದೇಶದಲ್ಲಿ ದರೋಡೆ ಮಾಡುವುದಕ್ಕೆ ಹೊರಟವರಲ್ಲ. ಅಥವಾ ಲೂಟಿ ಮಾಡುವುದಕ್ಕೆ ಹೊರಟವರಲ್ಲ. ಆ ಒಂದು ಪೋಲೀಸ್ ನೀತಿ ಇದೆಯೆಲ್ಲಾ ಅದು ಎಂದೆಂದಿಗೂ ಬದಲಾವಣೆ ಆಗಿಲ್ಲ. ಇಂಗ್ಲೀಷರ ಆಡಳಿತದಲ್ಲಿ ಏನು ಇತ್ತು ಇವತ್ತಿಗೂ ಅದೇ ಪರಿಸ್ಥಿತಿ ಇದೆ, ಬದಲಾವಣೆಯಂತೂ ಆಗಿಯೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಲಾಕಪ್‌ಗಳ ದರ್ಶನ ಮಾಡಬೇಕು. ಒಂದು ಸಾರಿ ತಾವು ದರ್ಶನ ಮಾಡಿ, ದರ್ಶನ ಮಾಡಿ ಅಂದರೆ ತಾವು ಲಾಕಪ್‌ಗೆ ಹೋಗಬೇಕು ಎಂದಲ್ಲ. ನಾನು ಅನುಭವಿಸಿದ್ದೇನೆ. ಅನೇಕ ಲಾಕಪ್‌ಗಳಲ್ಲಿ ನನ್ನನ್ನು ಇಟ್ಟಿದ್ದರು. ಹತ್ತಾರು ವರ್ಷಗಳ ಕಾಲ ಸಾವಿರಾರು ಬಾರಿ ನನ್ನನ್ನು ಬಂಧಿಸಿದ್ದಾರೆ. ಇವೊತ್ತು ನಮ್ಮ ರಾಜ್ಯದ ಡಿ.ಜಿ.ಪಿ. ಶ್ರೀ ನಿಜಾಮುದ್ದೀನ್ ಅವರೇ ನನ್ನನ್ನು ಹೊಡೆದಿರುವ ನಿದರ್ಶನ ಇದೆ. ಲಾಕಪ್‌ಗೆ ಹಾಕಿ, ವ್ಯಾನ್‌ಗೆ ಹಾಕಿ ಏಟನ್ನು ಹೊಡೆದಿರತಕ್ಕುದ್ದು ಇದೆ. ಅಂದರೆ ಇವರಿಗೆ ರಾಜಕಾರಣಿಗಳೂ ಗೊತ್ತಿಲ್ಲ. ಖೈದಿಗಳೂ ಗೊತ್ತಿಲ್ಲ. ಇವರದು ಎಲ್ಲರಿಗೂ ಒಂದೇ ಮಂತ್ರ ಖೈದಿಗಳಿಗೂ ಒಂದೆ. ರಾಜಕಾರಣಿಗಳಿಗೂ ಒಂದೆ, ಅಧಿಕಾರಿಗಳಿಗೂ ತೀರ ಮೀತಿ ಮೀರಿದರೆ ಅವರ ಹೆಂಡತಿ ಮಕ್ಕಳಿಗೂ ಸಹ ಒಂದೆ, ಬಹುಶಃ ಅವರಿಗೆ ಯಾರು ಏನು ಎನ್ನತಕ್ಕ ದಯೆ ನೀತಿ ಏನೂ ಇಲ್ಲವೇ ಇಲ್ಲ. ನಿಜವಾಗಲೂ ಇವೊತ್ತು ಕರ್ನಾಟಕ ರಾಜ್ಯದ ಪೋಲೀಸ್ ಇಲಾಖೆಯು ತೀರಾ ಕೆಳಮಟ್ಟಕ್ಕೆ ಬಂದಿದೆ. ಹಿಂದೆ ಆ ಒಂದು ಉನ್ನತ ಮಟ್ಟದಲ್ಲಿ ಇದ್ದಂತಹ ಪರಿಸ್ಥಿತಿ ಇವತ್ತು ತೀವ್ರ ತರವಾಗಿ ಕೆಳಮಟ್ಟಕ್ಕೆ ಬಂದಿದೆ, ಇವೊತ್ತು ನಾವು ಹೇಳುತ್ತೇವೆ. ಇಂತಹ ಗೋಲೀಬಾರ್ ಆದಾಗ ೨೦ ಸಾವಿರ ರೂಪಾಯಿ ಪರಿಹಾರ ಕೊಟ್ಟು ಬಿಡುವುದು. ಕೈಕಾಲು ಮುರಿದವರಿಗೆ ಐದು ಸಾವಿರ ರೂಪಾಯಿ ಪರಿಹಾರ ಕೊಡುವುದು. ಇದರಿಂದ ಪರಿಸ್ಥಿತಿ ಬಗೆಹರಿಯುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ಸಮಗ್ರವಾಗಿ ಬದಲಾವಣೆ ಆಗಬೇಕು. ಪೋಲೀಸ್ ಕಾನೂನಿನ ಸಮಗ್ರ ಬದಲಾವಣೆ ಆಗಬೇಕು.

ಇಂತಹ ಘಟನೆಗಳು ನಡೆದಾಗ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಹೇಳುತ್ತೇವೆ, ಸರ್ಕಾರ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುತ್ತದೆ. ಅವರು ಫಾರಂ ಅನ್ನು ರೆಡಿಯಾಗಿ ಇಟ್ಟು ಕೊಂಡಿರುತ್ತಾರೆ ಎರಡು ಜನರ ಹೆಣ ಉರುಳಿದ ತಕ್ಷಣ ನ್ಯಾಯಾಂಗ ತನಿಖೆ ಆಗುತ್ತದೆ ಎಂದು ಹೇಳುವುದು. ಏಕೆಂದರೆ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಮಾತನಾಡಬಾರದು ಎಂದು, ಪರಿಸ್ಥಿತಿ ತೀವ್ರವಾಗಿದೆ. ಪೋಲೀಸ್ ಇಲಾಖೆಯ ಆಡಳಿತವನ್ನು ವೀರೇಂದ್ರ ಪಾಟೀಲರ ಸರ್ಕಾರ ಸಮಗ್ರವಾಗಿ ಬದಲಾವಣೆ ಮಾಡದಿದ್ದರೆ ಬಹುಶಃ ನಿಮ್ಮ ಸರ್ಕಾರವನ್ನು ಉರುಳಿಸುತ್ತಾರೆ. ಯಾವುದೋ ಗದ್ದಲದಲ್ಲಿ ಎಲ್ಲೋ ದೊಡ್ಡ ಯುದ್ಧ ಮಾಡಿದ ಹಾಗೆ ಮಾಡಿ, ಎಲ್ಲೋ ಮೆರವಣಿಗೆಯಲ್ಲಿ ಯಾರನ್ನೋ ಕೊಂದು ಗೋಲೀ ಬಾರ್ ಆಗಿ, ಲಾಠಿ ಛಾರ್ಜ್ ಆಗಿ ಬಂದ್‌ಗಳಾಗಿ ಕೊನೆಗೆ ಪರಿಸ್ಥಿತಿ ಇಂತಹ ಮಟ್ಟಕ್ಕೆ ಹೋಗುತ್ತದೆ. ಆದ್ದರಿಂದ ಪೋಲೀಸ್ ಇಲಾಖೆ ಬಗ್ಗೆ ತೀವ್ರ ತರವಾದಂತಹ ಬದಲಾವಣೆ ಆಗಬೇಕು. ಮತ್ತು ಅಲ್ಲಿರ ತಕ್ಕಂಥ ಗೊಂದಲ ತೀವ್ರತರವಾಗಿ ಬದಲಾವಣೆ ಆಗಲಿಲ್ಲ ಎಂದರೆ ಇದರಿಂದ ಕರ್ನಾಟಕ ರಾಜ್ಯಕ್ಕೆ ಅಪಕೀರ್ತಿ ಬರುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಯಳಂದೂರು ಈ ಅರಣ್ಯ ಪ್ರದೇಶದಲ್ಲಿ ವೀರಪ್ಪನ್ ಎಂಬಾತ ಇದ್ದಾನೆ. ಅವನು ಗಂಧದ ಮರವನ್ನು ಕದ್ದು ಸಾಗಣೆ ಮಾಡತಕ್ಕವನು. ಆನೆಗಳನ್ನು ಕೊಂದು ದಂತಗಳನ್ನು ಮಾರತಕ್ಕವನು, ಹೀಗಾಗಿ ಕೋಟಿ ಕೋಟಿ ರೂಪಾಯಿಗಳ ಆನೆಯ ದಂತ, ಗಂಧದ ಮರಗಳು ಲೂಟಿ ಆಗಿವೆ. ಇದನ್ನು ಪತ್ತೆ ಹಚ್ಚುವುದಕ್ಕೆ ತಮಿಳುನಾಡಿನ ಪೋಲೀಸರು ಕರ್ನಾಟಕದ ಪೋಲೀಸರು, ಕೇರಳದ ಪೋಲೀಸರು, ಎಲ್ಲರೂ ನುಗ್ಗಿ ಹೋಗುತ್ತಿದ್ದಾರೆ. ಆ ಮನುಷ್ಯ ತನ್ನ ಕಡೆಯ ಜನರಿಂದ ಪೋಲೀಸರ ಮೇಲೆ ಗುಂಡು ಹಾರಿಸಿರತಕ್ಕ ನಿದರ್ಶನ ಇದೆ. ಮೊನ್ನೆ ಸುಮಾರು ೨೦ ದಿವಸಗಳ ಹಿಂದೆ ಮೈಸೂರಿನ ಎಸ್.ಪಿ. ಬಹಳ ಧೈರ್ಯದಿಂದ ಅಲ್ಲಿ ನುಗ್ಗಿದಾಗ ಏನು ಪರಿಸ್ಥಿತಿ ನಡೆದಿದೆ ಎನ್ನತಕ್ಕಂಥ ಅರಿವನ್ನು ತಮಗೆ ಹೇಳುತ್ತಿದ್ದೇನೆ. ಇವೊತ್ತಿನವರೆಗೆ ಅವನನ್ನು ಹಿಡಿಯುವುದಕ್ಕೆ ಕರ್ನಾಟಕ ರಾಜ್ಯದ ಪೋಲೀಸರಿಂದ ಸಾಧ್ಯ ಆಗಿಲ್ಲ. ಇವೊತ್ತು ನಮ್ಮಲ್ಲಿ ಒಳ್ಳೊಳ್ಳೆಯ ಆಯುಧಗಳಿವೆ. ಈ ಒಂದು ಪರಿಸ್ಥಿತಿಗೆ ಹಿಡಿತವನ್ನು ಹೊಂದಿರತಕ್ಕ ಹೊಸ ಹೊಸ ಆಯುಧಗಳಿವೆ. ಹೀಗಿರುವಾಗ ನಮ್ಮವರು ಅವರ ಗುಂಡೇಟು ತಿಂದು ಹೊರ ಬರಬೇಕಾಗಿದೆ. ನಾನು ಹೋಗಿ ನೋಡಿದೆ. ಪೋಲೀಸರು ಏಟು ತಿಂದಿರತಕ್ಕಂಥಾದ್ದು, ಆಸ್ಪತ್ರೆಯಲ್ಲಿ ಇರುವುದನ್ನು ನಾನು ಹೋಗಿ ನೋಡಿ ಬಂದಿದ್ದೇನೆ. ಇವೊತ್ತು ಈ ಮನುಷ್ಯನನ್ನು ಹಿಡಿಯುವುದಕ್ಕೆ ಆಗಿಲ್ಲ ಎಂದು ಹೇಳಿದರೆ ಇದು ಪೋಲೀಸ್ ಇಲಾಖೆಗೆ ಒಂದು ಸವಾಲು ಆಗಿದೆ. ಆದ್ದರಿಂದ ಇವೊತ್ತು ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಬರಬೇಕು. ಪೋಲೀಸ್ ಇಲಾಖೆಯಲ್ಲಿರತಕ್ಕ ಗೊಂದಲ ಕಡಿಮೆ ಆಗಬೇಕು. ಬಹುಶಃ ಉನ್ನತದ ಅಧಿಕಾರಿಗಳಲ್ಲಿ ಗೊಂದಲ ಇರಬಹುದು, ಬಡ್ತಿ ಸಿಗಲಿಲ್ಲ ಎಂಬ ಗೊಂದಲ ಇರಬಹುದು, ನಮ್ಮನ್ನು ಒಳ್ಳೆಯ ಸ್ಥಾನದಲ್ಲಿ ಇಟ್ಟಿಲ್ಲ ಎನ್ನುವ ಗೊಂದಲ ಇರಬಹುದು ಈ ಗೊಂದಲಗಳಿಗೆ ರಾಜಕೀಯ ವ್ಯಕ್ತಿಗಳೂ ಕಾರಣ ನಮ್ಮ ಸರ್ಕಾರ ಬಂತು ಅಂದರೆ ನಮಗೆ ಬೇಕಾದವರನ್ನು ಮುಂದೆ ತರತಕ್ಕಂಥಾದ್ದು, ಇನ್ನೊಂದು ಸರ್ಕಾರ ಬಂದರೆ ಅವರಿಗೆ ಬೇಕಾದವರನ್ನು ಮುಂದೆ ತರತಕ್ಕಂಥಾದ್ದು ನಡೆಯುತ್ತದೆ ಇವೆಲ್ಲದರಿಂದ ಇಲಾಖೆಯ ಬಹಳ ತೀವ್ರತರವಾದಂಥ ಗೊಂದಲ ನಿರ್ಮಾಣವಾಗಿದೆ ಆದುದರಿಂದ ಈ ಪರಿಸ್ಥಿತಿ ಹೋಗಬೇಕಾದರೆ ಅದಕ್ಕೆ ಕಾಯಕಲ್ಪ ಆಗಬೇಕು. ಪೋಲೀಸ್ ಇಲಾಖೆಗೆ ಕಾಯಕಲ್ಪ ಆಗಬೇಕಾದುದು ಮುಖ್ಯ ಪೋಲೀಸ್ ಇಲಾಖೆಗೆ ಕಾಯಕಲ್ಪ ಆಗಲಿಲ್ಲ ಅಂದರೆ ಈ ದುರಂತ ಮುಂದುವರಿಯುತ್ತದೆ, ಅದರಿಂದ ಏನೂ ಬದಲಾವಣೆಯಾಗಲಿಕ್ಕೆ ಸಾಧ್ಯವಿಲ್ಲ, ಆದುದರಿಂದ ತಮಗೆ ಹೇಳುತ್ತಾ ಇದ್ದೇನೆ. ಗುಲ್ಬರ್ಗದಲ್ಲಿ ಸತ್ತಿರತಕ್ಕವನು ಒಬ್ಬ ರಾಜಕಾರಣಿ, ಒಬ್ಬ ಯುವ ಕಾಂಗ್ರೆಸ್ ಮುಖಂಡ. ಲಾಕಪ್ಪಿನಲ್ಲಿ ಇರುವವರನ್ನು ಯಾವರೀತಿ ನೋಡಿಕೊಳ್ಳಬೇಕು ಎನ್ನತಕ್ಕಂಥ ಪರಿಸ್ಥಿತಿಯನ್ನು ಅರಿಯದೆ ಇರುವುದರಿಂದ ಈ ರೀತಿಯಾಗಿದೆ. ಈ ಪರಿಸ್ಥಿತಿಯನ್ನು ನೋಡಿದಾಗ ನನಗೆನ್ನಿಸುತ್ತದೆ: ಕೇವಲ ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಪೋಲೀಸ್ ಇಲಾಖೆ ಈ ಮಟ್ಟಕ್ಕೆ ಬಂತು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ; ಹಿಂದಿನ ಸರ್ಕಾರದಲ್ಲೂ ಇತ್ತು. ಹಿಂದಿನ ಸರ್ಕಾರದಲ್ಲಿ ದೊಡ್ಡ, ಘೋರವಾದಂಥ ದುರಂತವೇ ನಡೆದುಹೋಯಿತು. ಈ ರಾಜ್ಯದ ಗೃಹ ಮಂತ್ರಿಗಳನ್ನು ಸಿ.ಬಿ.ಐ.ಗೆ ಸೇರಿಸತಕ್ಕ ಪರಿಸ್ಥಿತಿ ಬಂತು. ಮತ್ತು ಈ ರಾಜ್ಯದ ಒಬ್ಬ ಉನ್ನತ ಪೋಲೀಸ್ ಅಧಿಕಾರಿ ಕೊಯಮುತ್ತೂರಿನ ಜೈಲಿನಲ್ಲಿ ಕೊಳೆಯತಕ್ಕ ಪ್ರಸಂಗ ಬಂದಿದೆ. ಇಷ್ಟು ದುರಂತ ಆಗಿದೆ. ಆದ್ದರಿಂದ ಇದನ್ನು ಅಷ್ಟು ಲಘುವಾಗಿ ತಿಳಿದುಕೊಳ್ಳತಕ್ಕಂಥಾದ್ದಲ್ಲ. ಸುಮ್ಮನೆ ನಾವು ನೀವು ಮಾತನಾಡುವಾಗ ನ್ಯಾಯಾಂಗ ತನಿಖೆಯಾಗಲಿ ಹೇಳಿದರೆ ನಮ್ಮ ಮನಸ್ಸು ಸಂತೋಷಪಡಿಸುವುದು ಬಿಟ್ಟರೆ ನ್ಯಾಯಾಂಗ ತನಿಖೆಯಿಂದಲೂ ಸಾಧ್ಯವಿಲ್ಲ. ಇಂತಹ ನ್ಯಾಯಾಂಗ ತನಿಖೆಯ ನೂರಾರು ವರದಿಗಳು ಕಸದಬುಟ್ಟಿಗೆ ಹೋಗಿದೆ.

ಶ್ರೀ ಎಂ. ಮಹದೇವ್.—ಕಾಯಕಲ್ಪ ಏಕೆ ಮಾಡಬೇಕು.

ಶ್ರೀ ಪಾಟೀಲ್ ನಾಗರಾಜ್.—ಮುಂದುಕರುಗಳಿಗೆಲ್ಲ ಸ್ವಲ್ಪ ಕಾಯಕಲ್ಪ ಮಾಡಬೇಕು ಕಣಪ್ಪ. ವೀರೇಂದ್ರ ಪಾಟೀಲರ ಸರ್ಕಾರಕ್ಕೆ ಸ್ವಲ್ಪ ಕಾಯಕಲ್ಪ ಮಾಡಬೇಕು. ಎಲ್ಲ ಮುಂದುಕರುಗಳು, ಸ್ವಲ್ಪ ವಯಸ್ಸಾದವರು, ಹೃದಯ ವೇದನೆ ಇರತಕ್ಕವರು, ಕಾಯಿಲೆ ಇರತಕ್ಕವರು ಒಂದಷ್ಟು ಜನ ಸೇರಿ ಬಿಟ್ಟಿದ್ದಾರೆ. ಅವರು ಕಾಯಕಲ್ಪ ತೆಗೆದುಕೊಂಡು ಈ ರಾಜ್ಯಕ್ಕೆ ಹೊಸ ಆಡಳಿತ ಕೊಟ್ಟರೆ ಒಳ್ಳೆಯದು. ಒಂದು ತಿಂಗಳಿಂದ ನಾವು ನೋಡುತ್ತಾ ಇದ್ದೇವೆ. ಆರೋಗ್ಯವಾಗಿ ಇರತಕ್ಕವರು, ಆಡಳಿತ ನಡೆಸ ತಕ್ಕವರು ಬರಲಿ. ಮೂರು ಗಂಟೆಗೆ ಮನೆಗೆ ಹೋಗಿ ಮಲಗಿಕೊಳ್ಳತಕ್ಕ ಮಂತ್ರಿಗಳು ನಮ್ಮಲ್ಲಿ ಬೇಡ.

ಶ್ರೀ ಜಿ.ಎಸ್. ಶಿವನಂಜಪ್ಪ.—ಪಾಟೀಲ್ ನಾಗರಾಜ್‌ರವರೆ, ಈಗ ನೀವು ಚುನಾವಣೆಯಲ್ಲಿ ಗೆದ್ದು ಬಂದಿದ್ದರಿಂದ ಈ ಪರಿಸ್ಥಿತಿ ಆಯಿತೊ ಅಂದರೆ ನೀವು ಬಾರದಿದ್ದರಿಂದ ಈ ರೀತಿ ಆಯಿತೊ ಅಥವಾ ಮೊದಲಿನಿಂದಲೂ ಈರೀತಿ ಇತ್ತೋ.

ಶ್ರೀ ಪಾಟೀಲ್ ನಾಗರಾಜ್.—ಹಿಂದೆ ನಾನೂ ಇದ್ದೆ. ನೀವು ಇದ್ದಿರಿ, ನೋಡಿದ್ದೀರಿ ಹಿಂದೆ ೧೯೬೭ರಲ್ಲಿ ನಾನು ಇದ್ದಿದ್ದು ಆಯಿತು, ೧೯೭೨ರಲ್ಲಿ ಇದ್ದು ಪೋಲೀಸ್ ಇಲಾಖೆಯ ಪರಿಸ್ಥಿತಿ ಏನು ಎಂದು ನೋಡಿದ್ದೇವೆ. ಈ ಘಟನೆ ನಡೆದಮೇಲೆ ಮಾನ್ಯ ವೀರೇಂದ್ರ ಪಾಟೀಲರು ತಕ್ಷಣ ಹೋದರು, ಅಲ್ಲಿ ಪರಿಸ್ಥಿತಿಯನ್ನು ನೋಡಿದರು. ಅದು ಅವರ ಜಿಲ್ಲೆ ಅಲ್ಲಿ ಹೋಗಿ ನೋಡಿದರು, ಪರಿಹಾರವನ್ನು ಹೇಳಿದರು. ಪರಿಹಾರದಿಂದ ಈ ಸಮಸ್ಯೆಯನ್ನು ಬಗೆಹರಿಸತಕ್ಕದಲ್ಲ. ಆಡಳಿತದಲ್ಲಿ ಒಂದು ದಕ್ಷತೆ ಬರಬೇಕು. ಇವತ್ತು ಆಡಳಿತದಲ್ಲಿ ದಕ್ಷತೆ ಕಾಣುತ್ತಾ ಇಲ್ಲ. ಮಾನ್ಯ ವೀರೇಂದ್ರ ಪಾಟೀಲರು ಈ ರಾಜ್ಯ ದಲ್ಲಿ ಮುಖ್ಯಮಂತ್ರಿ ಆದಾಗ, ಒಬ್ಬ ಒಳ್ಳೆಯ, ದಕ್ಷ ಆಡಳಿತಗಾರ ಇಲ್ಲಿ ಮುಖ್ಯಮಂತ್ರಿ ಆಗಿದ್ದಾರೆ ಎಂದು ನಾನು ಅಂದುಕೊಂಡೆ. ಆದರೆ ಒಂದು ತಿಂಗಳಿಂದ ಒಂದು ತರಹ ರಾಜ್ಯಪಾಲರ ಆಡಳಿತ ನಡೆದ ಹಾಗೆ ನಡೆಯುತ್ತಿದೆ, ಇಲ್ಲಿ ಏನೂ ಕೆಲಸಗಳು ಆಗುತ್ತಾ **ಇಲ್ಲ**. ಏನೋ ಒಂದು ತರಹ ಮುಗಿಲು ಮುಚ್ಚಿದಹಾಗೆ, ಏನೂ ಒಂದು ಕಗ್ಗತ್ತಲು ಕಣ್ಣಿಗೆ ಕಾಣುತ್ತಾ ಇದೆ. ನಮ್ಮಲ್ಲಿ ಏನು ನಡೆಯುತ್ತಾ ಇದೆಯೋ, ಯಾರು ಎಲ್ಲಿದ್ದಾರೋ ಏನು ಈ ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿ ಬರಬಾರದು. ಅನೇಕ ಮಂತ್ರಿಗಳಿಗೆ ಸಂದರ್ಶನಕ್ಕೆ ಜನಗಳೇ ಇರುವುದಿಲ್ಲ ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿ ನೋಡಿದ್ದೇನೆ. ಕೆಲವು ಮಂತ್ರಿಗಳನ್ನು ನೋಡುವುದಕ್ಕೆ ಜನಗಳೇ ಬರುವುದಿಲ್ಲ. ಈ ಪರಿಸ್ಥಿತಿ ನಿರ್ಮಾಣ ವಾಗಿದೆ, ಈ ಪರಿಸ್ಥಿತಿ ನಿರ್ಮಾಣವಾಗಬಾರದು

ಶ್ರೀ ಎಂ. ಮಹದೇವ್.—ಒಂದು ಸಣ್ಣ ಸಂಸ್ಥೆಯನ್ನು ಸರಿಪಡಿಸಬೇಕಾದರೆ ೨-೩ ವರ್ಷ ಬೇಕಾಗುತ್ತದೆ. ಇಡೀ ದೊಡ್ಡ ರಾಜ್ಯದ ವ್ಯವಸ್ಥೆಯನ್ನು ೪೫ ದಿವಸಗಳಲ್ಲಿ ಬದಲಾವಣೆ ಮಾಡುವ ತೀರ್ಮಾನಕ್ಕೆ ಬರುವುದಕ್ಕಾಗುತ್ತದೆಯೇ, ಟೈಂ ಕೊಡಿ, ಒಳ್ಳೆಯ ದಕ್ಷ ಮುಖ್ಯಮಂತ್ರಿಗಳಿದ್ದಾರೆ, ಆರೋಗ್ಯವಂತ ಮಂತ್ರಿಗಳಿದ್ದಾರೆ, ಆರೋಗ್ಯವಂತ ಸರ್ಕಾರ ಇದೆ, ಸ್ವಲ್ಪ ಅವಕಾಶಕೊಡಿ.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳ ಬಗ್ಗೆ ನನಗೆ ಗೌರವ ಇದೆ. ಅವರು ಮುಖ್ಯಮಂತ್ರಿಗಳು ಆಗುತ್ತಾರೆ ಎಂದಾಗಲಿ ಈ ರಾಜ್ಯಕ್ಕೆ ಒಳ್ಳೆಯ ಆಡಳಿತ ಕೊಡುತ್ತಾರೆ ಎಂದು ಅಂದುಕೊಂಡಿದ್ದೇನೆ. ಅವರ ಆಡಳಿತ ನೋಡುತ್ತಾ ಇದ್ದೇನೆ. ಅವರಿಗೆ ಆಡಳಿತ ನಡೆಸುವುದಕ್ಕೆ ಶಕ್ತಿ ಇದೆ, ಏಕೋ ಆ ಶಕ್ತಿಯನ್ನು ಯಾರಾರೂ ಎಳೆಯುತ್ತಾ ಇದ್ದಾರೇನೊ ನನಗೆ ಗೊತ್ತಿಲ್ಲ. ಅವರಲ್ಲಿ ಏನು ಗುಂಪು ಆಗಿದೆಯೋ, ಯಾರ್ಯಾರು ಮಂತ್ರಿಗಳಾಗಬೇಕು ಎಂದು ಇವರ ವಿರುದ್ಧವಾಗಿ ನಿಂತಿದ್ದಾರೊ ನನಗಂತೂ ಗೊತ್ತಾಗುತ್ತಿಲ್ಲ, ಅವರ ಮನಸ್ಸಿನ ನೋವು, ಗೊಂದಲ ಅವರಿಗೇ ಅರ್ಥವಾಗುತ್ತದೆ. ಇದರಿಂದ ನಾನು ಏನು ಅರ್ಥಮಾಡಿಕೊಳ್ಳಬಲ್ಲೆ ಎಂದರೆ, ಮೇಲುನೋಟಕ್ಕೆ ಅವರ ಆಡಳಿತ ಸ್ವಲ್ಪ ಅಷ್ಟು ಸರಿಯಾಗಿ ನಡೆಯುತ್ತಾ ಇಲ್ಲವಲ್ಲ, ವೀರೇಂದ್ರ ಪಾಟೀಲರ ಸರ್ಕಾರ ಅಂದರೆ ಒಂದು ಹೆಸರು ಹಿಂದೆ ಬಂದಿತ್ತು. ಈ ರಾಜ್ಯದಲ್ಲಿ ವೀರೇಂದ್ರ ಪಾಟೀಲರು ಒಳ್ಳೆಯ ದಕ್ಷ ಯೋಗ್ಯವಾದ ಆಡಳಿತ ಕೊಟ್ಟಿದ್ದರು ಎಂದು ಹೆಸರು ಬಂದಿತ್ತು. ಆದರೆ ಏಕೋ ಈಗ ರಾಯರ ಕೆಂದುರೆ ಬರಬರುತ್ತಾ ಅದನ್ನು ಹೇಳಬಾರದು, ಈ ಮಟ್ಟಕ್ಕೆ ಇಳಿಯಿತಲ್ಲ ಎಂದು ನನಗೆ ಬಹಳ ನೋವಾಗುತ್ತದೆ. ಎರಡು ತಿಂಗಳಿನಿಂದ ನಾನು ಇದನ್ನು ನೋಡುತ್ತಾ ಇದ್ದೇನೆ. ಅವರು ಬಹಳ ಗೊಂದಲದಲ್ಲಿ ಸಿಕ್ಕಿದ್ದಾರೆ. ನಾನು ಎರಡು, ಮೂರು ಸಾರಿ ಅವರನ್ನು ಭೇಟಿ ಮಾಡಿದ್ದೆ. ಆಗ ಅವರಲ್ಲಿ ಅಷ್ಟು ನಗು ಮುಖ ಇರಲಿಲ್ಲ, ಅವರ ಮನಸ್ಸಿನಲ್ಲಿ ಏನೋ ನೋವು ಇರಬಹುದು ಎಂದು ಅನ್ನಿಸಿತು. ಅವರಿಗೆ ಏನು ನೋವು ಇದೆಯೋ ನನಗೆ ಗೊತ್ತಿಲ್ಲ. ಎಷ್ಟು ಜನ ಮಂತ್ರಿಗಳು ಆಗಬೇಕೆಂದು ಇವರನ್ನು ಎತ್ತಿಕಟ್ಟುತ್ತಿದ್ದಾರೊ, ಅಂತೂ ಇವರು ಕೆಳಗೆ ಇಳಿಯಬೇಕೆಂದು ಒಂದು ಗುಂಪು ಕೆಲಸ ಮಾಡುತ್ತಿದೆ. ಏನೇನಿದೆಯೊ ನನಗಂತೂ ಗೊತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಆ ವಿಷಯಕ್ಕೆ ಇದು ಸಂಬಂಧವೇ ಇಲ್ಲ, ಏಕೆ ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ಎಂ. ಮಹದೇವ್.—ಆರೋಗ್ಯವಾಗಿರತಕ್ಕ ಸರ್ಕಾರವನ್ನು ಅನಾರೋಗ್ಯ ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ನಾನು ಆರೋಗ್ಯವಾಗಿದ್ದರೆ ಚೆನ್ನಾಗಿ ಮಾತನಾಡಬಹುದು. ನಾನು ಮಲಗಿದ್ದರೆ ಏನು ಮಾತನಾಡುವುದಕ್ಕೆ ಸಾಧ್ಯ. ದಕ್ಷ ಆಡಳಿತ ಬರಬೇಕಾದರೆ, ಆಡಳಿತ ಪಕ್ಷದಲ್ಲಿರತಕ್ಕ ಎಲ್ಲರೂ ಒಗ್ಗಟ್ಟಿನಿಂದ, ಒಮ್ಮತದಿಂದ ಇವರಿಗೆ ಬೆಂಬಲ ಕೊಟ್ಟರೆ ಮಾತ್ರ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯ. ಅದನ್ನು ಬಿಟ್ಟು ಇವತ್ತು ವೀರೇಂದ್ರಪಾಟೀಲರನ್ನು ತೆಗೆದು ಬೇರೆ ಲೀಡರುಗಳನ್ನು ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಒಂದು ರೀತಿಯ ಗೊಂದಲದಲ್ಲಿ ಅವರು ಸಿಕ್ಕಿದರೆ ಬಹುಶಃ ರಾಜ್ಯದ ಆಡಳಿತ ಅತ್ಯಂತ ಕ್ಷೀಣವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಒಂದೇ ತಿಂಗಳು ಇರಲಿ, ಒಂದು ವರ್ಷವೇ ಇರಲಿ ಅವರು ದಕ್ಷತೆಯಿಂದ ಆಡಳಿತ ನಡೆಸಬೇಕು. ಕಳೆದ ಎರಡು ತಿಂಗಳಿಂದ ಯಾವ ಕೆಲಸವು ನಡೆಯುತ್ತಿಲ್ಲ. ಸಂಪೂರ್ಣವಾಗಿ ನಿದ್ರಾವಸ್ಥೆಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಶಾಸನಸಭೆಗೆ ಬಂದಾಗ ಸುಂದರವಾದ ಭಾಷಣ ಮಾಡುತ್ತಾರೆ. ಅವರು ಹಿಂದೆ ೧೯೬೮-೭೧ರಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಕೂಡ ನಾವು ನೋಡಿದ್ದೇವೆ ಬಹಳ ಸುಲಲಿತವಾಗಿ, ಸುಂದರವಾಗಿ ಎಲ್ಲರೂ ಒಪ್ಪತಕ್ಕಂಥ ಮಾತನ್ನು ಆಡುವುದರಲ್ಲಿ ಅವರು ನಿಸ್ಸೀಮರು. ಮತ್ತು ಆಡಳಿತವನ್ನು ಚೆನ್ನಾಗಿ ನಡೆಸಿದ್ದಾರೆ

ಶ್ರೀ ಆರ್. ದಯಾನಂದರಾವ್.—ಮಾನ್ಯ ವಾಟಾಳ್ ನಾಗರಾಜ್‌ರವರು ಸಬ್ಜೆಕ್ಟ್ ಬಿಟ್ಟು ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ತಾವು ಎದ್ದಿದ್ದು ಬಹಳ ಸಂತೋಷ, ತಮಗೆ ಅಭಿನಂದನೆಗಳು. ತಮ್ಮ ಕಡೆ ಶಿಭಾಗ ಬಿಟ್ಟರೆ ಮಿಕ್ಕವರು ಏಳುವವರೆ ಇಲ್ಲ.

ಶ್ರೀ ಕೆ. ಶಿವಮೂರ್ತಿ.—ವಾಟಾಳ್ ನಾಗರಾಜ್‌ರವರು ಎದ್ದರೆ ನಾವುಗಳೆಲ್ಲಾ ಕುಳಿತು ಬಿಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅವರ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ. ಮಾನ್ಯ ವೀರೇಂದ್ರ ಪಾಟೀಲರು ಬಾಯಿಬಿಟ್ಟು ಹೇಳುತ್ತಾ ಇಲ್ಲ. ಇರಲಿ ಇವತ್ತು ಪೋಲೀಸ್ ಇಲಾಖೆಯ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳವರೂ ಸೇರಿ ಒಂದು ವಿಚಾರಸಂಕಿರಣವನ್ನು ನಡೆಸಿ ರಾಜ್ಯದ ಆಡಳಿತ ಪೋಲೀಸ್ ಇಲಾಖೆ ದಕ್ಷತೆಯಿಂದ ನಡೆಯಬೇಕೆಂದು ನಾವು ತೀರ್ಮಾನ ಮಾಡದೇ ಹೋದರೆ, ಇಂಥ ಅನಾಹುತಗಳು ಬಹುಶಃ ಪ್ರತಿದಿವಸ ನಡೆಯುತ್ತಿರುತ್ತವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಇಲಾಖೆಯ ಬದಲಾವಣೆಯನ್ನು ಅತಿ ಶೀಘ್ರವಾಗಿ ಮಾಡಬೇಕು. ಮತ್ತೆ ಯಾವುದೋ ಓಬೀರಾಯನ ಕಾಲದ ಲಾಕಪ್‌ಗಳು ಇರುವುದನ್ನು ಇವತ್ತಿಗೂ ನೋಡಬಹುದು. ಮಾನ್ಯ ಮುಖ್ಯಮಂತ್ರಿಗಳು ನೋಡಿದ್ದಾರೊ ಇಲ್ಲವೋ ಗೊತ್ತಿಲ್ಲ. ನಾನಂತೂ ನೋಡಿದ್ದೇನೆ ಕಾಗೋಡು ತಿಮ್ಮಪ್ಪನವರು ನೋಡಿದ್ದಾರೆ, ಬಹುಶಃ ಅವರು ಗೋಪಾಲಗೌಡರ ಜೊತೆಯಲ್ಲಿ ಲಾಕಪ್‌ಗೆ ಹೋಗಿದ್ದಾರೆ. ಅದರ ಬಗ್ಗೆ ನಾವೇನೂ ವಿಶ್ಲೇಷಣೆ ಮಾಡಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಪೋಲೀಸ್ ಇಲಾಖೆಗೆ ಚಿಕಿತ್ಸೆ ನೀಡುವ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟಂತೆ ಕಾಣುತ್ತದೆ. ವಿಷಯವನ್ನು ಬಿಟ್ಟು ಬೇರೆಕಡೆ ಮಾತನಾಡುತ್ತಿದ್ದಾರೆ. ಗಾಡಿ ಯಾವ ಕಡೆ ಹೋಗುತ್ತಿದೆ ಎಂದು ನಿರೀಕ್ಷೆ ಮಾಡುವುದು ಕಷ್ಟವಾಗುತ್ತಿದೆ ದಯವಿಟ್ಟು ಅವರು ವಿಷಯಕ್ಕೆ ಸೀಮಿತಗೊಳಿಸಲಿ ಎನ್ನುವುದು ನನ್ನ ಅನಿಸಿಕೆ.

ಶ್ರೀ ವಾಟಾಳ್ ನಾಗರಾಜ್.—ನಾವು ಸಲೀಸಾಗಿ ಹೋಗುವುದಕ್ಕೆ ನೋಡುತ್ತಿದ್ದೇವೆ. ಆದರೆ, ಆಡಳಿತದ ವಾಹನ ಮುರಿದು ಬಿದ್ದಿದೆ. ಆದಕ್ಕೆ ಕೂಡಲೇ ಟೈರ್ ಮತ್ತು ಸ್ಟೇರಿಂಗ್ ಹಾಕಿ ಸರಿಪಡಿಸಿ, ಸುಂದರವಾಗಿ ಮಾಡಿ.

೨-೧೦ ಪಿ. ಎಂ.

ಅಧ್ಯಕ್ಷರೆ, ಪೋಲೀಸ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ಶ್ರೀಮದ್ ರಮಾ ರಮಣ ಗೋವಿಂದಾ, ಗೋವಿಂದ ಎಂದು ಹೇಳಬೇಕಾಗುತ್ತದೆ. ಇವೊತ್ತು ಪೋಲೀಸ್ ಇಲಾಖೆ ಕುಲಗೆಟ್ಟಿದೆ ಇದರ ಬಗ್ಗೆ ಯಾರೊಬ್ಬರೂ ಒಬ್ಬರ ಮುಖ ಒಬ್ಬರು ನೋಡತಕ್ಕದ್ದಲ್ಲ. ಇದನ್ನು ಈ ರಾಜ್ಯದಲ್ಲಿ

ಎಲ್ಲಾ ಪಕ್ಷದವರೂ ಒಪ್ಪಿಕೊಳ್ಳಬೇಕು. ಇದು ಒಂದು ಗೊಂದಲದಲ್ಲಿ ಸಿಕ್ಕಿದೆ. ಆಡಳಿತ ಕುಲಗೆಟ್ಟಿದೆ ಆದರಲ್ಲಿ ಏನೂ ಅನುಮಾನ ಪಟ್ಟುಕೊಳ್ಳಬೇಡಿ ಪೋಲೀಸ್ ಲಾಕಪ್‌ನಲ್ಲಿ ಆಗತಕ್ಕ ಸಾವು ಏನಿದೆ, ಇವು ನೂರಾರು ಸಾವುಗಳು ಆಗುತ್ತವೆ. ಅಧ್ಯಕ್ಷರೆ, ಬೂಟ್ಸ್‌ನಲ್ಲಿ ಏಟು ಹೊಡೆದಿರಬೇಕಾದರೆ ತಾವು ಯೋಚನೆ ಮಾಡಬೇಕು. ಈ ರೀತಿ ಇರಬೇಕಾದರೆ ಅವರ ಆಡಳಿತ ಎಷ್ಟರಮಟ್ಟಿಗೆ ಸಂಗಮವಾಗಿದೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ತಾವು ಯಾವ ಯಾವ ಕಾರಣಗಳಿಂದ ಪೋಲೀಸ್ ಠಾಣೆಗೆ ಹೋಗಿದ್ದಿರಿ ಎನ್ನುವುದನ್ನು ಹೇಳುತ್ತೀರಾ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇವರು ಹುಟ್ಟಿದಾಗಿನಿಂದಲೇ ನನಗೆ ಜೈಲಿಗೆ ಹಾಕಿದ್ದಾರೆ ಆ ಕಾರಣ ಹೇಳುವುದಕ್ಕೆ ಟೈಂ ಸಾಕಾಗುವುದಿಲ್ಲ ನೀವು ಬೇರೆ ದಿವಸ ಸಿಕ್ಕಿದರೆ ನಿಮಗೆ ಒಂದು ಪಟ್ಟಿ ಕೊಡುತ್ತೇನೆ. ಇವರು ಪತ್ರಿಕೆಗಳನ್ನು ಓದುತ್ತಿದ್ದಾರೋ ಇಲ್ಲವೊ ಗೊತ್ತಿಲ್ಲ. ಈ ದೇಶವನ್ನು ಬಿಟ್ಟು ಹೋಗಿದ್ದರೋ ಗೊತ್ತಿಲ್ಲ. ಈ ರಾಜ್ಯದ ನಾಲ್ಕು ಕೋಟಿ ಕನ್ನಡಿಗರಿಗೆ ಗೊತ್ತಿರುವ ರೀತಿ, ಈ ರಾಜ್ಯಕ್ಕಾಗಿ, ಜನಕ್ಕಾಗಿ, ನಾಡಿಗಾಡಿ. ನೀತಿಗಾಗಿ ನಿರ್ಧಾರಕ್ಕಾಗಿ, ಇವರು ಮಾಡತಕ್ಕಂಥ ಅನ್ಯಾಯಕ್ಕಾಗಿ ಅನೇಕಸಾರಿ ನಾನು ಹೋರಾಟ ಮಾಡಿದ್ದೇನೆ. ಜೈಲಿಗೆ ಹೋಗಿದ್ದೇನೆ. ನಾನು ಕಳ್ಳತನದಿಂದ, ದರೋಡೆಯಿಂದ ಜೈಲಿಗೆ ಹೋಗಿಲ್ಲ. ನಿಮ್ಮಲ್ಲಿ ಆ ರೀತಿ ಯಾರಾದರೂ ಇದ್ದರೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ನಾನು ದರೋಡೆ ಮಾಡಿ ಜೈಲಿಗೆ ಹೋಗಲಿಲ್ಲ. ಗಂಧದ ಎಣ್ಣೆ ವಿಚಾರದಲ್ಲಿ ಹೋಗಲಿಲ್ಲ ಚಾಕು, ಚೂರಿ ಸಂಸ್ಕೃತಿಯಲ್ಲಿ ಜೈಲಿಗೆ ಹೋಗಲಿಲ್ಲ. ನಮ್ಮ ನೀತಿಯ ಪ್ರಕಾರ ಅನ್ಯಾಯದ ವಿರುದ್ಧ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಿದ್ದೇವೆ. ನಾವು ನ್ಯಾಯಕ್ಕಾಗಿ ಹೋರಾಟ ಮಾಡಿ ಜೈಲಿಗೆ ಹೋಗಿರುವುದು ಇಡೀ ದೇಶಕ್ಕೆ ಗೊತ್ತಿದೆ, ಇಡೀ ನಾಡಿಗೆ ಗೊತ್ತಿದೆ. ನಮ್ಮಲ್ಲಿ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಇದ್ದರು. ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮಲ್ಲಿ ಇದ್ದಾಗ ಒಂದು ಧ್ವನಿ ಆ ಕಡೆ ಹೋದಾಗ ಒಂದು ಧ್ವನಿ ತಿಮ್ಮಪ್ಪನವರೆ, ನಿಮಗೆ ಮಂತ್ರಿ ಪದವಿ ಕೊಡುತ್ತಾರೊ ಇಲ್ಲವೋ ನನಗೆ ಅನುಮಾನ ಬಂದಿದೆ. ಮಂತ್ರಿ ಪದವಿ ಕೊಡಲಿಲ್ಲ ಅಂದರೆ ಅನಂತರ ನಮ್ಮ ಕಡೆ ಬರಬಹುದು. ಮಂತ್ರಿಗಳಾಗುವವರು ಎಲ್ಲರೂ ಇಲ್ಲೇ ಕುಳಿತು ಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಕುಳಿತುಕೊಂಡಿದ್ದರೆ ಇಲ್ಲಿ ಎಲ್ಲರೂ ಕುಳಿತಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಎದ್ದು ಹೊರಗಡೆ ಹೋದರೆ ಇಲ್ಲಿ ಇಪ್ಪತ್ತು ಜನರು ಇರುವುದಿಲ್ಲ. ಅವರು ಅದೇನು ಆಕರ್ಷಣೆಯನ್ನು ಇಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ. ನಿನ್ನೆ ೩ು ದಿವಸ ಇಲ್ಲಿ ಇಷ್ಟು ಜನರು ಇರಲೇ ಇಲ್ಲ. ಇವತ್ತು ತಾವು ಇಲ್ಲಿ ಇರುವುದರಿಂದ ಎಲ್ಲರೂ ಇಲ್ಲಿಯೇ ಕುಳಿತಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಸದಸ್ಯರು ಇಲ್ಲಿ ಕುಳಿತುಕೊಳ್ಳತಕ್ಕಂಥ ಪಾಠ ಹೇಳಿ ಕಲಿಸಬೇಕು. ಏಕೆಂದರೆ, ೧೭೭ ಜನ ಬಂದಿರುವುದರಿಂದ ಇದು ಅಗತ್ಯ ಇದೆ.

ಶ್ರೀ ಟಿ.ಎಂ. ಮಂಜುನಾಥ್.—ತಾವು ಯಾವರೀತಿ ಜನರ ಪ್ರೀತಿ, ವಿಶ್ವಾಸ ಗಳಿಸಿ ಬಂದಿದ್ದೀರೊ ಅದೇ ರೀತಿ ನಾವೂ ಸಹಿತ ಬಂದಿದ್ದೇವೆ. ಸದಸ್ಯರನ್ನು ಏನೋ ಬಂದಿದ್ದಾರೆಂದು ಹೇಳುವುದು ಸರಿಯಲ್ಲ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಿದ್ದೀರಿ. ತಾವು ಸ್ಪಷ್ಟವಾಗಿ ವಿಚಾರಗಳನ್ನು ತಿಳಿಸಿ ಹೆಸರು ತೆಗೆದುಕೊಳ್ಳಬೇಕು.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ ಅನ್ಯಾಯದ ವಿರುದ್ಧ ಹೋರಾಟ ಮಾಡಿ ಪೋಲೀಸ್ ಸ್ಟೇಷನ್ನಿಗೆ ಹೋಗಿದ್ದೇನೆಂದು ಮಾನ್ಯ ಸದಸ್ಯರು ಹೇಳಿದರು. ಯಾವ ಅನ್ಯಾಯದ ವಿರುದ್ಧ ಎಂದು ಅವರು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಂದರೆ ಶಿವಮೂರ್ತಿಯವರು ಎಂದು ಹೆಸರು ಹೇಳಲಿಲ್ಲ.

ಶ್ರೀ ಕೆ. ಶಿವಮೂರ್ತಿ.—ತಮಗೆ ಹಿಂದೆ ನಾವು ಪೇಟ ಹಾಕಲಿಲ್ಲವೆ ?

ಶ್ರೀ ವಾಟಾಳ್ ನಾಗರಾಜ್.—ತಮಗೆ ಪೇಟ, ಟೋಪಿ ಒಂದೂ ಗೊತ್ತಿಲ್ಲ, ದಯಮಾಡಿ ಕುಳಿತು ಕೊಳ್ಳಿ. ತಾವು ಹೇಗೋ ಬಂದಿದ್ದೀರಿ ಎನ್ನುವ ಪ್ರಶ್ನೆ ಇಷ್ಟೆ. ಹಿಂದೆ ಮಾನ್ಯ ದೇವರಾಜ ಅರಸರ ಸರ್ಕಾರ ಇಲ್ಲಿ ಬಂದಾಗ ಒಂದು ಮಾತನ್ನು ನಾನು ಹೇಳಿದ್ದೆ ಹಿಂದಿನ ಮುಖ್ಯ ಮಂತ್ರಿ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮತಿ ಇಂದಿರಾಗಾಂಧಿಯವರು ಒಂದಾಗಿದ್ದರೆ ನೀವು ಯಾರೂ ಇಲ್ಲಿ ಬರಲಿಕ್ಕೆ ಆಗುತ್ತಿರಲಿಲ್ಲ.

(ಗೊಂದಲ)

MR. CHAIRMAN.—Mr, Vatal Nagaraj You are always speaking out of the point. ದಯಮಾಡಿ ವಿಷಯದ ಮೇಲೆ ಮಾತನಾಡಿ. ಇಷ್ಟರವರೆಗೆ ಬಹಳ ಚೆನ್ನಾಗಿ ಮಾತನಾಡಿದ್ದೀರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಪಕ್ಷದ ವಿಚಾರ ಇಲ್ಲಿ ಮಾತನಾಡಲಿಕ್ಕೆ ಅವಕಾಶ ಇಲ್ಲ. ಅವರು ದಾರಿ ತಪ್ಪಿ ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇವತ್ತು ಇವರು ೧೭೭ ಜನ ಬರಬೇಕಾದರೆ ಹೆಗಡೆ ಮತ್ತು ದೇವೇಗೌಡ ಇಬ್ಬರೂ ಕಿತ್ತಾಡದಿದ್ದರೆ ನೀವು ೧೭೭ ಸೀಟು ಬರುವುದಕ್ಕೆ ಆಗುತ್ತಿರಲಿಲ್ಲ. ದೇವೇಗೌಡರನ್ನು......

(ಗೊಂದಲ)

ಶ್ರೀ ಆರ್. ದಯಾನಂದ ರಾವ್.—ಈಗ ನೀವು ಬಂದಿರುವುದು ಏತಕ್ಕೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನನಗೆ ದೃಷ್ಟಿ ಬಹಳ ಚೆನ್ನಾಗಿದೆ ಈಗ ಹೊಸದಾಗಿ ನಾನು ದೃಷ್ಟಿ ತೋರಿಸಿಕೊಳ್ಳಬೇಕಾಗಿಲ್ಲ.

ಚೇರ್ಮನ್.—ದಯಮಾಡಿ ಯಾರೂ ಮಧ್ಯೆ ಇಂಟರಪ್ಟ್ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಪಕ್ಷ ಒತ್ತಡಕ್ಕೆ ಮಣಿಯದೆ ಪೋಲೀಸ್ ಇಲಾಖೆಗೆ ಸಮಗ್ರವಾದಂತಹ ಕಾಯಕಲ್ಪ ಮಾಡತಕ್ಕಂಥಾದ್ದು ಅತಿ ಮುಖ್ಯ. ಇದನ್ನು ಆದಷ್ಟು ಬೇಗ ಮಾಡಬೇಕಾಗಿದೆ. ಲಾಕಪ್‌ನಲ್ಲಿ ಸತ್ತಿರುವ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಸರಿಯಾದಂತಹ ಶಿಕ್ಷೆ ವಿಧಿಸಬೇಕಾದುದು ಸರ್ಕಾರದ ಕರ್ತವ್ಯ. ನೀವು ಕೊಟ್ಟಿರುವ ೨೦ ಸಾವಿರ ರೂಪಾಯಿ ಪರಿಹಾರ ಏನು ಇದೆ ಇದು ಸರಿಯಲ್ಲ ೨೦ ಸಾವಿರದಲ್ಲಿ ಇದು ಮುಗಿಯುವುದಿಲ್ಲ. ಅಲ್ಲಿ ಸತ್ತಿರುವವನು ಒಬ್ಬ ರಾಜಕೀಯ ಧುರೀಣ ಯುವ ಕಾಂಗ್ರೆಸ್ಸಿನ ಮುಖಂಡ. ಬರೀ ೨೦ ಸಾವಿರ ರೂಪಾಯಿ ನೀಡಿದರೆ ಅದು ಪರಿಹಾರವಾಗುವುದಿಲ್ಲ. ಕನಿಷ್ಟ ಅವನ ಪರಿಹಾರಕ್ಕೆ ಅಂದರೆ ಆತನ ಹೆಂಡತಿ ಮಕ್ಕಳಿಗೆ ಏನೇನು ಬೇಕು, ಮನೆ ಇಲ್ಲದಿದ್ದರೆ ಮನೆ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಡುವ ಬಗ್ಗೆ ಸರಕಾರ ಆಲೋಚನೆ ಮಾಡಬೇಕು ಎಂದು ಮನವಿ ಮಾಡುತ್ತಾ, ಪೋಲೀಸ್ ಇಲಾಖೆಯ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು. ಈ ದುರಂತದ ಬಗ್ಗೆ ಭಯ ಭೀತಿಯನ್ನು ಹುಟ್ಟಿಸಿಗ ತಕ್ಕಂತ ವೀರಪ್ಪನ್ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ, ಆತನನ್ನು ಯಾವತ್ತು ಬಂಧಿಸಬಹುದು, ಆತನನ್ನು ಬಂಧಿಸುವುದಕ್ಕೆ ಸರಕಾರಕ್ಕೆ ಸಾಧ್ಯವೇ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂದು ನಾನು ಮನವಿ ಮಾಡಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

† SRI QUMURUL ISLAM (Gulbarga). — Mr, Speaker. there is a saying that bagun is half done. But, most unfortunate thing is that this Government has begun with deaths in lock-ups and within a span of 15 days there was a death in Shababad lock-up, then Gulbarga, and then Ballary and then in this 15 to 20 days' period in Chintamani, in Aurad and also in Bidar there was a stabbing incident two innocent persons inBidar, were stabbed and now they are in the hospital. Why this situation arises? Why the political atrocities started in this Government? I belong to Gulbarga. When the incident took place on that day I was not there. The very next day I reached Gulbarga from Bombay and I got own source of information

and there is a difference between the deaths in Bellary, Shahbad and Gulbarga. I wanted to know the situation which led to firing after the death of Mallikarjun, who was the worker of the Youth Congress-I. Who along with his friends was brought by the PSI from the premises of Venkateshwara Bar and he alongwith his four other members will taken into custody. He was arrested at 7.30 p.m. and then he was sent to the hospital at about 9.30 p.m. There is a report which I have gone through with the help of the District surgeon. He said that he was heavily drunk but not intoxicated. Then again he was brouught back to the police station. His cousin Mallikarjuna, who was also one of the co-accused was also there. The other three were released on bail. but these two were not released because nobody came forward to give surety. At about 2.30 A.M. he felt some chest pain and had vomiting and motion. Then he was taken to the hospital at about 2.30 A.M. by the Head Constable and as per the statement of the District Surgeon and the hospital authorities, they say, injections were given. I have got details here as to what type of injections were given. I don't want to go into those details now. He had breathing problem and during the treatment he died. Then his body was sent to mortuary. Now, the issue is, whether the police officials have beaten him in the police custody or because he was a Youth Congress (I) worker, a rumour was spread that the police hed beaten him and the situation become violent because of the rumore, You know, a rumour or a confusion will also bring a situation which is not controllable. In the firing, 9 persons got bullet injuries, three innocent people died and seven others were injured seriously.

I welcome the Judicial Inquiry. I agree because I was the man who demanded for it at the peace meeting held by the Deputy Commissioner, but before that there was only inquiry by the Sub-Divisional Magistrate. The inquiry should bring the culprit to book and whoever he may be the culprit should be punished. That is why there should be an inquiry The inquiry should not be an eye-wash and giving a report after four or five years will not serve the purpose. The inquiry report has to come within the stipulated time. The inquiry should also cover the very important issue whether there was spontaneous reaction of the people against the police or whether it was instigated by some persons who do not want peace in the city. When fixing the terms of reference for the judicial inquiry I request that all those points should be included.

Sir, according to the information which I have got, the D.G was on tour to Raichur and the regular Superintendent of Police, who was not in Gulbarga, was on leave. The DCP, DIG and DC were informed. An inquest was done and a report has come to the Additional Superintendent of police saying that there is no mark on the body. At about 8.30 A.M. few relatives of the accused came

and asked whether a case was registered and what action had been taken. It seems thas the incharge SP told them that he had already r quested the District Magistrate to order for a magisterial inquiry and that the incharge Sub-Inspector would be suspended. In another two hours i.e., at about 10 O' clock some important leaders and personalities started gathering. At he same time the Assistant Commissioner, whose name is also Mallu, on the direction of the Deputy Com-missioner, arrived at Brahmpur police Station and was takingthe statement. According to the earlier statement before the S.I. given by the co-accused, Sri Mallikarjun, who is the cousin of the person died, the person died was feeling chest pain and all that. But later, when the Asst. Commissioner and the SP talked to the co-accused separately, the co-accused changed his statement. He said the victim was beaten in the police custody and all those charges are there. Now. why there is difference and why there are two versions? Samething has happened at 11 O'clock. If you see the register of the Government General Hospital you will find that twice he was brought. But is it not a fact that it has to be inquired into? There was a pressure by about 200 to 300 violent mob forcing the concerned doctor to say, ' what you have said is wrong and what we have to say, you have to say, Otherwise, your life is is in danger." He was physically beaten. The District Surgeon was also shivering. There was one more statement taken by the violent mob in the hospital, and that was the situation when the Deputy Commissioner went there he was beaten and his car was also burnt.

There is a procedure for post-mortem in the hospital. Post-mortem is done turnwise, by the doctor who is on duty. But the mob was naturally agtainsted. They have no faith in the police and the doctor. Why they lost faith ? Whether it is by instigation or by confusion, is a different issue. But at that time the people who were there they lost faith in the hospital administration and also the police. Then they wanted to take another doctor from medical college and one doctor Sri S. S. Patil did the post-mortem. When the inquest was going on, from among the agitators one Mr. Heeranna Kalaganchi said that he was one of the signatories and he came to know that there was not a single mark or external mark on the dead body. The post-mortem report also said that there was no external or internal mark on the body.

We came to the Brahmpur police station at about 11.30. Is it a fact that a certatn leader delivered the speech on the request of the S.P. ? That has to be noted because many people were there. If judicial enquiry is conducted, they are ready to give the statements. Here the situation was quite reverse. Instead of keeping the people in peace, speeches were made by some persons just to instigate and once they instigate, the situation becomes violent and it will be

nobody's control. I know what happened in Chintamani also. One MLA trirde to control the situation and I was told that this MLA, Sri. Chola Reddy has s ttled all the issues. But we don't know why the police came at 3 O' Clock. They started beating the people and brought the situation to worst. That is the charge on the police. Here the charge is, the leaders after delivering the speech were insisting that a case shauld be registered against the person for the murder under Section 302 IPC and that was agreed but by that time there was huge crowd gathered numbering more than 10,000. Nows the issue is and what I personally feel is, it is very nearer to the fac, that there is no co-ordination among the police afficers of the District. It is a fact that the Bharamapur police station which it situated at a distance of 50 feet, when there was a violence, the Police officers and Police constanbles of this Police Station were so helpless. Nobody has come forward for help. When the police station was burning, the Sentry left the police station without taking any efforts to save the situation. All this becasuse there is no unity in the police department, thev are having internal groups and in this process they left the innocent people to suffer. Is it the way of running the police administration in the district ? Because of lethargy on the part of the police, three innocent people have been killed about nine persons have been injured, three of them seriously injured and they are shifted to Hyderabad. Therefore, my appeal to the Government is that there should be specific terms of reference in resp ct of judicial inquiry. It should be – whether the Police authority had opened fire for self-defence ? If so, before they opened fire, whether they have resorted to lathi charge and it failed to control the mob. These specific matters have to be examined by the Judicial probe. I welcome the Judicial Inquiry ordered by the State Government but at the same time the Inquiry Commission should be asked to snbmit the report within a fixed time. As I said earlier, specific terms of reference be fixed for this Judicial Inquiry.

The second issue is with regard to relief given to the families of those who killed in the violence. Rs. 20,000/- is very less. It is a fact that innocent people in Punjab and Bihar have been killed and compensation is being paid by the respective Governments. But still what I feel is this Rs. 20 000 is not sufficient to improve their economic condition. Therefore, I appeal to the Chief Minister to raise the compensation amount to Rs. 1 lakh to the families of all those who killed in this police firing, and Rs. 25.000 to the person who are seriously injured and proportionately Rs. 10,000 and Rs 5,000 to other persons who have suffered minor injuries which will take quite a longtime for recoup. Then, the Hon'ble Chief Minister has agreed I think in MPs and MLAs meeting that one person in the family of the deceased would be given a job. I request the Hon'ble Chief Minister to see that immeidate orders are passed in this regard.

Then, as regards lock-up deaths in Bellary and Gulbarga as suggested by the Hon'ble Leader of the Opposition, even in those cases also a Judicial Inquiry should be ordered. I fully agree with the views of the Hon'ble Leader of the Opposition in this regard.

With these few words I thank the Chair and conclude.

† ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).— ಸನ್ಮಾನ್ಯ ಅಧ್ಯಕ್ಷರೆ, ಇಷ್ಟರವರೆಗೆ ಕೆಲವು ಘಟನೆಗಳ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಕೆಲವು ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದ್ದನ್ನೇ ನಾನು ಹೇಳುವುದಿಲ್ಲ. ಬೀದರ್. ಗುಲ್ಬರ್ಗ ಮತ್ತು ಶಹಬಾದ್ ಬಗ್ಗೆ ಕೆಲವು ವಿಶೇಷ ಘಟನೆಗಳನ್ನು ಹೇಳಿದರು, ಒಂದಂತೂ ನಿಜ. ವಿರೋಧಪಕ್ಷದ ನಾಯಕರು ಹೇಳಿದಂತೆ, ಅಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು, ಇಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಗುವುದಿಲ್ಲ ಎಂದರೆ ತಪ್ಪಾಗುತ್ತದೆ. ಅದೇ ಪ್ರಕಾರ ಎಲ್ಲಾ ಕಡೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಬೀದರ್‌ನಲ್ಲಿ ನಡೆದ ಘಟನೆಯನ್ನು ಯಾರೂ ವಿಚಾರಣೆ ಮಾಡಲಿಲ್ಲ. ಔರಾದ್‌ನಲ್ಲಿ ಆದ ಘಟನೆ ಬಗ್ಗೆ ಯಾರೂ ಕೇಳುವುದಕ್ಕೆ ಬರಲಿಲ್ಲ. ಇಷ್ಟು ತೊಂದರೆ ಆಗಿದ್ದರೂ ಅದರ ಬಗ್ಗೆ ವಿಚಾರಣೆ ಕೂಡ ಆಗಲಿಲ್ಲ. ೧೬–೧–೯೦ರಲ್ಲಿ, ಬೀದರ್‌ನಲ್ಲಿ ನಡೆದ ಘಟನೆ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಸಂಪೂರ್ಣವಾಗಿ ಕೊಟ್ಟಿದ್ದಾರೆ. ದರೋಡೆ, ಕೊಲೆ ಆಗಿದ್ದು ಅದರಿಂದ ಜನ ಭೀತಿ ಪಡುತ್ತಿದ್ದಾರೆ. ಅಲ್ಲಿ ಜೀವನ ಮಾಡುವುದೇ ಕಷ್ಟವಾಗಿದೆ. ಇಬ್ಬರಿಗೆ ಚಾಕು ಹಾಕಿದ್ದಾರೆ. ತೊಂದರೆ ಜಾಸ್ತಿಯಾಗಿ ಜನ ಓಡಾಡುವುದು ಬಹಳ ಕಷ್ಟವಾಗಿದೆ, ಹಿಂದೆ ಬೀದರ್‌ನಲ್ಲಿ ಕೊಲೆ ಆಯಿತು. ಈಗ ಮತ್ತೆ ಆಗಿದೆ. ಸಾಮಾನ್ಯ ಜನರು ತಿರುಗಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ, ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಿನ್ನೆ ವ್ಯಾನನ್ನು ದರೋಡೆ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ, ಹೀಗೆ ಪ್ರತಿಯೊಂದು ಕಡೆ ದರೋಡೆ, ಕೊಲೆ ನಡೆಯುತ್ತಿದೆ. ವಿಶೇಷ ಎಂದರೆ, ಭಾಲ್ಕಿಯಲ್ಲಿ ಒಬ್ಬರು ಹೊಳ್ಳ ಎಂಬ ವಕೀಲರಿದ್ದಾರೆ, ಅವರ ಮೀಸೆ ಬಹಳ ಚೆನ್ನಾಗಿತ್ತು, ಅವರನ್ನು ಹಿಡಿದು ಒಂದು ಕಡೆ ಮೀಸೆ ಬೋಳಿಸಿದ್ದಾರೆ, ಒಬ್ಬರು ಹೊಟ್ಟೆಗೆ ಚಾಕು ಇಟ್ಟು ಇನ್ನೊಬ್ಬರು ಮೀಸೆ ಬೋಳಿಸಿದ್ದಾರೆ, ಇಂಥ ಪರಿಸ್ಥಿತಿ ಇದ್ದರೂ ಕೂಡ ಇವತ್ತಿನವರೆಗೆ ಸರ್ಕಾರದವರು ಏನು ಮಾಡಿದ್ದಾರೋ ಗೊತ್ತಿಲ್ಲ, ಪೋಲೀಸರು ಏನು ಮಾಡಿದ್ದಾರೋ ಗೊತ್ತಿಲ್ಲ, ಇವತ್ತಿನವರೆಗೆ ಅದರ ಬಗ್ಗೆ ವಿಚಾರಣೆ ಇಲ್ಲ. ಅವರು ಒಂದು ಮೀಸೆ ಇಟ್ಟುಕೊಂಡು ತಿರುಗಾಡಬೇಕೆ ? ಇಂಥ ಪರಿಸ್ಥಿತಿ ಇದ್ದರೆ ಸಾಮಾನ್ಯ ಜನರು ತಿರುಗಾಡುವುದಕ್ಕೆ ಸಾಧ್ಯವೆ ? ಔರಾದ್‌ನಲ್ಲಿ ನಾಲ್ಕನೇ ತಾರೀಖು ಒಂದು ಘಟನೆ ನಡೆದಿದೆ, ಅಲ್ಲಿ ಮಧುಕರ್ ಎಂಬ ಒಬ್ಬ ಟೀಚರ್ ಇದ್ದಾನೆ. ಅವನು ಬಸ್ಸಿಗೆ ಹೋಗುತ್ತಿದ್ದ. ವೈಜನಾಥ್ ಎಂಬ ಸಸ್ಪೆಂಡ್ ಆದಂಥ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ, ಅವನಿಗೂ ಇವನಿಗೂ ಜಗಳ ಆಗಿತ್ತು ಎಂದು ಹೇಳುತ್ತಾರೆ. ಏನು ಜಗಳ ಆಯಿತೊ ನನಗೆ ಗೊತ್ತಿಲ್ಲ. ಮಧುಕರ್ ಎಂಬುವನು ಸಸ್ಪೆಂಡ್ ಆದವನ ಬಗ್ಗೆ ಏನೋ ಮಾತನಾಡಿದ ಎಂದು ಬಸ್ಸಿನಿಂದ ಇಳಿಸಿ ಪೋಲೀಸ್ ಠಾಣೆಗೆ ಹೋಗಿ ಆರು ಜನ ಪೋಲೀಸರನ್ನು ಕರೆದುಕೊಂಡು ಬಂದು ದನಕ್ಕೆ ಬಡಿದಹಾಗೆ ಬಡಿದಿದ್ದಾರೆ. ನಂತರ ಕಾಲು ಹಿಡಿದುಕೊಂಡು ಪೋಲೀಸ್ ಠಾಣೆಯವರೆಗೂ ಎಳೆದುಕೊಂಡು ಹೋಗಿದ್ದಾರೆ, ಜನ ಬೆನ್ನತ್ತಿ ''ಏನಿದು ಅನ್ಯಾಯ'' ಎಂದು ಕೇಳಿದ್ದಾರೆ. ೧೦೦ ಜನ ವರ್ಕರ್ಸ್ ಹೋಗಿ ಏತಕ್ಕೆ ಹೊಡೆಯುತ್ತಿದ್ದೀರಿ, ಏನು ಕಾರಣ' ಎಂದು ಕೇಳಿದ್ದಾರೆ. ಅದಕ್ಕೆ ಪೋಲೀಸರು, ಒಂದು ಸಾರಿ ಈ ಲೀಡರ್ಸ್‌ಗೆ ಬುದ್ಧಿ ಕಲಿಸಬೇಕಾಗುತ್ತದೆ' ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಏನೆಂದರೆ, ಸಸ್ಪೆಂಡ್ ಆಗಿರುವಂಥ ಪಿ.ಸಿ.ವೈಜನಾಥ್ ಏನಿದ್ದ ಅವನ ತಂದೆ ಸಬ್–ಇನ್‌ಸ್ಪೆಕ್ಟರ್. ಅವನೂ ಸಸ್ಪೆಂಡ್ ಆಗಿದ್ದ. ಅವನು ದಂಬಾಯಿಗೆ ಹೋದಾಗ ಇವನು ಸುಳ್ಳು ಸೈನ್ ಮಾಡಿ ಅವನ ಸಂಬಳ ಪಡೆದಿದ್ದ. ಅದಕ್ಕಾಗಿ ಇಬ್ಬರೂ ಸಸ್ಪೆಂಡ್ ಆಗಿದ್ದರು. ಅವರಿಗೆ ಪೋಲೀಸರು ಸಹಕಾರ ಕೊಡುತ್ತಿದ್ದರು. ಮಧುಕರ್ ಎಂಬ ಲೆಕ್ಚರರ್ ಹರಿಜನರವನು, ಒಳ್ಳೆಯವನು. ಅವನ ಮೇಲೆ ಅತ್ಯಾಚಾರ ಮಾಡಿದ್ದಾರೆ. ಈ ಬಗ್ಗೆ ಕೇಳುವುದಕ್ಕೆ ಹೋದಾಗ ಒಂದು ಗಂಟೆಯಲ್ಲಿ ತೀರ್ಮಾನ ಕೊಡುತ್ತೇವೆ ಎಂದು ಡಿ.ಎಸ್.ಪಿ.ಯವರು ಹೇಳಿದರು. ಆರು ಜನ ಪೋಲೀಸರನ್ನು ಸಸ್ಪೆಂಡ್ ಮಾಡಬೇಕು ಎಂದು ಹೇಳಿದರು.

೨.೪೦ ಪಿ.ಎಂ.

ಎರಡು—ಮೂರು ತಾಸು ಆದ ಮೇಲೆ ಸಿಕ್ಕಾಪಟ್ಟೆ ಇವರಿಗೆ ಉರ್ಟಾ ಬೈದು ಹೊಡೆದು ಏನೇನೋ ಅನಾಹುತ ಮಾಡಿ ವಾಪಸ್ಸು ಹೋದರು. ವಾಪಸ್ಸು ಹೋಗಿ ಎರಡನೇ ದಿವಸ

ಜಿಲ್ಲಾ ಪರಿಷತ್ ಮೆಂಬರ್ ರಘುನಾಥ್ ಜಾದವ್, ತಾಲ್ಲೂಕು ಜನತಾದಳದ ಅಧ್ಯಕ್ಷ ಬಾಬೂರಾವ್ ಪಾಟೀಲ್ ಗುಡುಕನಾಥ್, ಕಾಂಗ್ರೆಸ್—ಐ ವರ್ಕರ್ ತಾರೆ ಎನ್ನುವವರು ಹೀಗೆ ಒಂದು ಸಾವಿರ ಜನ ಹುಡುಗರು ಸೇರಿ ಶಾಂತವಾಗಿ ಒಂದು ಮೆರವಣಿಗೆ ತೆಗೆದುಕೊಂಡು ಹೋದರು. ಈ ಜನ ತಹಶೀಲ್ದಾರ್‌ರವರ ಆಫೀಸಿಗೆ ಹೋಗಿ ಆ ಆರೂ ಜನರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿದರು. ಈ ಮೂರೂ ಜನರು ತಹಶೀಲ್ದಾರರ ಆಫೀಸಿನಲ್ಲಿ ಕುಳಿತು ಮಾತನಾಡುತ್ತಾ, ನೋಡಿ, ಏನಾದರೂ ಮಾಡಿ ಸರಿಪಡಿಸಿ, ಚೆನ್ನಾಗಿರುವುದಿಲ್ಲ, ಇಲ್ಲದಿದ್ದರೆ ಔರಾದ್‌ನಲ್ಲಿ ಶಾಂತಿಭಂಗವಾಗುತ್ತದೆ, ಬಹಳ ಕಷ್ಟವಾಗುತ್ತದೆ, ಆದ್ದರಿಂದ ಏನಾದರೂ ಮಾಡಿ ಎಂದು ಹೇಳಿದರು. ಆದರೆ ಈ ಮೂವರಿಗೆ ಏನಾದರೂ ಮಾಡಿ ಏಟು ಹಾಕಬೇಕು ಎಂದು ೪ನೇ ತಾರೀಖೇ ಅಂದುಕೊಂಡ ಸಬ್‌ಇನ್ಸ್‌ಪೆಕ್ಟರ್ ಲಿಂಗಪ್ಪ ಎನ್ನುವವರು ಗುಂಪಿನ ಬಳಿ ಬಂದು ಬೇಕೆಂದೇ ತನ್ನ ಟೋಪಿಯನ್ನು ಕೆಳಕ್ಕೆ ಹಾಕಿ ಕಾಲಿನಲ್ಲಿ ಚುಚ್ಚಿ ಗುಂಡು ಈ ಕೆಲಸ ಮಾಡಿತೆಂದು ಹೇಳಿ ಲಾಠಿಛಾರ್ಜ್ ಮಾಡಿಸಿದರು. ಇವರು ಮೊದಲಿನಿಂದ ಇದೇ ಕೆಲಸ ಮಾಡುತ್ತಾ ಬಂದವರು. ಅಲ್ಲಿ ಏಟು ತಿಂದ ೧೦—೧೫ ಜನರ ಫೋಟೋ—ಕೂಡಾ ತಂದಿದ್ದೇನೆ. ಈ ಬಗ್ಗೆ ವಿವರವನ್ನು ಬರೆದು ಮಾನ್ಯ ಮುಖ್ಯಮಂತ್ರಿಗಳಿಗೆ ಲೆಟರ್ ಕಳುಹಿಸಿದ್ದೇನೆ. ಪ್ರತಿಯೊಂದು ಪ್ರತಿಯನ್ನೂ ಅವರಿಗೆ ಕಳುಹಿಸುತ್ತೇನೆ. ಅವರು ಲಾಠಿಛಾರ್ಜ್ ಮಾಡಿದಮೇಲೆ ಒಳಗೆ ಹೋಗಿ, ಒಳಗೆ ಕುಳಿತಿದ್ದ ಜಿಲ್ಲಾಪರಿಷತ್ ಮೆಂಬರ್ ಜಾದವ್, ಬಾಬೂರಾವ್ ಪಾಟೀಲ್ ದಂಡುಕನಾಥ್ ಹಾಗೂ ತಾರೆ ಎನ್ನುವವರನ್ನು ಎಳೆದುಕೊಂಡು ಬಂದು ತಹಶೀಲ್ದಾರ್‌ರವರ ಎದುರುಗಡೆಯೇ ದನಕ್ಕೆ ಬಡಿದಹಾಗೆ ಬಡಿದಿದ್ದಾರೆ. ಕೇಳುವವರು ಯಾರೂ ಇಲ್ಲ. ಹೊಡೆದುಕೊಂಡು ಠಾಣೆಗೆ ಎಳೆದುಕೊಂಡುಬಂದು ಅವರಮೇಲೆ ಕೇಸ್ ಹಾಕಿದ್ದಾರೆ. ಪೋಲೀಸ್ ಠಾಣೆ ಮೇಲೆ ಹಮ್ಲಾ ಮಾಡುವುದಕ್ಕೆ ಬಂದಿದ್ದರು, ತಹಶೀಲ್ದಾರ್‌ರವರ ಮೇಲೆ ಹಮ್ಲಾ ಮಾಡುವುದಕ್ಕೆ ಬಂದಿದ್ದರು ಎಂದು ಇವರು ಹಾಗೂ ಇನ್ನಿತರ ೪೮ ಜನರ ಮೇಲೆ ಛಾರ್ಜ್‌ಶೀಟ್ ಕೂಡಾ ಹಾಕಿದ್ದಾರೆ. ಅವರೇ ಎಲ್ಲಾ ಮಾಡಿ ಇವರ ಮೇಲೆ ಕೇಸ್ ಹಾಕಿದ್ದಾರೆ. ಎರಡನೇ ದಿವಸ ಅವರನ್ನು ಬಿಡಿಸಲು ಹೋದ ತಾಲ್ಲೂಕು ಸಮಿತಿಯ ಅಧ್ಯಕ್ಷ ಬಸವರಾಜ ಕೊಳ್ಳೂರು ಅವರು ಠಾಣೆಗೆ ಹೋದರೆ ಅವರ ಶರ್ಟ್ ಹಿಡಿದು ಹರಿದುಬಿಟ್ಟಿದ್ದಾರೆ. ಪೋಲೀಸರ ಈ ಕೃತ್ಯದ ಹಿನ್ನೆಲೆ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಪೋಲೀಸಿನವರನ್ನು ಯಾರೂ ಕೇಳುವ ಹಾಗೆ ಇಲ್ಲವೇ ? ಔರಾದ್‌ನಲ್ಲಿ ಒಂದು ದೇವರ ಗುಡಿಯಲ್ಲಿ ಗಂಟೆಗೆ ಏನೋ ಕಟ್ಟಿ ನಾಳೆ ಬೆಳಿಗ್ಗೆ ನಿಮ್ಮ ಮನೆಯಲ್ಲಿ ದರೋಡೆ ಮಾಡುತ್ತೇವೆಂದು ಚೀಟಿ ಬರೆದಿರುತ್ತಾರೆ. ಆಗಲಾರದಂತಹ ಕೆಲಸಗಳೆಲ್ಲಾ ಆಗುತ್ತಿರುವಾಗ ಇದನ್ನು ಕೇಳುವವರು ಯಾರೂ ಇಲ್ಲ. ಔರಾದ್, ಆ ಜಿಲ್ಲೆಯಲ್ಲಿಯೇ ಬಹಳ ಹಿಂದುಳಿದ ಪ್ರದೇಶವೆಂದು ಕಳೆದ ತಿಂಗಳು ೧೪ನೇ ತಾರೀಖಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿ ಕೇಳುವವರೇ ಇಲ್ಲ. ಅಲ್ಲಿ ೩.೪ ಹಾಗೂ ೫ನೇ ತಾರೀಖು—ನಾಲ್ಕು ದಿವಸ ಸತತವಾಗಿ ಪೋಲೀಸರ ದೌರ್ಜನ್ಯ ನಡೆದಿದೆ. ಇವತ್ತು ಅವರನ್ನು ಸಸ್ಪೆಂಡ್ ಮಾಡಿಲ್ಲ. ಲಿಂಗಪ್ಪ ಎನ್ನುವವನಿಗೆ ಏನು ಮಾಡಿದ ಎಂದು ಕೇಳಲಿಲ್ಲ. ಅವರ ಮೇಲೆ ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಹೀಗಾದರೆ ಗತಿ ಏನು ? ನಾಳೆ ಪರಿಸ್ಥಿತಿ ಎಲ್ಲಿಗೆ ಬರುತ್ತದೆ ? ಮಾನ್ಯ ವಾಟಾಳ್‌ನಾಗರಾಜ ಅವರು ಹೇಳಿದ ಪ್ರಕಾರ ನನಗೂ ಅನ್ನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಅನುಭವಿಗಳು ಇದ್ದಾರೆ. ಅವರ ಹೆಸರು ಎಲ್ಲರಿಗೂ ಗೊತ್ತಿದೆ. ಅವರಿಗೆ ಏನಾದರೂ ತೊಂದರೆ ಆಗುತ್ತಿದೆಯೋ ಏನೋ ಎಂದು ನನಗನ್ನಿಸುತ್ತದೆ. ಅವರಿಗೆ ಹಿಂದಿನಿಂದ ಯಾರಾದರೂ, ಏನಾದರೂ ತೊಂದರೆ ಕೊಡುತ್ತಿದ್ದಾರೇನೋ ಎಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅವರು ತಮ್ಮ ಅನುಭವದ ಪೂರ್ಣ ಪ್ರಮಾಣವನ್ನು ಸರಿಯಾಗಿ ಸದುಪಯೋಗಪಡಿಸಿಕೊಳ್ಳುತ್ತಿಲ್ಲ, ನಡೆಸಿಕೊಳ್ಳುತ್ತಿಲ್ಲ ಎಂಬ ಮಾನ್ಯ ವಾಟಾಳ್ ನಾಗರಾಜ್‌ರವರ ಮಾತನ್ನು ನಾನು ಒಪ್ಪುತ್ತೇನೆ. ಯಾವಾಗ. ಏನು ಕೇಳಿದರೂ ಇವರು ಕೇಂದ್ರದ ಮೇಲೆ ಹೇಳುತ್ತಾರೆ. ಸಾಲದ ಬಗ್ಗೆ ಕೇಳಿದರೆ ಕೇಂದ್ರ ಹಾಗೂ ನಬಾರ್ಡ್ ಅನ್ನು ತೋರಿಸುತ್ತಾರೆ, ಈ ವಿಷಯದ ಬಗ್ಗೆಯೂ ಕೇಂದ್ರಕ್ಕೆ ಹೋಗಬೇಕೇ ಅಥವಾ ತಾವೇ ಸರಿ ಮಾಡುತ್ತೀರಾ ? ಈ ಬಗ್ಗೆ ತಾವು ಸರಿಪಡಿಸಲು ಸಾಧ್ಯವಿಲ್ಲವೇ ? ಇವತ್ತು ರಾಜ್ಯದಲ್ಲಿ ಸಾಮಾನ್ಯ ಜನಜೀವನ ಮಾಡಬೇಕೋ, ಬೇಡವೋ ? ಯಾವುದರ ಬಗ್ಗೆ ಹೇಳಿದರೂ ಇದೇ ಉತ್ತರ ತಮ್ಮಿಂದ ಬರುತ್ತದೆ. ಇದರ ಬಗ್ಗೆ ಯಾದರೂ ನಿರ್ದಿಷ್ಟವಾದ ಕ್ರಮ ತೆಗೆದುಕೊಂಡು ಲಿಂಗಪ್ಪ, ಖಾನ್ ಮತ್ತು ಇನ್ನಿತರ ೯ ಜನ ಕಾನ್ಸ್‌ಟೇಬಲ್ಸ್‌ನ್ನು ತಕ್ಷಣ ಸಸ್ಪೆಂಡ್ ಮಾಡಿ ನ್ಯಾಯಾಂಗ ತನಿಖೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಇವತ್ತು ಯಾರೂ ಅಲ್ಲಿ ತಿರುಗಾಡುವ ಹಾಗೆ ಇಲ್ಲ. ಅಲ್ಲಿ ಲೀಡರ್ಸ್ ಬದುಕುವ ಹಾಗೆ ಇಲ್ಲ. ಇಲ್ಲಿ ತೊಂದರೆಗೆ ಒಳಗಾದ ಲೀಡರ್ಸ್‌ನಲ್ಲಿ ನಮ್ಮವರೇ ಅಲ್ಲ, ನಿಮ್ಮ ಪಕ್ಷದವರೂ ಇದ್ದಾರೆ. ಎಲ್ಲ ಪಕ್ಷಗಳ ಕಾರ್ಯಕರ್ತರೂ ಅಲ್ಲಿ ತಿರುಗಾಡುವ ಹಾಗೆ ಇಲ್ಲ. ಅಲ್ಲಿ

ಪೋಲೀಸ್‌ರು ಮಾಡತಕ್ಕಂಥ ಅತ್ಯಾಚಾರದ ಬಗ್ಗೆ ಏನಾದರೂ ಖಚಿತವಾದ ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ ಯಾರೂ ಕೂಡಾ ಬದುಕುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಬಹಳ ಕಷ್ಟ ಆಗಿದೆ. ಇವತ್ತು ಪೋಲೀಸ್ ರಾಜ್ಯ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನನಗನ್ನಿಸುತ್ತದೆ.

ದಯವಿಟ್ಟು ಅವರ ಬಗ್ಗೆ ಏನಾದರೂ ತಾವು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಅವರನ್ನು ಏತಕ್ಕೆ ಇಷ್ಟೊಂದು ಫ್ರೀ ಬಿಟ್ಟಿದ್ದೀರಿ? ಎಲ್ಲೆಲ್ಲಿ ಅಂತಹವರನ್ನು ಇದ್ದಾರೆ ಅಂತಹವರನ್ನು ತೆಗೆದು ಚೇಂಜ್ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲರೂ ಪದೇ ಪದೇ ಹೇಳುತ್ತಿದ್ದಾರೆ. ನಿಮ್ಮಂತಹವರು ಬೋರ್ಡ್‌ನೊಳಗೆ ಇದ್ದರೆ, ನೀವು ಹೇಳಿದಹಾಗೆ ಕೇಳತಕ್ಕವರು ಇದ್ದಮೇಲೆ ಅದು ಹೇಗೆ ಆಗುತ್ತದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅಲ್ಲಿ ನಮ್ಮ ಪಕ್ಷ ನಿಮ್ಮ ಪಕ್ಷದವರೆಲ್ಲರನ್ನೂ ಕೂಡೇ ಹೊಡೆದಿದ್ದಾರೆ. ತಾವು ಈಗ ಏನು ನಿರ್ಣಯ ತೆಗೆದುಕೊಂಡಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎರಡು ತಿಂಗಳಿನಲ್ಲಿ ಬೇರೆ ಆಗಿದೆಯೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಮೊದಲು ಎಲ್ಲ ಬಹಳ ಚೆನ್ನಾಗಿ ನಡೆದಿದೆಯೆಂದು ನಾನು ಹೇಳುತ್ತಿಲ್ಲ. ಈಗ ಹೆಚ್ಚು ನಡೆಯುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಕಾಲದಲ್ಲಿದ್ದ ಅಧಿಕಾರಿಗಳು ನಿಮ್ಮ ಹತೋಟಿ ಮೀರಿ ಹೋಗಿದ್ದಾರೆಂದು ನಾವು ಆಶ್ಚರ್ಯ ಪಡಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸರ್ಕಾರ ಬದಲಾದ ತಕ್ಷಣ, ರಾಷ್ಟ್ರಪತಿಯವರ ಆಡಳಿತ ಬಂದಾಗ ತಕ್ಷಣ ಎಲ್ಲ ಅಧಿಕಾರಿಗಳನ್ನು ಬದಲಾಯಿಸಿ ಬಿಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಎಲ್ಲ ಸಬ್ ಇನ್ಸ್‌ಪೆಕ್ಟರುಗಳನ್ನು ಬದಲಾಯಿಸಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ, ನಾನು ಬೇಕಾದರೆ ಸಾಬೀತು ಮಾಡುತ್ತೇನೆ. ಪುರಾವೆ ಕೊಡುತ್ತೇನೆ ನಾವು ಅಧಿಕಾರದಲ್ಲಿದ್ದಾಗ ಇದ್ದ ಅಧಿಕಾರಿಗಳನ್ನು ಬದಲಾಯಿಸಿದ್ದೀರಿ. ಮಾನ್ಯ ಶಿವನಂಜಪ್ಪನವರು ನಾವು ಹೇಳಿ ಮಾಡಿಸಿದ್ದೇವೆ ನಾವು ಭಾಷಣ ಮಾಡಿಸಿದ್ದೇವೆಂದು ಹೇಳುತ್ತಿದ್ದರು. ಪ್ರತಿಯೊಂದು ಭಾಷಣ ತೆಗೆದು ನೋಡಿ. ಅವರು ನಾವು ಹೇಳಿ ಮಾಡಿಸಿದ್ದೇವೆಂದು ಹೇಳಿದ್ದಾರೆ. ಹಾಗಾದರೆ ಇದನ್ನು ಹೇಳಿ ಮಾಡಿಸಿರಬಹುದು.

ಶ್ರೀ ಎಂ. ಪಿ. ವೆಂಕಟೇಶ್.—ಈಗಿರುವ ಅಧಿಕಾರಿಗಳು ನಿಮ್ಮ ವಿಶ್ವಾಸವನ್ನು ಪಡೆದುಕೊಳ್ಳುವುದಕ್ಕೆ ಈ ರೀತಿ ತೊಂದರೆ ಕೊಟ್ಟಿರಬಹುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಗೋಲಿಬಾರ್ ಮಾಡುವುದನ್ನು ನೋಡಿದರೆ, ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಬೇರೆ ದಾರಿಯನ್ನು ಹುಡುಕಿಕೊಂಡಿದ್ದಾರೆಂದು ನನಗನಿಸುತ್ತದೆ. ಈ ದಾರಿಯಲ್ಲಿ ಜನರನ್ನು ಕೊಂದುಹಾಕಿ ಜನಸಂಖ್ಯೆಯನ್ನು ಕಡಿಮೆ ಮಾಡೋಣವೆಂದು ಇದ್ದೀರಿ ಎಂದು ಕಾಣುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಂತಹ ಕೆಟ್ಟ ಯೋಚನೆಗಳು ನಿಮ್ಮ ಕಾಲದಲ್ಲಿ ನಡೆದಿದೆ.

ಶ್ರೀ ವಿನಯಕುಮಾರ್ ಸೊರಕೆ.—ನಿಮ್ಮ ಸರ್ಕಾರದಲ್ಲಿ ರಬ್ಬರ್ ಗುಂಡು ಹೊಡೆಯುತ್ತೇವೆಂದು ಜನರನ್ನು ನಂಬಿಸಿ ಎಷ್ಟು ಜನರನ್ನು ಕೊಂದಿರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ನಾವು ರಬ್ಬರ್ ಗುಂಡು ಹೊಡೆಯುತ್ತೇವೆಂದು ಹೇಳಿದ್ದೇವೆ. ತಾವು ಮೇಧಾವಿಗಳು ಬಹಳ ಮಂದಿ ಆರಿಸಿ ಬಂದಿದ್ದೀರಿ. ಬಹಳ ಸಂತೋಷ. ನಾವು ತಪ್ಪು ಮಾಡಿದ್ದೇವೆ. ನಾವು ತಪ್ಪು ಮಾಡಿರುವುದಕ್ಕೆ ಈ ಕಡೆ ಬಂದು ಕುಳಿತಿದ್ದೇವೆ. ತಾವು ಮೇಧಾವಿಗಳು ಅದು ನನಗೆ ಗೊತ್ತಿದೆ ಪುನಃ ಅದೇ ಮಾತನ್ನು ಏತಕ್ಕೆ ಹೇಳುತ್ತೀರಿ? ನೀವು ತಪ್ಪು ಮಾಡಬೇಡಿಯೆಂದು ನಾವು ನಾನು ಹೇಳುತ್ತಿದ್ದೇನೆ ತಪ್ಪು ಮಾಡಿದ್ದಕ್ಕೆ ಇಲ್ಲಿ ಬಂದಿದ್ದೇವೆ. ನೀವು ತಪ್ಪು ಮಾಡಬೇಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ನಾಗಮಾರಪಲ್ಲಿಯವರೇ. ಈ ಸರ್ಕಾರ ಬಂದಮೇಲೆ ಜನಸಂಖ್ಯೆಯನ್ನು ನಿಯಂತ್ರಣ ಮಾಡಲಿಕ್ಕೆ ಈ ತರಹ ಪ್ರಯೋಗ ಮಾಡುತ್ತಿದ್ದಾರೆಂದು ನೀವು ಹೇಳುತ್ತಿದ್ದೀರಿ. ಅದು ಈ ರಾಜ್ಯದ ಜನಕ್ಕೆ ಗೊತ್ತು. ಇಂತಹ ಪ್ರಯೋಗ ಏನಾದರೂ ನಡೆದಿದ್ದರೆ ಅದು ೧೯೮೩ ರಿಂದ ೧೯೮೮ ರವರೆಗೆ ನಡೆದಿದೆ ಎಂಬುದನ್ನು ತಾವು ಯಾರೂ ಮರೆಯಬಾರದು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ನಮಗೆ ಮಾತನಾಡಲಿಕ್ಕೆ ಅವಕಾಶವಿದೆ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಿಗೆ ಆ ಕಡೆ ಜಾಗ ಇರಬೇಕಾಗಿತ್ತು ಏಕೋ ಈ ಕಡೆ ಮಾನ್ಯ ಶಿವರಾಮೇಗೌಡರು ಬಂದಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಈ ಕಡೆಯೇ ಇರುತ್ತೇವೆ. ನಮ್ಮನ್ನು ಏತಕ್ಕೆ ಅಲ್ಲಿ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ ನಾನು ಮಾತನಾಡಿರತಕ್ಕ ಮಾತಿನಲ್ಲಿ ಏನಾದರೂ ವ್ಯತ್ಯಾಸವಿದ್ದರೆ ದಯಮಾಡಿ ಹೇಳಿ. ನಾವು ಪಕ್ಷೇತರರು, ಈ ಜಾಗದಲ್ಲಿ ಕುಳಿತುಕೊಳ್ಳುವುದಕ್ಕೆ ಸ್ವತಂತ್ರರು ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ನೀವೇನಾದರೂ ಬರುವುದಕ್ಕೆ ರೆಡಿ ಇದ್ದರೆ ತಿಳಿಸಿ. ನಿಮಗೂ ಬೇಕಾದರೆ ಮೆಂಬರ್‌ಶಿಪ್ ಕೊಡುತ್ತಾರೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಆದ್ದರಿಂದ ಇವತ್ತು ನಾನು ಒಂದು ವಿಚಾರ ಹೇಳಬೇಕೆಂದರೆ, ಔರಾದ್‌ನಲ್ಲಿ ಆಗಿರತಕ್ಕಂಥ ಘಟನೆಗೆ ಆ ಲಿಂಗಪ್ಪ, ಖಾನ್, ಬಸವರಾಜ್ ಇನ್ನುಳಿದ ೬ ಜನ ಬೇರೆ ೬ ಜನ ಕಾನ್‌ಸ್ಟೇಬಲ್‌ಗಳೇನಿದ್ದಾರೆ ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡಬೇಕು. ಇಲ್ಲದಿದ್ದರೆ ಔರಾದ್‌ನಲ್ಲಿ ಇನ್ನೂ ಹೆಚ್ಚಿನ ಘಟನೆಗಳು ಆಗತಕ್ಕಂಥ ಸಂಭವ ಇದೆ. ಈ ಚುನಾಯಿತ ಜನರನ್ನು ಈ ಪ್ರಕಾರವಾಗಿ ಹೊಡೆದರೂ, ಅನ್ಯಾಯ ಮಾಡಿದರೂ ಯಾರೂ ಕೇಳಲಿಲ್ಲವೆಂದರೆ ಬಹಳ ಅನಾಹುತವಾಗುತ್ತದೆ, ಆದ್ದರಿಂದ ತಾವು, ತಕ್ಷಣ ಅವರನ್ನು ಸಸ್ಪೆಂಡ್ ಮಾಡಿ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಈ ಪ್ರಕರಣದಲ್ಲಿ ಬಾಬು ರಾವ್ ಮೇಲೆ ಮತ್ತು ಜಾದವ್ ಮೇಲೆ ಏನು ಕೇಸು ಮಾಡಿದ್ದಾರೆ. ಅದನ್ನು ತಮ್ಮ ಹತ್ತಿರ ಕಳಿಸುತ್ತೇನೆ. ಅವರನ್ನು ಅನ್ಯಾಯವಾಗಿ ಹೊಡೆದು ಉಲ್ಟಾ ಅವರ ಮೇಲೆಯೇ ಕೇಸ್ ಹಾಕಿದ್ದಾರೆ. ಅದನ್ನುಕೂಡ ತಮಗೆ ಕಳಿಸುತ್ತೇನೆ. ಅದನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕು. ಜ್ಯುಡಿಶಿಯಲ್ ಎನ್‌ಕ್ವೈರಿ ಆದಮೇಲೆ ಯಾರು ತಪ್ಪಿತಸ್ಥರು ಇದ್ದಾರೆ, ಅವರಿಗೆ ಶಿಕ್ಷೆಯಾಗಬೇಕು, ಇದರ ಬಗ್ಗೆ ಸಂಪೂರ್ಣವಾದ ತನಿಖೆಮಾಡಿ ತೀರ್ಮಾನ ತೆಗೆದುಕೊಳ್ಳಬೇಕು. ಇದನ್ನು ತಮ್ಮ ಉತ್ತರದಲ್ಲಿ ಹೇಳುತ್ತೀರಿ ಎಂಬ ಭಾವನೆ ಇಟ್ಟುಕೊಂಡು ನಿರ್ದಿಷ್ಟವಾದ ಉತ್ತರವನ್ನು ಕೊಡುತ್ತೀರೆಂದು ಆಶಿಸಿ, ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಸನ್ಮಾನ್ಯ ಅಧ್ಯಕ್ಷರೇ ಇವತ್ತಿನದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಕಳೆದ ಎರಡು ತಿಂಗಳಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಲ್ಲಲ್ಲಿ ಜನತೆಯ ಮೇಲೆ ಆಗುತ್ತಿರುವ ಗೋಲಿಬಾರು ಹಾಗೂ ಕೊಲೆ, ಸುಲಿಗೆ ವಿಚಾರವಾಗಿ ಒಂದು ವಿದ್ಯಮಾನವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ಸಮರ್ಥಿಸುತ್ತೇನೆ. ಕಳೆದ ಎರಡು ತಿಂಗಳಲ್ಲಿ ಅಲ್ಲಿ ಫೈರಿಂಗ್ ಇಲ್ಲಿ ದರೋಡೆ ಈ ಪ್ರಕಾರ ನಡೆಯುತ್ತಿರುವುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದು ಆಗಲಿಕ್ಕೆ ಕಾರಣ ಏನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಇದಕ್ಕೆ ಕಾರಣ ಏನು ಎಂದರೆ ಕಳೆದ ಎರಡು ಮೂರು ತಿಂಗಳಲ್ಲಿ ರಾಜ್ಯದ ಆಡಳಿತದಲ್ಲಿ ಒಂದು ಶಿಥಿಲತೆ ಉಂಟಾಗಿದೆ ಎಂದು ತಮ್ಮ ಮುಂದೆ ಧೈರ್ಯವಾಗಿ ಹೇಳಬಹುದು. ಈ ಶಿಥಿಲತೆ...

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಶಿಥಿಲತೆ ಬಂದಿದೆಯೆಂದು ತಮಗೆ ಯಾವಾಗ ಗೊತ್ತಾಯಿತು?

ಶ್ರೀ ಎಸ್. ಹೆಚ್. ಕೌಜಲಗಿ.—ಇದು ಬೆಳಗಾವಿಗೆ ಬರುವುದಕ್ಕೆ ನಾವು ಬಿಟ್ಟಿಲ್ಲ ಅಲ್ಲಿ ಬಂದರೆ ತಮಗೆ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಏರಿಯಾದಲ್ಲೇ ಓಡಾಡುತ್ತಿದ್ದಾರೆ, ಈ ಘಟನೆಗಳು ಆಗಲಿಕ್ಕೆ ಮುಖ್ಯಕಾರಣ ಏನು ಎಂದರೆ. ಈಗಾಗಲೇ ಹಿರಿಯ ಸದಸ್ಯರೊಬ್ಬರು ಹೇಳಿದರು. ಹಾಗೆಯೇ ಇವತ್ತು ಒಂದು ಕೋರ್ಟಿನಲ್ಲಿ ಒಳ್ಳೆಯ ವಕೀಲಿಕೆ ಮಾಡುವಂಥ ಕೆಲಸ ಸಹಿತ ನಿಂತಿದೆ ಎಂದು ಹೇಳಬಹುದು. ಒಬ್ಬ ವಕೀಲರ ಅರ್ಧ ಮೀಸೆ ಬೋಳಿ ಬಿಟ್ಟರೂ ಸಹಿತ ಇಲ್ಲಿಯತನಕ ಏನೂ ಆಗಿಲ್ಲ. ಇದು ಎಲ್ಲಿಗೆ ಹೋಗಿ ನಿಂತಿದೆ ಎಂದರೆ, ಯಾರು ಏನು ಮಾಡಿದರೂ ಇವತ್ತಿನ ದಿವಸ ಅಂಜುವಂಥ ಕಾರಣ ಇಲ್ಲ ಎಂದು ಅನಿಸುತ್ತದೆ. ನಾವು ನೋಡಬಹುದು, ಪೋಲೀಸ್ ಅಧಿಕಾರಿಗಳು ಯಾವ ಪ್ರಕಾರವಾಗಿ ತಮ್ಮ ಮನಸ್ಸಿಗೆ ಬಂದಂತೆ ಪೋಲೀಸ್ ಸ್ಟೇಷನ್‌ಗಳಲ್ಲಿ ವರ್ತಿಸುತ್ತಾರೆ ಎಂದರೆ,

ಮನಸ್ಸಿಗೆ ಬಂದಂತೆ ಹೊಡೆಯುವುದು, ಬಡಿಯುವುದು ಮತ್ತು ಯಾರನ್ನಾದರೂ ಕೊಂದರೂ ಸಹಿತ ಕೇಳುವವರು ಇಲ್ಲ. ಯಾರೋ ಒಬ್ಬ ನಿರಪರಾಧಿ ಸಣ್ಣ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಆತನ ಮೇಲೆ ಕ್ರಮ ತೆಗೆದುಕೊಂಡಹಾಗೆ ಮಾಡಿ ಆ ಕೇಸನ್ನು ಮುಚ್ಚುವಂಥ ಕೆಲಸ ನಡೆದಿದೆ. ಆದರೆ ಈ ಪ್ರಕಾರವಾಗಿ ಆಗದೆ.

ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ನಿಷ್ಪಕ್ಷಪಾತವಾಗಿ ಕ್ರಮ ಕೈಗೊಳ್ಳಬೇಕು. ವಿರೋಧ ಪಕ್ಷದ ನಾಯಕರು ಹೇಳಿದಂತೆ ಎಲ್ಲಾ ಕಡೆಗಳಲ್ಲಿ ಆಗಿರುವ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಒಂದು ಕಡೆಗೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುವುದು ಮತ್ತೊಂದು ಕಡೆಗೆ ಎನ್‌ಕ್ವೈರಿ ಮಾಡಲು ಮ್ಯಾಜಿಸ್ಟ್ರೇಟರನ್ನು ನೇಮಿಸಿ ಮುಚ್ಚುವಂಥ ಪ್ರಕರಣ ಆಗಬಾರದು. ಈ ರೀತಿಯಾದರೆ ಜನಗಳಿಗೆ ಭಯ ಹೆಚ್ಚಾಗುತ್ತದೆ. ಅವರ ಭೀತಿ ಹೆಚ್ಚಾಗುತ್ತದೆ. ಯಾವ ಪ್ರಕಾರವಾಗಿ ಜನತಾ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಪ್ರಥಮದಲ್ಲಿಯೇ ಬೆಂಗಳೂರು ನಗರದಲ್ಲಿದ್ದಂತಹ ಭಯದ ವಾತಾವರಣವನ್ನು ಅಂದರೆ ಚಾಕು ಚೂರಿ, ಸಂಸ್ಕೃತಿಯನ್ನು ಓಡಿಸಿತ್ತು. ಅದೇ ಪ್ರಕಾರವಾಗಿ ನೀವು ಈಗ ಕ್ರಮ ಕೈಗೊಳ್ಳಬೇಕು. ಆಗ ಹೆಣ್ಣು ಮಕ್ಕಳು ಪೇಟೆಗೆ ಹೋಗುವುದಕ್ಕೆ ಹೆದರುತ್ತಿದ್ದರು. ಆ ಕಾಲಕ್ಕೆ ಜನತಾ ಸರ್ಕಾರ ಬಂದ ನಂತರ ಮೊಟ್ಟಮೊದಲು ಈ ಭಯದ ವಾತಾವರಣವನ್ನು ಹೋಗಲಾಡಿಸುವಂತಹ ಕಾರ್ಯಕ್ರಮವನ್ನು ಮಾಡಿದ್ದರು, ಆ ಪ್ರಕಾರವಾಗಿ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಷ್ಟೇ ಎಡರುತೊಡರುಗಳಿದ್ದರೂ ಧೈರ್ಯವಾಗಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಅನ್ನು ಸಾಲ್ವ್ ಮಾಡಬೇಕು. ಇಲ್ಲಿ ಶಾಂತಿಯನ್ನು ಕಾಪಾಡುವ ಕ್ರಮ ಕೈಗೊಳ್ಳಬೇಕು. ಹಿಂದೆ ಸಾರ್ಕ್ ಸಮ್ಮೇಳನ ಆದ ಕಾಲದಲ್ಲಿ ಹೊರ ದೇಶಗಳಿಂದ ಬಂದ ಗಣ್ಯರು ಇಲ್ಲಿ ಯಾವುದೇ ಅಂಗ ರಕ್ಷಕರ ಸಹಾಯ ಇಲ್ಲದೆ, ಓಡಾಡುತ್ತಿದ್ದುದನ್ನು ನೋಡಿ ನಮಗೆ ಬಹಳ ಸಂತೋಷವಾಗುತ್ತಿತ್ತು. ಇಲ್ಲಿ ಅಷ್ಟು ಒಳ್ಳೆಯ ರೀತಿಯಲ್ಲಿ ಲಾ ಅಂಡ್ ಆರ್ಡರ್ ಇತ್ತು. ಪಂಜಾಬ್ ರಾಜಸ್ಥಾನ ಮುಂತಾದ ಕಡೆಗಳಲ್ಲಿ ಇವತ್ತಿನ ದಿವಸ ಒಂದು ಸೆಕ್ಯೂರಿಟಿ ಇಲ್ಲದೇ ಯಾರೇ ಮಂತ್ರಿಯಾಗಲಿ ಓಡಾಡುವ ಹಾಗೆ ಇಲ್ಲ. ನಮ್ಮ ಆಡಳಿತ ಕಾಲದಲ್ಲಿ ಕರ್ನಾಟಕದಲ್ಲಿ ಶಾಂತಿ ಸುವ್ಯವಸ್ಥೆ. ಶಾಂತತೆ ಇದ್ದ ಕಾರಣ, ಅವರು ಯಾವುದೇ ಒಂದು ಸೆಕ್ಯೂರಿಟಿ ಅರೇಂಜ್‌ಮೆಂಟ್ ಇಲ್ಲದೆ ಓಡಾಡುವಂಥ ಪ್ರಸಂಗವನ್ನು ನೋಡಿದಿರಿ. ಆದರೆ ಆ ಸ್ಥಿತಿ ಇವತ್ತಿನ ದಿವಸ ಉಳಿದಿಲ್ಲ. ಏಕೆ ಉಳಿದಿಲ್ಲವೆಂದರೆ, ಆಡಳಿತದಲ್ಲಿ ಶಿಥಿಲತೆ ಉಂಟಾಗಿದೆ. ಆಡಳಿತದಲ್ಲಿರತಕ್ಕ ಶಿಥಿಲತೆಯನ್ನು ಹೋಗಲಾಡಿಸಿ ಸರ್ಕಾರವು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು. ಈಗಾಗಲೇ ಆದಂಥ ಘಟನೆಗಳ ಬಗ್ಗೆ ಯೋಗ್ಯ ವಿಚಾರಣೆ ಆಗಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಎಲ್ಲಾ ಕಡೆಗೂ ಜುಡಿಶಿಯಲ್ ಎನ್‌ಕ್ವೈರಿ ಆಗಬೇಕು. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಈ ಕರ್ನಾಟಕ ರಾಜ್ಯ ಶಾಂತಿ ಸುವ್ಯವಸ್ಥೆಗೆ ಹೆಸರು ಪಡೆದಿದೆ. ಈ ರೀತಿಯ ಘಟನೆಗಳು ಮುಂದೆ ನಡೆಯದಂತೆ ಕ್ರಮ ಕೈಗೊಳ್ಳಬೇಕು. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).— ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಈಗಾಗಲೇ ವಿವರಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ ಆದರೆ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಶಾಂತಪ್ರಿಯವಾದಂಥದ್ದು. ಪೋಲೀಸರಿಗೆ ಕೊಟ್ಟಂಥ ಅಧಿಕಾರ ಜನ ಸಾಮಾನ್ಯರ ರಕ್ಷಣೆಯ ಸಲುವಾಗಿ ಇರಬೇಕೇ ವಿನಃ ಅದನ್ನು ಸ್ವೇಚ್ಛಾಚಾರದಿಂದ ಪೋಲೀಸರು ದುರುಪಯೋಗ ಮಾಡಿದರೆ ಇವತ್ತು ಯಾವುದೇ ವ್ಯಕ್ತಿಯ ಪ್ರಾಣ ರಕ್ಷಣೆ ಅಥವಾ ಆಸ್ತಿ ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಪೋಲೀಸರಿಗೆ ಕೊಟ್ಟಿರತಕ್ಕ ವಿಶೇಷ ಹಕ್ಕುಗಳು ಜನರ ಆಸ್ತಿಯನ್ನು, ಪ್ರಾಣವನ್ನು ಕಾಯಲಿಕ್ಕೆ ಇರತಕ್ಕದ್ದು. ಆದರೆ ಈಗ ಅದರ ತದ್ವಿರುದ್ಧವಾಗಿ ನಡೆದಿದೆ. ಇಲ್ಲಿ ಆಡಳಿತ ಪಕ್ಷದ ಬದಲಾವಣೆ ಅಥವಾ ಆಡಳಿತದ ಬದಲಾವಣೆಯಾದುದರಿಂದ ಈ ಪರಿಸ್ಥಿತಿ ಉದ್ಭವಿಸಿದೆ ಎನ್ನುವ ಮಾತಿಗಿಂತ ಇಲ್ಲಿರುವ ಪೋಲೀಸರು ನಾವು ಜನತೆಯ ಸೇವಕರು, ಜನತೆಯ ರಕ್ಷಕರು ಎಂಬುದನ್ನು ಮರೆತು, ರಕ್ಷಣೆ ಮಾಡತಕ್ಕ ಜನ ಇವತ್ತು ಜನರ ಮೇಲೆ ದೌರ್ಜನ್ಯ ಮಾಡಲಿಕ್ಕೆ ಹತ್ತಿದ್ದರಿಂದ ರಾಜ್ಯದಲ್ಲಿ ಜನರಿಗೆ ಭಯ ಭೀತಿ ಹುಟ್ಟುತ್ತಿದೆ. ಈ ಒಂದು ದಿಸೆಯಲ್ಲಿ ಒಂದು ಪಕ್ಷದ ಮೇಲೆ ದೌರ್ಜನ್ಯ ಮಾಡಿದಂತಹದ್ದು. ಮತ್ತೊಂದು ಪಕ್ಷದ ಮೇಲೆ ಮಾಡಬಹುದು. ಒಂದು ವರ್ಗದ ಮೇಲೆ ಮಾಡಿದಂತಹದ್ದು ಇನ್ನೊಂದು ವರ್ಗದ ಮೇಲೆ ಅವರು ದೌರ್ಜನ್ಯವನ್ನು ಮುಂದುವರಿಸಬಹುದು ಆ ಕಾರಣಕ್ಕಾಗಿ ಯಾವುದೇ ವ್ಯಕ್ತಿಯ ಮೇಲೆ ಮಾಡಿದ್ದಿರಲಿ ಅಥವಾ ಯಾವುದೇ ಪಕ್ಷದ ಮೇಲಿರಲಿ ಅಥವಾ ಸಾಮಾನ್ಯ ಮನುಷ್ಯನ ಮೇಲಿರಲಿ, ಎಲ್ಲ ಸಾಮಾನ್ಯರ ರಕ್ಷಣೆಯನ್ನು ಮಾಡುವ ದಿಸೆಯಲ್ಲಿ, ಆಸ್ತಿಯ ರಕ್ಷಣೆ ಮಾಡುವ ದಿಸೆಯಲ್ಲಿ, ರಕ್ಷಣೆ ಮಾಡತಕ್ಕಂಥ ಕರ್ತವ್ಯವನ್ನು ನಿರ್ವಹಿಸಬೇಕೇ ವಿನಃ ಕಾನೂನಿನಲ್ಲಿ ಕೊಟ್ಟಂತಹ ವಿಶೇಷ ಹಕ್ಕುಗಳನ್ನು ಸಮಾಜದಲ್ಲಿ ಅಶಾಂತಿಯನ್ನು ಹುಟ್ಟಿಸತಕ್ಕ ಈ ರೀತಿ ಜನರನ್ನು

ಲಾಕಪ್‌ನಲ್ಲಿಟ್ಟು, ಬಂದೀಖಾನೆಯಲ್ಲಿಟ್ಟುಕೊಂಡು ಪ್ರಾಣಗಳನ್ನು ತೆಗೆಯಲಿಕ್ಕೆ ದುರುಪಯೋಗ ಮಾಡಿದ್ದೇ ಆದರೆ ಇದನ್ನು ಯಾವ ಸಣ್ಣ ಸದಸ್ಯನೂ ಒಪ್ಪಲಾರ ಎಂದು ನನಗೆ ಅನ್ನಿಸುತ್ತದೆ. ಆದರೆ ಅಲ್ಲಿರತಕ್ಕಂಥ ವಿಷಯದ ಪರಿಜ್ಞಾನ ಸಂಪೂರ್ಣ ಅರಿತುಕೊಂಡು ಅದು ಪೋಲೀಸರ ಒಂದು ದುರ್ನಡತೆಯಿಂದ ಆಗಿದೆಯೋ ಅಥವಾ ಕೆಲವು ಹಿತಾಸಕ್ತಿಗಳಂತಹ ಜನ ಅಲ್ಲಿ ಪ್ರಚೋದನೆಯನ್ನು ಮಾಡಿದ್ದರಿಂದ ಆಗಿದೆಯೋ. ಈ ಬಗ್ಗೆ ವಿಚಾರಣೆ ಆಗತಕ್ಕದ್ದು ಅನಿವಾರ್ಯ. ಅನೇಕ ಸಂದರ್ಭದಲ್ಲಿ ತಪ್ಪು ಮಾಹಿತಿಯಿಂದ ಎಲ್ಲ ಘಟನೆಗಳು ಒಂದೇ ರೀತಿ ಇವೆ ಎಂದು ಭಾವಿಸಲಿಕ್ಕೆ ಆಗುವುದಿಲ್ಲ. ಅಲ್ಲಿ ಸಂದರ್ಭಾನುಸಾರವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ಘಟನೆಗಳು ಸಂಭವಿಸಿದ್ದು ಕಾಣಿಸುತ್ತಾ ಇದೆ. ಆ ದಿಸೆಯಲ್ಲಿ ಸಮರ್ಪಕವಾದಂತಹ ನ್ಯಾಯಾಂಗ ವಿಚಾರಣೆಯನ್ನು ಎಲ್ಲಾ ಕಡೆಗಳಲ್ಲಿಯೂ ನಡೆಸಬೇಕು. ಈ ಬಂದೀಖಾನೆಯಲ್ಲಿ ಆದಂತಹ ಒಂದು ಕೊಲೆಯ ಬಗ್ಗೆ ಅಥವಾ ಮರಣದ ಬಗ್ಗೆ, ಮತ್ತೆ ಹೊರಗೆ ಆದಂತಹ ದರೋಡೆಗಳ ಬಗ್ಗೆ ಸುಲಿಗೆಗಳ ಬಗ್ಗೆ ವಿವರವಾದಂತಹ ಒಂದು ನ್ಯಾಯಾಂಗ ವಿಚಾರಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿಸುತ್ತಾರೆಂದು ನಾನು ಭಾವಿಸುತ್ತೇನೆ.

ಅದೇ ರೀತಿ ನಿನ್ನೆ ದಿವಸ ಚಾಮುಂಡಿ ಬೆಟ್ಟದಲ್ಲಿ ಆದ ಘಟನೆಯನ್ನು ನೋಡಿದರೆ, ಅಲ್ಲಿ ಯಾರೂ ಹೋಗುವ ಹಾಗೆ ಇಲ್ಲ. ಕಾರಿನಲ್ಲಿ ಹೋಗುವವರನ್ನು. ರಿಕ್ಷಾದಲ್ಲಿ ಹೋಗುವವರನ್ನು. ಪ್ರತಿಯೊಬ್ಬರನ್ನೂ ಆತಂಕ ಮಾಡಿ, ದರೋಡೆ ನಡೆಯುತ್ತಿದ್ದರೆ ಪೋಲೀಸಿನವರು ಇತ್ತ ಕಡೆ ಲಕ್ಷ್ಯ ವಹಿಸದೇ ಇದ್ದರೆ ಜನ ಆ ದೇವಸ್ಥಾನಕ್ಕೆ ಹೋಗುವುದಕ್ಕೆ ಹಿಂಜರಿಯಬಹುದು ಅಥವಾ ಭಯಪಡಬಹುದು. ಆ ರೀತಿ ಆಗದಂತೆ ಮಾನ್ಯ ಮಂತ್ರಿಗಳು ಅಲ್ಲಿ ಸೂಕ್ತವಾದ ಬಂದೋಬಸ್ತ್ ಮಾಡಬೇಕು. ನನಗನಿಸುತ್ತದೆ. ಇಂತಹ ಸಂದರ್ಭದಲ್ಲಿ ಕೇವಲ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುತ್ತೀರಿ. ವಿಚಾರಣೆ ಮಾಡಿಸುತ್ತೇವೆ ಎಂದು ಹೇಳುತ್ತೀರಿ. ಅಲ್ಲಿಯ ಪರಿಸ್ಥಿತಿಯನ್ನು ಶಾಂತಗೊಳಿಸುವುದಕ್ಕೆ ಪ್ರಯತ್ನ ಮಾಡಿ ಮತ್ತೆ ಇಂತಹ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದೀರಿ ಹೀಗಾಗಿ ಅಮಾನತ್ತಿನಲ್ಲಿಡುವ ಕೆಲಸ ತಾತ್ಕಾಲಿಕವಾದದ್ದು. ಅವರು ಅನ್ಯಾಯ ಮಾಡಿದಾಗ, ತಪ್ಪು ಮಾಡಿದಾಗ, ಸಿಗಬೇಕಾದ ಶಿಕ್ಷೆ ಸಿಗುವುದಿಲ್ಲ ಎಂಬ ವಿಶ್ವಾಸ ಅಧಿಕಾರಿಗಳಲ್ಲಿ ಇರುವುದರಿಂದ ಇಂತಹ ಘಟನೆಗಳು ಪುನರಾವೃತ್ತಿಯಾಗುತ್ತಿವೆ ಎಂಬ ಭಾವನೆ ಇದೆ ಈ ರೀತಿಯಾಗದಂತೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಅಥವಾ ತಪ್ಪಿತಸ್ಥ ಜನರ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸುವುದಕ್ಕೆ ಮಾನ್ಯ ಮಂತ್ರಿಗಳು ಸೂಕ್ತ ವ್ಯವಸ್ಥೆಯನ್ನು ಹಾಗೂ ಕಾರ್ಯಕ್ರಮವನ್ನು ಜರುಗಿಸುತ್ತೀರೆಂದು ನಾನು ಭಾವಿಸುತ್ತೇನೆ.

ಇನ್ನು ಈ ಒಂದು ರಾಜಕೀಯ ವಿಚಾರದಲ್ಲಿ ಮಾತನಾಡುವುದಕ್ಕಿಂತ, ಇವತ್ತಿನ ದಿವಸ ದೇಶಾದ್ಯಂತ ಅನೇಕ ರಾಜ್ಯಗಳಲ್ಲಿ ನೋಡಿದರೆ. ಅಲ್ಲಿರತಕ್ಕಂಥ ಭಯ, ಭೀತಿ ನಮ್ಮ ರಾಜ್ಯಕ್ಕೂ ಪ್ರವೇಶ ಮಾಡುತ್ತದೆಯೋ ಏನೋ, ಅದರ ಹಿನ್ನೆಲೆ ಇದೆಯೋ ಏನೋ ಎನ್ನುವ ಭಾವನೆ ಬರುತ್ತದೆ. ಈ ಭಾವನೆ ಬರಲಿಕ್ಕೆ ಎಡೆಕೊಡದಂತೆ ಅಧಿಕಾರಿಗಳು ತಮ್ಮ ಕರ್ತವ್ಯ ಚ್ಯುತಿ ಆಗದಂತೆ ನೋಡಿಕೊಳ್ಳಲು, ಮಾನ್ಯ ಮಂತ್ರಿಗಳು ನ್ಯಾಯಾಂಗ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಬಿಗುವಿನ ಕ್ರಮ ಜರುಗಿಸಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ವಿವಿಧ ಕಡೆಗಳಲ್ಲಿ ಅನೇಕ ರೀತಿಯಲ್ಲಿ ಪೋಲೀಸರು ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಉದಾಹರಣೆಗಾಗಿ. ನಮ್ಮ ಕೋಲಾರ ಜಿಲ್ಲೆ ಇಬ್ಬರು ಎಸ್. ಪಿ. ಗಳು ಮತ್ತು ಇಬ್ಬರು ಡಿ. ವೈ. ಎಸ್. ಪಿ.ಗಳು ಇರತಕ್ಕಂಥ ಜಾಗ. ಕೆ. ಜಿ. ಎಫ್. ಎಂದು ಹೇಳಿದರೆ, ಈ ಪೋಲೀಸ್ ಇಲಾಖೆಯಲ್ಲಿ ಇದಕ್ಕೇ ಒಂದು ಜಿಲ್ಲೆ ಎಂದು ಕರೆಯುತ್ತಾರೆ. ಕೆ. ಜಿ. ಎಫ್.ನಲ್ಲಿ ಒಬ್ಬರು ಎಸ್. ಪಿ. ಒಬ್ಬರು ಡಿ. ವೈ. ಎಸ್. ಪಿ. ಯವರನ್ನು ನೇಮಕ ಮಾಡಿದ್ದಾರೆ. ನನ್ನ ಬೇತಮಂಗಲ ಕ್ಷೇತ್ರಕ್ಕೆ ಸುಮಾರು ೮ ಪೋಲೀಸ್ ಠಾಣೆಗಳು ಬರುತ್ತವೆ. ಇಲ್ಲಿರತಕ್ಕ ಡಿ. ವೈ. ಎಸ್. ಪಿ. ನಂಜುಂಡಪ್ಪ ಎಂಬುವರ ಬಗ್ಗೆ ಅನೇಕ ಪ್ರಕರಣಗಳು ನಡೆದಿವೆ. ಹೋದವರ್ಷ ಜನವರಿ ೧೯೭೮ ರಿಂದ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ. ಇವುಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೆಲವು ಸಾರಿ ತನಿಖೆ ಕೂಡ ಮಾಡಿದ್ದಾರೆ. ನಾನು ಗೆದ್ದಮೇಲೆ ನಮ್ಮ ರಾಷ್ಟ್ರಪತಿ ಆಡಳಿತ ಇದ್ದ ಅವಧಿಯಲ್ಲಿ ಕೆಲವಾರು ಪ್ರಕರಣಗಳನ್ನು ಸ್ವತಃ ಅವರೇ ಕೈಗೊಂಡಿದ್ದಾರೆ. ಅವರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ನಾನೇ ಖುದ್ದು ಭೇಟಿ ಮಾಡಿದ್ದೆ, ಡಿ. ಜಿ. ಪಿ. ಯವರನ್ನೂ ನೋಡಿದ್ದೇನೆ, ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಭೇಟಿ ಮಾಡಿ ವಿವರವಾದ ವಿವರಣೆಗಳನ್ನು ಕೊಟ್ಟಿದ್ದೇನೆ. ದಿನಾಂಕ ೪–೧೨–೭೮ ರಲ್ಲಿ ಎಣ್ಣೇರಹಳ್ಳಿ ಗ್ರಾಮದಲ್ಲಿ ಉರುಗಾಂ ನಾರಾಯಣರೆಡ್ಡಿ

ಮತ್ತು ಇತರ ೧೯ ಜನರು ನಾಗರ ಕಲ್ಲುಗಳನ್ನು ಕಿತ್ತು ಊರಿನಲ್ಲಿ ಶಾಂತಿಭಂಗ ಉಂಟು ಮಾಡಿದ್ದಾರೆ. ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ರವರು ಇದರ ಸಲುವಾಗಿ ಈ ಕೇಸ್ ಬಗೆ ೪ ಜನ ಅಪರಾಧಿಗಳನ್ನು ತಂದು ಪೋಲೀಸ್ ಠಾಣೆಯಲ್ಲಿ ನಿಲ್ಲಿಸಿದರು. ಸುಮಾರು ಒಂಭತ್ತು ಒಂಬತ್ತೂವರೆ ಗಂಟೆಯಲ್ಲಿ ಡಿ. ವೈ. ಎಸ್. ಪಿ ಬಂದು ಏನೂ ವಿಚಾರ ಮಾಡದೆ ಅವರನ್ನು ಮನೆಗೆ ಕಳುಹಿಸಿದರು. ಬೇತಮಂಗಲ ಪೋಲೀಸ್ ಠಾಣೆಯಲ್ಲಿ ನಂ. ಎನ್ ಸಿ. ಆರ್. ೩/೯೦ ತಾ. ೬-೧-೯೦ ರಲ್ಲಿ ಆಗಿರುವ ಕೇಸ್ ಬಗ್ಗೆ ಹೇಳುವುದಾದರೆ, ಅಲ್ಲಿ ಸುಂದರಪಾಳ್ಯ ಎಂಬ ಜಾಗ ಇದೆ. ಆ ಜಾಗದಲ್ಲಿ ಮುಸ್ಲೀಮರು ಹೆಚ್ಚು ಜನ ಇದ್ದಾರೆ. ಇಲ್ಲಿ ಒಬ್ಬ ಹಿಂದೂ ಜನಾಂಗದ ಗೋವಿಂದಾಚಾರಿ ಎಂಬುವರಿಗೂ, ಮುಸ್ಲಿಂ ಬಾಂಧವರಿಗೂ ಒಂದು ಸೈಟ್‌ನ ಬಗ್ಗೆ ತಕರಾರು ಇತ್ತು. ಆ ಸೈಟಿನ ಬಗ್ಗೆ ಗೋವಿಂದಾಚಾರಿಯವರು ಮುನಿಸೀಫ್ ಕೋರ್ಟಿನಲ್ಲಿ ಇಂಜೆಕ್ಷನ್ ತೆಗೆದುಕೊಂಡು ಹೋಗಿ, ಮೊದಲೇ ಕಲ್ಲುಚಪ್ಪಡಿಗಳನ್ನು ಕೂಡ ಹಾಕಿ ಇಟ್ಟಿದ್ದರು. ಅದು ನನ್ನ ಗಮನಕ್ಕೆ ಬಂದಾಗ, ನಾನು ಆ ಕ್ಷೇತ್ರದ ಶಾಸಕನಾಗಿ, ಲೋಕಲ್ ನಲ್ಲಿರತಕ್ಕ ಹಿರಿಯ ಸಲಹೆಗಳನ್ನು ತೆಗೆದುಕೊಂಡು, ಏನಾದರೂ ರಾಜಿ ಮಾಡಬೇಕು, ಏಕೆಂದರೆ, ಹಿಂದೂ ಮುಸ್ಲಿಮರಿಗೆ ಮತಭೇದ ಬಂದರೆ ನನ್ನ ಕ್ಷೇತ್ರದಲ್ಲಿ ನನಗೂ ಕೆಟ್ಟ ಹೆಸರು ಬರುತ್ತದೆ, ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಕೆಟ್ಟ ಹೆಸರು ಬರುತ್ತದೆ. ಅಥವಾ ಇಲ್ಲಿ ಶಾಂತಿಭಂಗವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವೆಲ್ಲಾ ಸೇರಿ ಬರುವಷ್ಟರಲ್ಲಿ ಡಿ. ವೈ. ಎಸ್. ಪಿ. ರವರು ಒಂದು ಕಡೆಗೇ ವಕಾಲತ್ತನ್ನು ಹಾಕಿ ಅವರೇ ೬ನೇ ತಾರೀಖಿನ ದಿವಸ ಬಂದು ಇಂಜೆಂಕ್ಷನ್ ಆರ್ಡರ್ ಇದ್ದರೂ ಸಹ ಕಲ್ಲು ಚಪ್ಪಡಿಗಳನ್ನು ಎತ್ತಿ ಬೇರೆ ಕಡೆಗೆ ಸಾಗಿಸಿ ಅಲ್ಲಿ ಅನೇಕ ರೀತಿಯ ಗಲಭೆಗಳಿಗೆ ಅವಕಾಶ ಮಾಡಿ ಕೊಟ್ಟರು. ಅದೇ ರೀತಿ ಬೇತಮಂಗಲ ಪೋಲೀಸ್ ಠಾಣೆಯ ಕ್ರೈಮ್ ನಂ. ೧೨೧/೮೯ ಇ. ಸಿ. ಆಕ್ಟ್ ವಿಚಾರ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಬ್ರೋಕನ್ ರೈಸ್‌ನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬೇಕಾದರೆ ಇದರ ಬಗ್ಗೆ ಹೈಕೋರ್ಟ್ ಆರ್ಡರ್ ಇದೆ. ಅದರ ಮೇಲೆ ಕರ್ನಾಟಕ ಸರಕಾರದ ಆದೇಶ ಕೂಡಾ ಇದೆ. ಬ್ರೋಕನ್ ರೈಸನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಯಾವುದೇ ಅಭ್ಯಂತರ ಇಲ್ಲ ಎಂದು ಇದೆ. ಒಬ್ಬ ಬಡ ವ್ಯಾಪಾರಿ ಹತ್ತು ಮೂಟೆ ಬ್ರೋಕನ್‌ರೈಸನ್ನು ಎತ್ತಿನಗಾಡಿಯಲ್ಲಿ ಸಾಗಿಸಿಕೊಂಡು ಬರುತ್ತಿರುವಾಗ ರಾತ್ರಿ ಹತ್ತೂವರೆ ಘಂಟೆಯಲ್ಲಿ ಡಿ.ವೈ.ಎಸ್.ಪಿ.ರವರು ಅಡ್ಡ ನಿಲ್ಲಿಸಿ ಅವನ ಮೇಲೆ ಕೇಸ್ ಬುಕ್ ಮಾಡಿದರು.

ಚೇರ್ಮೆನ್ — ದಯವಿಟ್ಟು ವಿಷಯದ ಬಗ್ಗೆ ಮಾತನಾಡಿ.

ಶ್ರೀ ಎಂ. ನಾರಾಯಣಸ್ವಾಮಿ.— ದಯವಿಟ್ಟು ಕೆಲವು ಪ್ರಕರಣಗಳ ಬಗ್ಗೆ ಹೇಳುತ್ತಿದ್ದೇನೆ.

ಚೇರ್ಮನ್.— ಇಲ್ಲಿರುವಂತಹ ಗುಲ್ಬರ್ಗಾ, ಬಳ್ಳಾರಿ, ಶಹಾಬಾದ್‌ನಲ್ಲಿ ನಡೆದ ಗೋಲೀಬಾರ್ ವಿಚಾರದ ಬಗ್ಗೆ ಮಾತನಾಡಿ.

ಶ್ರೀ ಎಂ. ನಾರಾಯಣಸ್ವಾಮಿ.— ಗೋಲೀಬಾರ್ ಬಗ್ಗೆಯೂ ಮಾತನಾಡುತ್ತೇನೆ. ಜೊತೆಗೆ ಏನಾಗುತ್ತಾ ಇದೆ ಎನ್ನುವುದನ್ನೂ ಹೇಳುತ್ತಿದ್ದೇನೆ. ಸುಮಾರು ಹದಿನಾರು ಪ್ರಕರಣಗಳನ್ನು...

ಶ್ರೀ ಟಿ. ಎಂ. ಮಂಜುನಾಥ್.— ಈ ಕೇಸ್‌ನ ಮೆರಿಟ್ ಬಗ್ಗೆ ಹೇಳುತ್ತಾ ಹೋದರೆ, ಇಲ್ಲಿ ವಾದವಿವಾದ ಶುರುವಾಗುತ್ತದೆ. ಪಾಯಿಂಟ್ಸ್ ಮಾತ್ರ ಹೇಳಬೇಕು.

ಶ್ರೀ ಎಂ. ನಾರಾಯಣಸ್ವಾಮಿ.— ವಾದವಿವಾದ ಇಲ್ಲ. ಅಲ್ಲಿರತಕ್ಕಂಥ ಬೇರೆ ಪೋಲೀಸ್ ಅಧಿಕಾರಿಗಳು ದಕ್ಷರಿದ್ದಾರೆ. ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್‌ರವರ ಮೇಲಾಗಲೀ ಸಬ್‌ಇನ್‌ಸ್ಪೆಕ್ಟರ್ ರವರ ಮೇಲಾಗಲೀ ನಾನು ಏನೂ ದೂರು ಹೇಳುತ್ತಿಲ್ಲ. ಅಲ್ಲಿರುವ ಡಿ. ವೈ. ಎಸ್. ಪಿ. ಅವರ ವಿಚಾರ ಹೇಳಬೇಕಾದರೆ, ತಾವು ಈ ಪ್ರಕರಣ ಎಷ್ಟು ಗಂಭೀರವಾಗಿದೆ ಎಂದು ಪರಿಗಣಿಸಬೇಕು. ಸನ್ಮಾನ್ಯ ಡಿ ವೈ.ಎಸ್.ಪಿ. ರವರ ಬಗ್ಗೆ ಅನೇಕ ಪ್ರಕರಣಗಳನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮತ್ತು ಡಿ. ಜಿ. ಪಿ. ರವರ ಗಮನಕ್ಕೆ ತಂದಿದ್ದೇನೆ. ಸೆಂಟ್ರಲ್ ರೇಂಜ್ ಡಿ. ಐ. ಜಿ. ರವರ ವರದಿ ಇದೆ. ಬೇಕಾದರೆ ಕೇಳಿರಿ. ಮುಖ್ಯ ಮಂತ್ರಿಗಳು ಕೇಳಲಿ.

ಚೇರ್ಮೆನ್.— ಈಗ ಚರ್ಚೆ ಏನಿದೆ ಅದರ ಬಗ್ಗೆ ಮಾತನಾಡಿ.

ಶ್ರೀ ಎಂ. ನಾರಾಯಣಸ್ವಾಮಿ.— ಹಿಂದೆ ಎಂ. ಎನ್. ರೆಡ್ಡಿಯವರು ಎಸ್. ಪಿ. ಆಗಿದ್ದಂಥ ಸಂದರ್ಭದಲ್ಲಿ ವೈರ್‌ಲೆಸ್ ಅನ್ನು ದುರ್ಬಳಕೆ ಮಾಡಿಕೊಂಡ ಪ್ರಕರಣ ಇದೆ ಎಸ್.ಪಿ. ಆದೇಶ ಇಲ್ಲದೆ ಸರಹದ್ದನ್ನು ಬಿಟ್ಟುಹೋದ ಪ್ರಕರಣ ಇದೆ. ಡಿ.ಐ.ಜಿ., ಎಂ.ಡಿ. ಸಿಂಗ್‌ರವರು ದಿನಾಂಕ ೫.೩.೧೯೮೯ರಲ್ಲಿ ವರದಿ ಸಲ್ಲಿಸಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನನ್ನ ಕ್ಷೇತ್ರದಲ್ಲಿ ಜನ ಸುಖವಾಗಿರ

ಬೇಕು, ಶಾಂತಿಭಂಗ ಆಗಬಾರದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಹೊಸದಾಗಿ ಶಾಸಕರಾಗಿದ್ದೇವೆ ನಿಜ ನಮಗಾಗಲೀ, ಇಲಾಖೆಗಾಗಲೀ ಅಥವಾ ಸರಕಾರಕ್ಕಾಗಲೀ, ಯಾವುದೇ ರೀತಿಯ ತೊಂದರೆಯಾಗಬಾರದು, ಕೆಟ್ಟ ಹೆಸರು ಬರಬಾರದು ಎಂಬ ದೃಷ್ಟಿಯಿಂದ ಇಂತಹ ಇಲಾಖಾಧಿಕಾರಿಗಳ ಮೇಲೆ ತಕ್ಷಣ ಸಸ್ಪೆನ್ಷನ್ ಆದೇಶ ಕೊಟ್ಟು ತಕ್ಷಣ ಎನ್‌ಕ್ವೈರಿ ಕಂಡಕ್ಟ್ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅದೇ ರೀತಿ ನಮ್ಮ ರಾಜ್ಯದಲ್ಲಿ ಗೋಲೀಬಾರ್ ಪ್ರಕರಣಗಳೂ ಕೂಡಾ ನಡೆಯುತ್ತಿವೆ. ಆದರೆ ಅಂತಹ ಪ್ರಕರಣಗಳು ನಡೆಯಬಾರದಾಗಿತ್ತು. ಏತಕ್ಕೆಂದರೆ, ವೀರೇಂದ್ರಪಾಟೀಲರು ನಾಯಕರಾಗಿದ್ದಾರೆ. ನಾನು ವಿದ್ಯಾರ್ಥಿ ಆಗಿದ್ದಾಗಿನಿಂದಲೂ ಅವರ ಹೆಸರನ್ನು ನಾನು ಕೇಳಿದ್ದೇನೆ ಅವರು ನಮ್ಮ ಕೋಲಾರಕ್ಕೆ ಚುನಾವಣೆ ಕಾಲಕ್ಕೆ ನಿಜಲಿಂಗಪ್ಪನವರ ಜೊತೆ ಬಂದಾಗ ನಾನು ಅವರನ್ನು ನೋಡುವುದಕ್ಕೆ ಕೂಡಾ ಬಂದಿದ್ದೆ. ಅವರ ಸರಕಾರದಲ್ಲಿ ಒಳ್ಳೆಯ, ದಕ್ಷ ಆಡಳಿತವನ್ನು ಕೊಡುತ್ತಾರೆ ಎಂಬ ನಿರೀಕ್ಷಣೆಯಲ್ಲಿ ಜನ ಇದ್ದಾರೆಯೋ ಅದು ತಪ್ಪಬಾರದು ಎಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ಗುಲ್ಬರ್ಗಾದಲ್ಲಿ ಶಹಾಬಾದ್‌ನಲ್ಲಿ ಇನ್ನೂ ಅನೇಕ ಪ್ರಕರಣಗಳಲ್ಲಿ ಕೂಡಾ ಇದು ನಡೆಯುತ್ತಿದೆ. ಇಂತಹ ಪ್ರಕರಣಗಳು ನಡೆಯುದ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಪಾಲನೆಯನ್ನು ಮಾಡಿ ಶಾಂತಿಯನ್ನು ಉಳಿಸಬೇಕೆಂದು ಕೇಳಿಕೊಂಡು, ನನ್ನ ಕ್ಷೇತ್ರದಲ್ಲಿ ಜನಕ್ಕೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ, ಡಿ. ವೈ. ಎಸ್. ಪಿ. ಅವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇನೆ. ತಕ್ಷಣ ಅವರನ್ನು ಅಮಾನತ್ತು ಮಾಡಿ ವಿಚಾರಣೆ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ). — ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಬೆಳಗ್ಗೆಯಿಂದ, ಗುಲಬರ್ಗಾ, ಶಹಾಬಾದ್ ಬೀದರ್, ಬಳ್ಳಾರಿ, ಪ್ರಕರಣಗಳು, ಸಕಲೇಶಪುರಗಳಲ್ಲಿ ನಡೆದಂಥ ಘಟನೆ, ಗೋಣಿಕೊಪ್ಪಲಿನಲ್ಲಿ ಪೋಲೀಸರ ಮುಂದೆ ನಡೆದಿರತಕ್ಕಂಥ ಘಟನೆಗಳೆಲ್ಲವನ್ನೂ ನೋಡಿದಾಗ, ನನಗಾದರೂ ಅನ್ನಿಸುತ್ತದೆ, ಬೆಳಿಗ್ಗೆಯಿಂದ ನಡೆದಂಥ ಚರ್ಚೆಯಲ್ಲಿ ಕೆಲವು ಘಟನೆಗಳು ಮಾತ್ರ ಸರಕಾರದ ಗಮನವನ್ನು ಸೆಳೆಯುತ್ತಿವೆ, ಇನ್ನೂ ಸರಕಾರದ ಗಮನಕ್ಕೆ ಬರದಿರುವ ಘಟನೆಗಳು ಬೇಕಾದಷ್ಟಿದೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರಕ್ಕೆ ತಿಳಿಸುತ್ತೇನೆ. ಈ ಸರಕಾರ ಅಸ್ತಿತ್ವಕ್ಕೆ ಬಂದ ಕೇವಲ ಎರಡು ತಿಂಗಳಲ್ಲಿ ದರೋಡೆ ಪ್ರಕರಣಗಳು, ಗೋಲೀಬಾರ್ ಪ್ರಕರಣಗಳು ನಡೆದಿರತಕ್ಕಂಥಾದನ್ನು ನೋಡಿದರೆ ಪೋಲೀಸ್ ಇಲಾಖೆ ಎಷ್ಟು ನಿಷ್ಕ್ರಿಯವಾಗಿದೆ ಎಂದು ಹೇಳಬೇಕಾಗುತ್ತದೆ. ನನ್ನ ಶಾಸಕ ಮಿತ್ರರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಪೋಲೀಸ್ ಇಲಾಖೆಗಳಲ್ಲಿ ಸಮಗ್ರ ಕಾನೂನು ಬದಲಾವಣೆಗಳು ಆಗಬೇಕೆಂಬುದಕ್ಕೆ ನಾನೂ ಕೂಡಾ ಧ್ವನಿಗೂಡಿಸುತ್ತೇನೆ.

೩–೧೦ ಪಿ. ಎಂ.

ಇನ್ನು ಗೋಣಿಕೊಪ್ಪಲ್‌ನಲ್ಲಿ ನಡೆದ ಘಟನೆ ಬಗ್ಗೆ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಇನ್ನುಳಿದ ಎಲ್ಲಾ ವಿಚಾರಗಳ ಬಗ್ಗೆ ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಗೋಣಿಕೊಪ್ಪಲ್‌ನಲ್ಲಿ ನಡೆದ ಘಟನೆಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಡಿಸೆಂಬರ್ ತಿಂಗಳ ೧೩ನೇ ತಾರೀಖು ಒಂದು ಅಂಗಡಿ ಕಟ್ಟಡದ ವಿವಾದವಿತ್ತು. ಆ ವಿವಾದವನ್ನು ಬಗೆಹರಿಸಲು ಅಲ್ಲಿನ ಜಿಲ್ಲಾ ಪರಿಷತ್ತಿನ ಸದಸ್ಯರು ಜನರ ಪ್ರತಿನಿಧಿಯಾಗಿ ಅಲ್ಲಿಗೆ ಬಂದಾಗ ಈ ಘಟನೆ ನಡೆಯಿತು. ಅಂಗಡಿ ವಿವಾದವನ್ನು ಬಗೆಹರಿಸಬೇಕೆಂದು ಅಲ್ಲಿನ ಜನ ಒತ್ತಾಯಿಸಿದ್ದರಿಂದ ಜಿಲ್ಲಾ ಪರಿಷತ್ತಿನ ಸದಸ್ಯ ಅಲ್ಲಿಗೆ ಬಂದು ಮಾತನಾಡತಕ್ಕಂಥ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳ ಎದುರುಗಡೆ ಜಿಲ್ಲಾ ಪರಿಷತ್ತಿನ ಸದಸ್ಯನ ಕಾರಿಗೆ ಪೆಟ್ರೋಲ್ ಹಾಕಿ ಸುಟ್ಟು ಹಾಕಿದ ಘಟನೆ ನಡೆದಿದೆ. ಆ ಜಿಲ್ಲಾ ಪರಿಷತ್ತಿನ ಸದಸ್ಯನ ಮೇಲೂ ಹಲ್ಲೆ ಮಾಡತಕ್ಕಂಥ ವ್ಯವಸ್ಥಿತವಾದ ಸಂಚು ಅಲ್ಲಿ ನಡೆಯಿತು, ೧೩ನೇ ತಾರೀಖು ಹಲ್ಲೆ ನಡೆದ ತಕ್ಷಣ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ ಮೇಲೆ ೧೪ನೇ ತಾರೀಖು ಕಾರು ಸುಟ್ಟು ಹಾಕಿಸಿಕೊಂಡಂತಹ ವ್ಯಕ್ತಿಯ ಮೇಲೆಯೇ ಆರೋಪ ಹೊರಿಸಿದ್ದಾರೆ. ಜಿಲ್ಲಾ ಪರಿಷತ್ತಿನ ಸದಸ್ಯನನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಕೊಡಗು ಜಿಲ್ಲೆಯ ಹಿರಿಯ ರಾಜಕಾರಣಿ ಈ ಸಂದರ್ಭದಲ್ಲಿ ಈ ಒಂದು ವಿಚಾರವನ್ನು ಪ್ರಜಾವಾಣಿ ಪತ್ರಿಕೆಗೆ ತಿಳಿಸಿದ್ದಾರೆ. ಪತ್ರಿಕಾ ವರದಿ ಪ್ರಕಾರ ಈ ಸದನದ ಒಬ್ಬ ಸದಸ್ಯರೂ ಸಹ ಅದರಲ್ಲಿ ಶಾಮಿಲಾಗಿದ್ದಾರೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿನ ಸದಸ್ಯರ

ಕಾರು ಸುಟ್ಟು ಹಾಕಿರತಕ್ಕಂಥ ಪ್ರಕರಣದಲ್ಲಿ ಅವರು ಬೆಂಬಲ ಸಹ ಕೊಟ್ಟಿದ್ದಾರೆ. ಈ ವಿಚಾರವನ್ನು ಸರ್ಕಾರ ಮನಗಂಡಿರಲಿ ಎಂದು ನಾನು ಈ ಮಾತನ್ನು ಹೇಳಬೇಕಾಗಿದೆ. ಅಲ್ಲಿ ಹಲ್ಲೆ ನಡೆದಿದೆ ಎಂಬ ಮಾತನ್ನು ನಾನು ಹೇಳಿದ್ದಲ್ಲ, ನೀವು ಹೇಳಿದ್ದಲ್ಲ, ನಿಮ್ಮ ಪಕ್ಷದವರೇ ಹೇಳಿದ್ದಾರೆ. ಈ ಘಟನೆಯ ನಿಜ ಸ್ಥಿತಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿದುಕೊಳ್ಳಬೇಕಾದರೆ ನ್ಯಾಯವಾಗಿ ತನಿಖೆ ಮಾಡಿಸಿ, ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಒಬ್ಬ ಜನ ಪ್ರತಿನಿಧಿಯಾಗಿ, ಹಳ್ಳಿಯಲ್ಲಿ ಉಂಟಾದ ಒಂದು ವಿವಾದವನ್ನು ಬಗೆಹರಿಸಲು ಆ ಹಳ್ಳಿಗೆ ಹೋದಾಗ ಈ ಘಟನೆ ನಡೆದಿದೆ. ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದಾದ ಮೇಲೆ ನನ್ನ ಊರಿನಲ್ಲಿ ನಡೆದಂತಹ ಒಂದು ಘಟನೆಯನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಾನು ಈ ವಿಷಯವನ್ನು ತಮಗೆ ಪತ್ರದ ಮುಖಾಂತರ ಸಹ ತಿಳಿಸಿದ್ದೇನೆ. ತಾವು ಸರ್ಕಾರದ ಮಂತ್ರಿಗಳೊಬ್ಬರನ್ನು ಕಳುಹಿಸಿ ಅಲ್ಲಿ ನಡೆದಂತಹ ಘಟನೆ ಬಗ್ಗೆ ವರದಿಯನ್ನು ಸಹ ತರಿಸಿಕೊಂಡಿದ್ದೀರಿ. ಆ ವರದಿಯನ್ನು ಈ ಸದನದ ಮುಂದೆ ಇಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಘಟನೆ ನಡೆದಿದ್ದು, ನನ್ನ ಕ್ಷೇತ್ರದ ಲಾಲನಕೆರೆ ಎನ್ನುವ ಗ್ರಾಮದಲ್ಲಿ. ಈ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಸಹ ಕಳುಹಿಸಿದ್ದೆ. ಆದರೆ ಅದು ಇವತ್ತು ಬರಲಿಲ್ಲ. ಆದ್ದರಿಂದ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಆ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ೨೪ನೇ ತಾರೀಖು, ವಿಧಾನಸಭೆ ಚುನಾವಣೆ ನಡೆಯಿತು. ನಾನು ಆ ಕ್ಷೇತ್ರದಲ್ಲಿ ಒಬ್ಬ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೆ, ನಾನು ಕಾಂಗ್ರೆಸ್ ಪಕ್ಷದ ಟಿಕೆಟ್‌ಗೆ ಅರ್ಜಿ ಹಾಕಿದ್ದು ಟಿಕೆಟ್ ಸಿಗದಿದ್ದಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ನಿಂತೆ. ಈ ವಿಚಾರ ಎಲ್ಲರಿಗೂ ಗೊತ್ತಿದೆ. ಆ ಜಿಲ್ಲೆಯ ಲೋಕಸಭಾ ಸದಸ್ಯರು ನನಗೆ ಇಲ್ಲದ ಸಲ್ಲದ ಆರೋಪ, ಇಲ್ಲದ ಸಲ್ಲದ ಕಿರುಕುಳ ಕೊಟ್ಟರು, ಅದೇ ರೀತಿ ಜನತಾ ದಳದ ಪ್ರಮುಖ ಹಿಂಬಾಲಕರು ಸಹ ಸೇರಿಕೊಂಡು ನನಗೆ ಕಿರುಕುಳ ಕೊಟ್ಟರು. ಇವರೆಲ್ಲ ಸೇರಿ ನನ್ನ ವಿರುದ್ಧ ಪ್ರಚೋದನೆಯನ್ನುಂಟು ಮಾಡಿ ಗಲಾಟೆ ಮಾಡುವುದಕ್ಕೆ ಶುರು ಮಾಡಿದರು. ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ನಡೆದಿರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಾನು ನಾಗಮಂಗಲ ವಿಧಾನ ಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸುಮಾರು ೩೧ ಸಾವಿರಕ್ಕೂ ಹೆಚ್ಚು ಬಹುಮತದಿಂದ ಗೆದ್ದು ಬಂದಿದ್ದನ್ನು ಸಹಿಸದ ಲೋಕಸಭಾ ಸದಸ್ಯರು ನನ್ನ ಮೇಲೆ ಗುರುತರವಾದ, ಬೇಜವಾಬ್ದಾರಿಯುತವಾದ ಆರೋಪ ಹೊರಿಸಿ, ನನ್ನ ಹಣೆಗೆ ಕಪ್ಪು ಪಟ್ಟಿ ಕಟ್ಟಲು ಹೊರಟ್ಟಿದ್ದಾರೆ. ನನ್ನನ್ನೂ ಸಹಿತ ಅಪರಾಧಿಯನ್ನಾಗಿ ಮಾಡಿದ್ದಾರೆ. ನಾನು ಊರಿನಲ್ಲಿ ಗಲಾಟೆ ನಡೆದಾಗ ಇರಲಿಲ್ಲ. ನನ್ನನ್ನು ಪ್ರಥಮ ಆರೋಪಿಯನ್ನಾಗಿ ಮಾಡಿದ್ದಾರೆ. ಈ ವಿಚಾರದಲ್ಲಿ ತಾವು ಬೇಕಾದರೆ ಅಲ್ಲಿನ ಎಸ್.ಪಿ.ಯವರನ್ನು ಕೇಳಿ ಕಾನೂನಿಗೆ ವಿರುದ್ಧವಾಗಿದ್ದರೆ ಶಾಸಕರು ದೊಡ್ಡವರಲ್ಲ, ಡಿ.ಸಿ.ಪಿ.ಯವರು ದೊಡ್ಡವರಲ್ಲ. ಹಿಂದೆ ಗೃಹಮಂತ್ರಿಗಳೇ ಜೈಲಿಗೆ ಹೋಗಿರತಕ್ಕಂಥ ನಿದರ್ಶನಗಳನ್ನು ನಾವು ನೋಡಿದ್ದೇವೆ. ಇದರಲ್ಲಿ ನನ್ನ ಕೈವಾಡವೇನಾದರೂ ಇದ್ದರೆ ನನ್ನ ಮೇಲೆ ಆರೋಪ ಇದ್ದರೆ ಹೇಳಲಿ. ಈ ಘಟನೆ ಆಗಿರುವುದನ್ನು ನೋಡಿದರೆ ನಾವೆಲ್ಲ ನಾಚಿಕೆ ಪಡುವಂತಹ ಸಂಗತಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಗುಲ್ಬರ್ಗದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಕೊಲೆ ಮಾಡಿದ್ದಾರೆ. ಗೋಣಿಕೊಪ್ಪಲಿನಲ್ಲಿ ಒಬ್ಬ ಯುವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ನಡೆದಿದೆ. ನಾನೂ ಒಬ್ಬ ಯುವಕನ ಮೇಲೆ ಹಲ್ಲೆ ಮಾಡುವುದಕ್ಕೆ ಹೊರಟರೆ, ಯುವ ರಾಜಕಾರಣಿಗಳ ಮೇಲೆ ದೊಡ್ಡ ರಾಜಕಾರಣಿಗಳು, ಅನುಭವಸ್ಥ ಕೆಲವು ರಾಜಕಾರಣಿಗಳು ನಿಯೋಜಿತ ಹಲ್ಲೆ ಮಾಡಿ ನಮ್ಮನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪೇನಾಗುವುದಿಲ್ಲ. ದಯಮಾಡಿ, ಮುಖ್ಯಮಂತ್ರಿಗಳು ಇವೆಲ್ಲದರ ಬಗ್ಗೆ ಸಹಿತ ವರದಿ ತರಿಸಿಕೊಂಡು ನಿಮ್ಮ ಕಾಲದಲ್ಲಾದರೂ ಸಹಿತ ನಮ್ಮಂಥ ಯುವ ರಾಜಕಾರಣಿಗಳ, ಯುವ ಮುಖಂಡರುಗಳು ಬೆಳೆಯುವುದಕ್ಕೆ ಅವಕಾಶ ಕೊಡಬೇಕೆಂದು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು, ಈ ಎಲ್ಲಾ ವಿಚಾರಗಳ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ, ಯಾರು ತಪ್ಪು ಮಾಡಿದ್ದಾರೆ, ಅಂಥಾ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದರ ಮೂಲಕ ಜನತೆಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರೂ ಹಾಗೂ ಸನ್ಮಾನ್ಯ ಸದಸ್ಯರುಗಳು, ಈ ರಾಜ್ಯದಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ವಿವರವಾದ ಚಿತ್ರವನ್ನು ಇಟ್ಟಿದ್ದಾರೆ. ಒಂದು ಇನ್ಸಿಡೆಂಟ್ ಆದ ತಕ್ಷಣ ಒಂದು ಇಲಾಖೆಯನ್ನು ಹೊಗಳತಕ್ಕಂಥಾದ್ದು ಅಥವಾ ತೆಗಳತಕ್ಕಂಥಾದ್ದು ಅಳತೆಗೋಲಾಗಬಾರದು. ಒಂದು ಘಟನೆಯಿಂದ

ಆ ಇಲಾಖೆಯನ್ನೇ ಮೆಶರ್ ಮಾಡತಕ್ಕದ್ದಾಗಬಾರದು. ಏಕೆಂದರೆ, ಪೋಲೀಸ್ ಇಲಾಖೆ ಬಗ್ಗೆ ನಮ್ಮ ಸದನದ ಕೆಲವು ಕಡತಗಳನ್ನು ಓದಿದಾಗ, ಮಾನ್ಯ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಮಾತನ್ನು ಹೇಳಿದ್ದಾರೆ. ಯಾರೋ ಒಬ್ಬ ಮಾನ್ಯ ಸದಸ್ಯರು ಪೋಲಿಸ್ ಇಲಾಖೆ ಬಗ್ಗೆ ಪ್ರಶ್ನೆ ಮಾಡಿದಾಗ, ಆಯಿತು ನಾನು ಪೋಲೀಸ್ ಇಲಾಖೆಯನ್ನು ವಿತ್‌ಡ್ರಾ ಮಾಡಿಬಿಡುತ್ತೇನೆ ಸರ್ಕಾರ ನಡೆಯಲಿ, ಆಡಳಿತ ಸುಲಭವಾಗಿ ನಡೆಯಲಿ ಎಂದು ಹೇಳಿದಾಗ ಅದೇ ಮಾನ್ಯ ಸದಸ್ಯರು ಮತ್ತೆ ಆ ರೀತಿ ಪೋಲೀಸ್ ಇಲಾಖೆಯನ್ನು ವಿತ್‌ಡ್ರಾ ಮಾಡಲಿಕ್ಕೆ ಆಗುತ್ತದೆಯೇ ಎನ್ನತಕ್ಕ ಪ್ರಶ್ನೆಯನ್ನು ಕೇಳಿದ್ದಾರೆ. ಅವತ್ತು ಸದನದಲ್ಲಿ ಯಾವ ರೀತಿ ಪರಿಸ್ಥಿತಿ ಉದ್ಭವವಾಯಿತು ಎನ್ನುವುದರ ಬಗ್ಗೆ ಓದಿದಾಗ ಅದು ನನಗೆ ನೆನಪಾಯಿತು. ಪೋಲಿಸ್ ಇಲಾಖೆ ಬೇಕು. ಅದು ಒಂದು ಡಿಸಿಪ್ಲಿನ್ಡ್ ಫೋರ್ಸ್. ಆದರೆ ಆ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳೆಲ್ಲರೂ ಸಹ ಒಳ್ಳೆಯವರು ಇದ್ದಾರೆ ಅಥವಾ ಕೆಟ್ಟವರು ಇದ್ದಾರೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಯಾವಾಗ ಈ ಪ್ರಶ್ನೆ ಬರುತ್ತದೆ ಎಂದರೆ ಇಂಥಾ ಘಟನೆಗಳು ನಡೆದಾಗ. ಗುಲ್ಬರ್ಗಾದಲ್ಲಿ ನಡೆದಿರತಕ್ಕಂಥ ಘಟನೆ ಆಗಿರಬಹುದು, ಶಹಬಾದ್‌ನಲ್ಲಿ ನಡೆದಿರತಕ್ಕಂಥ ಘಟನೆಯಾಗಿರಬಹುದು ಮತ್ತು ಬೇರೆ ಯಾವುದೇ ಕಡೆ ನಡೆದಿರತಕ್ಕಂಥ ಘಟನೆಗಳಾಗಿರಬಹುದು. ಹೈಯರ್ ಲೆವಲ್‌ನಲ್ಲಾಗಲೀ, ಲೋಯರ್ ಲೆವಲ್‌ನಲ್ಲಾಗಲೀ ಇರತಕ್ಕ ಕೆಲವು ಅಧಿಕಾರಿಗಳು ನಿಜವಾಗಿಯೂ ವೆರಿ ಡಿಸಿಪ್ಲೀನ್ಡ್ ಆಗಿದ್ದಾರೆ. ಕೆಲವು ಅಧಿಕಾರಿಗಳನ್ನು ನೋಡಿದಾಗ ಇವರು ಪೋಲಿಸ್ ಅಧಿಕಾರದಲ್ಲಿ ಇದ್ದಾರೋ ಅಥವಾ ಅವರಿಗೆ ಜವಾಬ್ದಾರಿ ಸ್ಥಾನ ಕೊಟ್ಟಿದ್ದಾರೋ, ಅವರು ಶಿಸ್ತಿಗೆ ಒಳಪಟ್ಟಿದ್ದಾರೋ ಅಥವಾ ಟ್ರೈನಿಂಗ್ ಆಗಿದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಮಾನ್ಯ ಅಧ್ಯಕ್ಷರೆ, ಪೋಲಿಸ್ ಇಲಾಖೆಯು ಮಾರಲ್ ಸ್ಟ್ಯಾಂಡರ್ಡ್ ದಿವಸದಿಂದ ದಿವಸಕ್ಕೆ ಕಡಿಮೆಯಾಗುತ್ತಿದೆ. ಏಕೆ ಕಡಿಮೆ ಆಗುತ್ತಿದೆ ಎಂದರೆ, ಇಂಥ ಅಧಿಕಾರಿಗಳ ಸ್ವಾರ್ಥದಿಂದ ಆಗಿರಬಹುದು ಅಥವಾ ಕೆಲವು ಸಲ ಇನ್ಸ್ಟಿಗೇಷನ್‌ನಿಂದ ಆಗಿರಬಹುದು. ಆದರೇ ನನ್ನ ಸ್ನೇಹಿತ ಸದಸ್ಯರೊಬ್ಬರು ಹೇಳಿದ ಹಾಗೆ, ನಮ್ಮಂಥ ಯುವಕರಿಗೆ ಕೆಲವು ಸಲ ರಕ್ಷಣೆ ಬೇಕಾಗುತ್ತದೆ. ಯಾವ ರೀತಿ ರಕ್ಷಣೆ ಬೇಕಾಗುತ್ತದೆ ಎಂದರೆ, ಕೆಲವು ಸಂದರ್ಭಗಳಲ್ಲಿ ನಮಗೆ ಪೋಲಿಸರನ್ನು ಉಪಯೋಗಿಸಿಕೊಂಡು ಬಡಿಯುತ್ತಂಥ ಪ್ರಸಂಗಗಳು ನಡೆದಿವೆ. ನಾನು ಅವರ ಪರವಾಗಿ ಅಥವಾ ವಿರೋಧವಾಗಿ ಇದನ್ನು ಮಾತನಾಡುವುದಲ್ಲ. ಕೆಲವು ಸಲ ನಮಗೆ ಬೆದರಿಕೆ ಹಾಕತಕ್ಕಂಥ ತಂತ್ರ ಮಾಡುತ್ತಾರೆ. ನಾವು ಏನಾದರೂ ಹೋರಾಟ ಮಾಡುವ ದಿಸೆಯಲ್ಲಿ ಇದ್ದಾಗ ಪೋಲಿಸರನ್ನು ಹಚ್ಚಿ ನಮ್ಮನ್ನು ಬಡಿಸತಕ್ಕಂಥದ್ದು ನಡೆದಿದೆ. ಇಂತಹ ಘಟನೆಗಳಾದಾಗ ಕೆಲವು ಪೋಲಿಸಿನವರು ನಮ್ಮ ಪರವಾಗಿಯೇ ಇರುತ್ತಾರೆ. ಏಕೆಂದರೆ, ಸತ್ಯಾ ಸತ್ಯತೆಯನ್ನು ಸಮತೋಲನ ಮಾಡಿ ನೋಡತಕ್ಕಂಥ ಅಧಿಕಾರಿಗಳೂ ಇದ್ದಾರೆ. ಗುಲ್ಬರ್ಗಾದಲ್ಲಿ ಒಬ್ಬರು ಯೂತ್ ಕಾಂಗ್ರೆಸ್ ಕಾರ್ಯಕರ್ತರು ಪೋಲೀಸ್ ಠಾಣೆಯಲ್ಲಿ ಸತ್ತರು. ಅವರು ಹೇಗೆ ಸತ್ತರು ? ಚೆಸ್ಟ್ ಪೈನ್‌ನಿಂದ ಸತ್ತರೆ? ಈ ರೀತಿ ಆಗಬೇಕಾದರೆ ಪೋಲೀಸ್ ಅಧಿಕಾರಿಗಳು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿತ್ತೆಂದು ನಾನು ಹೇಳುತ್ತೇನೆ. ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಅವರಿಗೆ ಒಳ್ಳೆಯ ಟ್ರೀಟ್‌ಮೆಂಟ್‌ನ್ನು ಕೊಡಿಸಬೇಕಾಗಿತ್ತು. ಯಾರಾದರೂ ಪೋಲೀಸ್ ಕಸ್ಟಡಿಯಲ್ಲಿ ಇದ್ದಮೇಲೆ ಅವರ ಪೂರ್ಣ ಜವಾಬ್ದಾರಿ ಪೋಲೀಸಿನವರದು. ಪೋಲೀಸಿನವರು ಅವರ ಜವಾಬ್ದಾರಿ ಬಿಟ್ಟು ವರ್ತನೆ ಮಾಡಿರತಕ್ಕ ಸರ್ಕಂಸ್ಟೆನ್ಸಸನ್ನು ನೋಡಿದರೆ ಅವರ ಬಗ್ಗೆ ನಮಗೆ ಅನುಮಾನ ಇದೆ. ಇಂಥ ಘಟನೆಗಳು ಬೇಜವಾಬ್ದಾರಿಯಿಂದ ನಡೆಯುತಕ್ಕಂಥ ಘಟನೆಗಳು. ಈ ಘಟನೆಗಳಿಗೆ ಯಾರು ಕಾರಣಕರ್ತರಾಗಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಪೋಲಿಸ್ ಅಧಿಕಾರಿಗಳಲ್ಲಿ ಕೆಲವರು ಯಾವಾಗಲೂ ತಮಗೆ ಬೇಕಾದ ಸ್ಥಾನಗಳಲ್ಲೇ ಇರುತ್ತಾರೆ. ಹಿಂದಿನ ಸರ್ಕಾರ ಟ್ರಾನ್ಸ್‌ಫರ್ ಮಾಡುವುದರಲ್ಲಿ ಎತ್ತಿದ ಕೈ ಆಗಿತ್ತು. ಹಿಂದಿನ ಸರ್ಕಾರ ಇದ್ದಾಗ ನಮ್ಮ ಕಡೆ ಮೂರು ಮೂರು ತಿಂಗಳಿಗೆ ಒಬ್ಬೊಬ್ಬರು ಬದಲಾವಣೆಯಾದರು. ವರ್ಷಕ್ಕೆ ಒಬ್ಬೊಬ್ಬರನ್ನು ಬದಲಾವಣೆ ಮಾಡಿದರು. ಹಿಂದಿನ ಸರ್ಕಾರದವರು ಇಟ್ಟಿರತಕ್ಕಂಥ ಅಧಿಕಾರಿಗಳೇ ಈಗಲೂ ಮುಂದುವರಿಯುತ್ತಿದ್ದಾರೆ ಅದಕ್ಕೋಸ್ಕರ ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಪೋಲೀಸ್ ಇಲಾಖೆಯಲ್ಲಿ ಯಾವ ಯಾವ ಅಧಿಕಾರಿಗಳು ಎಲ್ಲೆಲ್ಲಿ ಎಷ್ಟೆಷ್ಟು ವರ್ಷಗಳಿಂದ ಇದ್ದಾರೂ ಅವರುಗಳನ್ನು ಬದಲಾವಣೆ ಮಾಡಿ. ಅವರುಗಳಿಗೆ ಈ ರೀತಿ ಬಿಹೇವ್ ಮಾಡಲಿಕ್ಕೆ ಅವಕಾಶ ಕೊಡಬೇಡಿ. ಕೆಲವರಂತೂ ಬಹಳ ವರ್ಷಗಳಿಂದ ಒಂದೇ ಕಡೆ ಉಳಿದುಕೊಂಡಿದ್ದಾರೆ. ಒಂದೊಂದುಸಾರಿ ಅವರು ಬಹಳ ಸ್ವೇಚ್ಛಾಚಾರದಿಂದ ವರ್ತನೆ ಮಾಡುತ್ತಾರೆ. ಒಂದೊಂದು ಸಾರಿ ಸ್ಟೇಷನ್‌ಗೆ ಹೋದರೆ ಅವರು ಗೌರವದಿಂದ ನಡೆದುಕೊಳ್ಳದೇ ಇರುವುದನ್ನು ನೋಡಬಹುದು. ನಾವು ಶಾಸಕರಾಗಲೀ, ಜಿಲ್ಲಾ ಪರಿಷತ್ತಿನ ಸದಸ್ಯರಾಗಲೀ ಅಥವಾ ಯಾರೇ ಒಬ್ಬ ಸಭ್ಯ ವ್ಯಕ್ತಿಯಾಗಲಿ ಸ್ಟೇಷನ್‌ಗೆ ಹೋದರೆ ಅವರುಗಳಿಗೆ, ಮೊದಲು ಸ್ಟೇಷನ್‌ನಲ್ಲಿರತಕ್ಕ ಅಧಿಕಾರಿ

ಮರ್ಯಾದೆ ಕೊಡತಕ್ಕಂಥಾದ್ದನ್ನು ಕಲಿಯಬೇಕು. ಈಗ ಪೋಲೀಸ್ ಠಾಣೆಗಳಲ್ಲಿ ವರ್ತನೆ ಹೇಗೆ ಇದೆ ಎಂದರೆ, ಅಲ್ಲಿಗೆ ಒಬ್ಬ ಶಾಸಕನು ಹೋದರೂ ಕೂಡ ಅವರು ಬಹಳ ಕೀಳಾಗಿ ನಡೆದುಕೊಳ್ಳುತ್ತಾರೆ. ಕೆಳಮಟ್ಟದಲ್ಲಿನ ಅಧಿಕಾರಿಗಳಲ್ಲಿ ಅದು ಹೆಚ್ಚಾಗಿ ಕಾಣುತ್ತದೆ. ಅದೇ ಎಸ್.ಪಿ. ಮಟ್ಟದಲ್ಲಿ ಹೋದರೆ ಅವರು ತುಂಬಾ ಸೌಜನ್ಯ ಪೂರ್ವಕವಾಗಿ ವರ್ತನೆ ಮಾಡುತ್ತಾರೆ. ಈ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಟ್ರೈನಿಂಗ್ ಕೊಡುವಾಗ ಸಾರ್ವಜನಿಕರ ಜೊತೆಗೆ ಹೇಗೆ ಮಾತನಾಡಬೇಕು, ಹೇಗೆ ವರ್ತಿಸಬೇಕು ಎಂದು ಹೇಳಿಕೊಡುತ್ತಾರೆ, ಈ ಪಿಎಸ್‌ಐಗಳ ದೃಷ್ಟಿಯಲ್ಲಿ ಅಪರಾಧಿಗಳೂ ಒಂದೇ ನ್ಯಾಯವನ್ನು ಕೇಳಲು ಬಂದವರೂ ಒಂದೇ ಆಗಿ ಬಿಡುತ್ತಾರೆ. ಯಾರೇ ಬಂದರೂ ಇವರು ಒಂದೇ ರೀತಿಯಲ್ಲಿ ಟ್ರೀಟ್ ಮಾಡುತ್ತಾರೆ. ಹೀಗಾಗಿ ಅಲ್ಲಿಗೆ ಬಡವರು ನ್ಯಾಯ ಬೇಡುವುದಕ್ಕಾಗಿ ಹೋದರೆ ನ್ಯಾಯ ಸಿಗಲಾರದು ಎಂಬ ಭಾವನೆ ಜನರಲ್ಲಿ ಬಂದು ಬಿಟ್ಟಿದೆ. ಪೋಲೀಸ್ ಠಾಣೆಗೆ ಯಾರೇ ಆಗಲಿ, ಕಾರಣ ನಿಮಿತ್ತ ಹೋದರೂ ಕೂಡ ಸಭ್ಯ ರೀತಿಯಲ್ಲಿ ನಡೆದುಕೊಳ್ಳುವಂಥ ಒಂದು ಪರಿಪಾಠವು ಅಧಿಕಾರಿಗಳಲ್ಲಿ ಬೆಳೆದು ಬರಬೇಕು. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಅಪರಾಧಿಗಳಿಗೆ ಶಿಕ್ಷೆ ಆಗಬೇಕು. ಆದರೆ ನಿರಪರಾಧಿಗಳಿಗೆ ಯಾವುದೇ ತರಹದ ತೊಂದರೆಗಳು ಬರಬಾರದು. ಅವರು ನ್ಯಾಯಕ್ಕಾಗಿ ಠಾಣೆಗಳಿಗೆ ಹೋದರೆ ಅವರಿಗೆ ಸೂಕ್ತ ಮರ್ಯಾದೆ ಸಿಕ್ಕಬೇಕು. ಈ ಕುರಿತು ಅಧಿಕಾರಿಗಳು ಸಾರ್ವಜನಿಕರಲ್ಲಿ ಯಾವರೀತಿಯಲ್ಲಿ ವರ್ತಿಸಬೇಕೆಂಬ ಬಗ್ಗೆ ಸೂಚನೆಗಳನ್ನು ಮೇಲಧಿಕಾರಿಗಳ ಮೂಲಕ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇತ್ತೀಚೆಗೆ ಯೂತ್ ಕಾಂಗ್ರೆಸ್‌ನ ಮೂರು ಜನ ಯುವಕರು ಸತ್ತಿದ್ದಾರೆ, ಅವರೆಲ್ಲರೂ ೨೦–೩೦ ವರ್ಷ ವಯಸ್ಸಿನವರಾಗಿದ್ದಾರೆ. ಅವರ ಸಂಸಾರದವರು ಕೂಡ ಚಿಕ್ಕವಯಸ್ಸಿನವರಾಗಿದ್ದು, ಗರ್ಭಿಣಿಯರಾಗಿದ್ದಾರೆ ಎಂದು ನಮ್ಮ ಯೂತ್ ಕಾಂಗ್ರೆಸ್‌ನವರು ನೋಡಿಕೊಂಡು ಬಂದವರು ಹೇಳಿದ್ದಾರೆ. ಈ ಜನರಿಗೆ ಯಾವ ರೀತಿಯ ಪರಿಹಾರವನ್ನು ಸರಕಾರದವರು ಕೊಡುತ್ತಾರೆ ಎಂಬ ಬಗ್ಗೆ ದಯಮಾಡಿ ಹೇಳಬೇಕು. ಮಾನ್ಯ ಮುಖ್ಯಮಂತ್ರಿಯವರು ಪತ್ರಿಕೆಗಳಲ್ಲಿ ಪರಿಹಾರ ಕೊಡುವ ಬಗ್ಗೆ ಹೇಳಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮೃತ ಯುವಕರ ಸಂಸಾರದವರಿಗೆ ಸೂಕ್ತ ಸಹಾಯವನ್ನು ಸಕಾಲದಲ್ಲಿ ಸರಕಾರದವರು ಕೊಡಬೇಕು. ಅಂತಹ ಕುಟುಂಬಗಳು ಶಾಶ್ವತವಾಗಿ ಬದುಕಿ ಬಾಳುವಂತೆ ನೆರವಾಗಲು ಶಾಶ್ವತ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥಿಸಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್.—ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಆಡಳಿತ ನಡೆಸುತ್ತಿರುವಾಗ ರಕ್ಷಣಾ ಇಲಾಖೆಯು ಪ್ರಜಾಪ್ರಭುತ್ವದ ತಳಹದಿಯ ಮೇಲೆ ದೇಶದ ರಕ್ಷಣೆ ಮಾಡತಕ್ಕಂಥ ಗುರುತರವಾದ ಜವಾಬ್ದಾರಿಯನ್ನು ಹೊಂದಿದೆ. ಈ ಇಲಾಖೆಯು ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು. ಅದೇ ರೀತಿಯಲ್ಲಿ ಪ್ರಜಾಪ್ರಭುತ್ವದ ಆಡಳಿತಕ್ಕೆ ಅನುಗುಣವಾಗಿ ದಕ್ಷತೆಯಿಂದ ಆಡಳಿತ ಕಾರ್ಯವನ್ನು ನಡೆಸಬೇಕೆಂಬುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಸಾಮಾನ್ಯವಾಗಿ ಪೋಲೀಸ್ ಇಲಾಖೆಯ ಮೇಲೆ ಮೊದಲಿನಿಂದಲೂ ಆಪಾದನೆಗಳು ಮತ್ತು ಪ್ರಶಂಸೆಗಳು ಬರುತ್ತಾ ಇವೆ. ಈಗ ರಾಜ್ಯದಲ್ಲಿ ಹೊಸ ಆಡಳಿತ ಜಾರಿಗೆ ಬಂದಿದೆ ನಮ್ಮ ಪಕ್ಷ ಆಡಳಿತಕ್ಕೆ ಬಂದಿದೆ. ನಮ್ಮ ಪಕ್ಷದ ನಾಯಕರ ನೇತೃತ್ವದಲ್ಲಿ ಪೋಲೀಸ್ ಇಲಾಖೆ ಕೆಲಸ ಮಾಡುತ್ತಾ ಇದೆ. ಬಹುಶಃ ಗುಲ್ಬರ್ಗದಲ್ಲಿ ಇತ್ತೀಚೆಗೆ ನಡೆದಿರತಕ್ಕಂಥ ಘಟನೆಗಳು ರಾಜ್ಯದಲ್ಲಿ ಹಿಂದೆಯೂ ಕೂಡ ನಡೆದಿದ್ದಾವೆ, ಹಿಂದೆ ರಾಜ್ಯದಲ್ಲಿ ಜನತಾ ಪಕ್ಷದ ಮತ್ತು ಜನತಾ ದಳದ ಆಡಳಿತ ಇದ್ದಾಗಲೂ ಕೂಡಾ ಇಂತಹ ಘಟನೆಗಳು ನಡೆದಿರುವುದು ನಮ್ಮೆಲ್ಲರ ಗಮನದಲ್ಲಿದೆ. ಆಗ ಪೋಲೀಸ್ ಇಲಾಖೆಯು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿತ್ತೊ ಅದನ್ನು ಈಗ ಒಂದು ಪರಿವರ್ತನೆಯನು ಮಾಡಿ ಅದಕ್ಕೊಂದು ಕಾಯಕಲ್ಪವನ್ನು ನೀಡತಕ್ಕಂಥ ಕಾರ್ಯವನ್ನು ಮಾಡಬೇಕಾಗಿದೆ. ಪೋಲೀಸ್ ಇಲಾಖೆಯಲ್ಲಿ ಕೆಳಹಂತದಲ್ಲಿ ಸಾರ್ವಜನಿಕರ ಸಂಪರ್ಕ ಬಹಳಷ್ಟು ಇರುತ್ತದೆ, ಸಾರ್ವಜನಿಕರ ದಿನನಿತ್ಯದ ವ್ಯವಹಾರಗಳಿಂದ ಹಿಡಿದು, ದರೋಡೆ, ಕಳ್ಳತನ, ಲೂಟಿ ಇವೇ ಮುಂತಾದುವನ್ನು ಹತೋಟಿ ಮಾಡುವ, ಕಾನೂನು ವ್ಯವಸ್ಥೆಯನ್ನು ಸರಿಯಾಗಿಡುವ ಮುಖ್ಯವಾದಂಥ ಕೆಲಸವನ್ನು ಪೋಲೀಸ್ ಇಲಾಖೆಯು ಹೊಂದಿರುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಸಂಪರ್ಕ ಕೆಳ ಹಂತದ ಪೋಲೀಸ್ ಅಧಿಕಾರಿಗಳಲ್ಲಿ ಜಾಸ್ತಿ ಇರುತ್ತದೆ. ಅವರು ಸಂಯಮದಿಂದ ವರ್ತಿಸಬೇಕು ಮತ್ತು ದಕ್ಷತೆಯಿಂದ ಕೆಲಸ ಮಾಡಿಕೊಡಬೇಕು. ಚಾಕುಚೂರಿ ಸಂಸ್ಕೃತಿಯನ್ನು ನಿಲ್ಲಿಸಬೇಕು ಮತ್ತು ಸಾಮಾನ್ಯ ಜನರಿಗೆ, ದುರ್ಬಲರಿಗೆ, ಹರಿಜನರಿಗೆ ರಕ್ಷಣೆ ಕೊಡಬೇಕೆಂಬ ನಿಯಮ ಮತ್ತು ಆದೇಶ ಸರ್ಕಾರದಿಂದ ಇದೆ. ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಐದಾರು ವರ್ಷದ ಜನತಾ ಪಕ್ಷದ

ಆಡಳಿತದಲ್ಲಿ ಪೋಲೀಸ್ ಇಲಾಖೆಯನ್ನು ಸಾಕಾದಷ್ಟು ರಾಜಕೀಯಕ್ಕೆ ಉಪಯೋಗಿಸಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾವು ಆ ಇಲಾಖೆಯಿಂದ ಏನು ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ: ದಕ್ಷತೆಗೆ ಕುಂದುಂಟಾಗುವ ರೀತಿಯಲ್ಲಿ ಇಲಾಖಾ ಅಧಿಕಾರಿಗಳು...

ಶ್ರೀ ಡಿ. ಬಿ. ಚಂದ್ರೇಗೌಡ.—ಹೀಗೆ ಜನರಲ್ಲಾಗಿ ಒಂದು ಚಾರ್ಜ್‌ಮಾಡಿ ಬಿಟ್ಟು ಬಿಡಬಹುದೊ ? ಸ್ಪೆಸಿಫಿಕ್ಕಾಗಿ ಇನ್‌ಸ್ಟೆನ್ಸಸ್ ಇದ್ದರೆ ಹೇಳಲಿ. ಜನತಾ ಸರ್ಕಾರ ಇದ್ದಾಗ ರಾಜಕೀಯಕ್ಕಾಗಿ ಬಳಸಿಕೊಂಡರು ಅಂದರೆ ಯಾವುದಾದರೂ ಒಂದೆರಡು ನಿದರ್ಶನಗಳನ್ನಾದರೂ ಕೊಡಿ. ಅದರ ಮೇಲೆ ಒಂದು ದಿವಸ ಚರ್ಚೆ ಮಾಡೋಣ.

ಛೇರ್ಮನ್.—ಮಹಾದೇವ್ ಅವರೇ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಎಂ. ಮಹಾದೇವ್.—ಈಗ ಮಲ ತಿನ್ನಿಸುವ ವಿಚಾರದಲ್ಲಿ, ಬೆತ್ತಲೆಯಾಗಿ ಅವರಿಗೆ ಅನಾಹುತ ಮಾಡಿದಂಥ ವಿಚಾರದಲ್ಲಿ ಕಳ್ಳತನ ಆಗಿರುವಂಥ ವಿಚಾರದಲ್ಲಿ, ಕೊಲೆಯಾಗಿರುವಂಥ ವಿಚಾರದಲ್ಲಿ ಬೇಕಾದಷ್ಟು ಇದೆ, ಆ ಎಲ್ಲ ಜಡತ್ವವನ್ನು ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಹೊಸ ಸರ್ಕಾರ ವಹಿಸಿಕೊಂಡ ೪೫ ದಿವಸಗಳಲ್ಲಿ ಶುದ್ಧಿ ಮಾಡಬೇಕಾದರೆ ಕಷ್ಟ ಇದೆ. ಅಲ್ಲಿ ಜಡತ್ವ ಇದೆ, ಅದಕ್ಷತೆ ಇದೆ, ರಾಜಕೀಯ ಪ್ರಭಾವ ಹೋಗಿಲ್ಲ. ಇದಕ್ಕೆ ಸೆಲ್ಯೂಷನ್ ಏನು ? ಗ್ರಾಮೀಣ ಪ್ರದೇಶದಲ್ಲಿರುವ ಅಧಿಕಾರಿಗಳು ಜನಸಾಮಾನ್ಯರ ಸಂಪರ್ಕ ಇಟ್ಟುಕೊಳ್ಳದಿದ್ದರೆ ಬೇಕಾದಷ್ಟು ತೊಂದರೆಗಳಾಗುತ್ತವೆ. ರಾಜ್ಯಮಟ್ಟದ ಆಡಳಿತದಲ್ಲಿ ಅಥವಾ ಜಿಲ್ಲಾಮಟ್ಟದ ಆಡಳಿತದಲ್ಲಿ ಪೋಲೀಸ್ ಅಧಿಕಾರಿಗಳು ಸೌಜನ್ಯದಿಂದ ವರ್ತಿಸುತ್ತಿದ್ದಾರೆ ಅಥವಾ ಅವರಿಗೆ ಹೇಳಿದರೆ ಕೇಳುವಂತಹ ಸೌಜನ್ಯವಾದರೂ ಇದೆ. ದಕ್ಷತೆಯಿಂದ ಆಡಳಿತ ಕೊಡಬೇಕೆನ್ನುವುದೂ ಇದೆ. ಜಿಲ್ಲಾಮಟ್ಟದ ಮತ್ತು ರಾಜ್ಯಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ಇದೆ, ನಮ್ಮನ್ನು ಕ್ವೆಶ್ಚನ್ ಮಾಡುವವರಿದ್ದಾರೆ, ನಾವು ಸರಿಯಾಗಿ ನಡೆದು ಕೊಳ್ಳಬೇಕು ಎನ್ನುವ ಅರಿವು ಅವರಿಗೆ ಇದೆ. ಆದೇ ಕೆಳಮಟ್ಟದ ಅಧಿಕಾರಿಗಳಿಗೆ ಆ ಜವಾಬ್ದಾರಿ ಇಲ್ಲ, ಈಗ ಏನಾಗುತ್ತದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಚುನಾಯಿತರಾಗಿರುವ ಜನಗಳಿಗಾಗಲಿ ಯಾರಿಗೇ ಆಗಲಿ, ಜನಸಾಮಾನ್ಯರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಇಲಾಖೆಯಲ್ಲಿ ಅವರಿಗೆ ಗೊತ್ತಿಲ್ಲದಂತೆಯೇ ಅನ್ಯಾಯ ನಡೆಯುತ್ತಿದ್ದರೆ ನಾವು ಅವರಿಗೆ ಹೇಳಬೇಕಾಗುತ್ತಿದೆ. ನೀವು ಸರಿಯಾದಂಥ ಕ್ರಮ ತೆಗೆದುಕೊಳ್ಳುತ್ತಿಲ್ಲ, ಗೂಂಡಾ ಪ್ರವೃತ್ತಿ ಜಾಸ್ತಿಯಾಗುತ್ತಿದೆ, ಚಾಕು ಸಂಸ್ಕೃತಿ ಜಾಸ್ತಿಯಾಗುತ್ತಿದೆ ದುರ್ಬಲರಿಗೆ ಹರಿಜನರಿಗೆ ನೀವು ರಕ್ಷಣೆ ಕೊಡುವುದಕ್ಕಾಗುತ್ತಿಲ್ಲವೆಂದು ಹೇಳಿದಾಗ ಒಮ್ಮೊಮ್ಮೆ ಅವರಿಗೆ ಸಿಟ್ಟು ಬರುತ್ತದೆ ಏನಪ್ಪ ಇವರು ನಮಗೆ ಪದೇ ಪದೇ ಹೇಳುತ್ತಿದ್ದಾರೆಂದು ಸಿಟ್ಟು ಬರುತ್ತದೆ. ಕೆಲವು ನಿದರ್ಶನಗಳನ್ನು ನಾನು ಹೇಳುತ್ತಿದ್ದೇನೆ. ಒಬ್ಬ ದುರ್ಬಲ ಒದೆ ತಿಂದು ಪೋಲೀಸ್ ಸ್ಟೇಷನ್‌ಗೆ ಹೋದರೆ ಈ ರಾಜಕೀಯ ಪ್ರಭಾವದಲ್ಲಿ ಅವನಿಗೆ ಸರಿಯಾದ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಅವನು ಬಂದು ಹೇಳುತ್ತಾನೆ. ಸ್ವಾಮಿ, ನಾನು ಅರ್ಜಿ ಕೊಟ್ಟು ೪-೫ ದಿವಸ ಆಯಿತು, ನನಗೆ ರಕ್ಷಣೆ ಕೊಟ್ಟಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ನನಗೆ ಏಟು ಬಿದ್ದಿದೆ ಎಂದು ಹೇಳಿದಾಗ...

ಛೇರ್ಮನ್.—ಮಾನ್ಯ ಸದಸ್ಯರು ಈಗ ಚರ್ಚೆಗೆ ಬಂದಿರುವ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಎಂ. ಮಹದೇವ್.—ಕೊಲೆಯಾಗಿರಲಿ ಅಥವಾ ದರೋಡೆಯಾಗಿರಲಿ, ಯಾವುದೇ ರೀತಿ ಘಟನೆಯಾಗಿರಲಿ ಅದನ್ನು ಯಾವಾಗ ಲಘುವಾಗಿ ತೆಗೆದುಕೊಳ್ಳುತ್ತಾರೋ ಆಗ ರಾಜಕೀಯ ಪ್ರಭಾವಕ್ಕೆ ಅಧಿಕಾರಿಗಳು ಎಡೆ ಕೊಡುತ್ತಾರೆ. ಆಗ ನ್ಯಾಯವಾದ ರಕ್ಷಣೆ ಜನಸಾಮಾನ್ಯರಿಗೆ ಸಿಗುವುದಿಲ್ಲ ಎನ್ನುವ ದೃಷ್ಟಿಯಿಂದ ಇದನ್ನು ಕೋಟ್ ಮಾಡುತ್ತಿದ್ದೇನೆ. ಸ್ವಾಮಿ, ಒಂದು ಘಟನೆಯಾಗಿದೆ. ನನಗೆ ಕೊಲೆ ಬೆದರಿಕೆ ಪತ್ರ ಬಂದಿದೆ ತಿರುಗಾಡುವುದಕ್ಕೇ ಬಿಡುವುದಿಲ್ಲವೆಂದು ಸುದ್ದಿ ಬಂದಿದೆ ನಮಗೆ ರಕ್ಷಣೆ ಕೊಡಿ ಎಂದು ಕೇಳಿದಾಗ ಅಧಿಕಾರಿಗಳು ಇಮ್ಮಿಡಿಯೇಟಾಗಿ ಆಕ್ಷನ್ ತೆಗೆದುಕೊಂಡರೆ ಇಂತಹ ಘಟನೆಗಳು ತಪ್ಪುತ್ತವೆ. ಮತ್ತು ಲಾಕಪ್‌ಗಳಲ್ಲಿ ಅನೇಕ ವಿಚಾರಗಳಿಂದ ಅನಾಹುತವಾಗುತ್ತವೆ. ವೀರೇಂದ್ರ ಪಾಟೀಲರ ಸರ್ಕಾರದಲ್ಲಿ, ಕಾಂಗ್ರೆಸ್ ಸರ್ಕಾರದಲ್ಲಿ ಈ ರೀತಿ ಆಯಿತು, ಇದರಿಂದ ಇವರ ಆಡಳಿತ ಕಡಿಮೆ, ದಕ್ಷತೆ ಇಲ್ಲವೆಂದು ಆಪಾದನೆ ಮಾಡುವುದು ಸರಿಯಲ್ಲ. ಇಂಥ ಘಟನೆಗಳು ಹಿಂದೆಯೂ ನಡೆದಿವೆ. ನಡೆದು ಅದರ ಪ್ರಭಾವದಿಂದ ಅಧಿಕಾರಿಗಳಲ್ಲಿ ಒಂದು ಜಡತ್ವ ಬಂದಿದೆ. ಆ ಜಡತ್ವವನ್ನು ಹೋಗಿಸಿ ಸರಿಯಾದ ದಕ್ಷ ರೀತಿಯಲ್ಲಿ ಕೆಲಸ ಮಾಡಿಸಬೇಕಾದಂಥ ಪರಿಸ್ಥಿತಿ ಇದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದರ ಬಗ್ಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಾದಂಥ ಒಂದು ಆದೇಶವನ್ನು ಕೊಡಬೇಕು. ಪೋಲೀಸ್ ಅಧಿಕಾರಿಗಳು ತಮ್ಮ ಕಾನೂನಿನ ಚೌಕಟ್ಟಿನ ವ್ಯಾಪ್ತಿಯಲ್ಲಿ ಸರಿಯಾಗಿ ವರ್ತಿಸಬೇಕು. ಇಂಥ ಘಟನೆಗಳಿಗೆ ಅವಕಾಶವನ್ನು ಕೊಡ

ಬಾರದು. ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರು ಯಾರೇ ಆಗಲಿ ಇಂಥ ವಿಚಾರಗಳನ್ನು ಪೋಲೀಸರ ಗಮನಕ್ಕೆ ತಂದಾಗ ಅವರು ಸಂಯಮದಿಂದ ಸೂಕ್ತ ರೀತಿಯಲ್ಲಿ ವರ್ತನೆ ಮಾಡಿ ಅದರ ಬಗ್ಗೆ ಆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಾಲ್ಕೈದು ದಿವಸಗಳ ಮೇಲೆ ಕ್ರಮ ತೆಗೆದುಕೊಂಡರೆ ಕೊಲೆ ಬೆದರಿಕೆ ಬಗ್ಗೆ ಪತ್ರ ಬರುತ್ತದೆ, ಮತ್ತು ಸ್ಟೇಷನ್‌ಗಳಲ್ಲಿಯೂ ಕೂಡಾ ಇಂಥ ಅನಾಹುತಗಳಾಗುತ್ತವೆ. ಸಾರ್ವಜನಿಕರು ನಮಗೆ ರಕ್ಷಣೆ ಕೊಡಿ ಎಂದು ಬಂದಾಗ ಅದರ ಬಗ್ಗೆ ಪೋಲೀಸರು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಇಲಾಖೆಯು ದಕ್ಷತೆಯಿಂದ ಕೆಲಸ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನನಗೆ ನಂಬಿಕೆ ಇದೆ. ಇಂಥ ಘಟನೆಗಳು ಇನ್ನು ಮುಂದೆ ನಡೆಯದ ರೀತಿಯಲ್ಲಿ ಅವರು ಆದೇಶವನ್ನು ನೀಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶ: ಇಂಥ ಘಟನೆಗಳು ಅನಿವಾರ್ಯವಾಗಿ ಆದರೆ ಯಾರೂ ಏನೂ ಮಾಡಲಿಕ್ಕೆ ಆಗುವುದಿಲ್ಲ. ಆದರೆ ಉದ್ದೇಶ ಪೂರ್ವಕವಾಗಿ ಇಂಥ ಘಟನೆಗಳು ಇನ್ನು ಮುಂದೆ ನಡೆಯಲಿಕ್ಕೆ ನಮ್ಮ ಸರ್ಕಾರ ಅವಕಾಶ ಕೊಡುವುದಿಲ್ಲ. ನಮ್ಮ ಸರ್ಕಾರ ದಕ್ಷತೆಯಿಂದ ಆಗಬೇಕಾದಂಥ ಕೆಲಸ ಕಾರ್ಯಗಳನ್ನು ಪ್ರಾಮಾಣಿಕತೆಯಿಂದ ಮಾಡಿ, ಸಾರ್ವಜನಿಕರ ನಂಬಿಕೆಗೆ ಪಾತ್ರವಾದಂಥ ಆಡಳಿತವನ್ನು ನಮ್ಮ ಸರ್ಕಾರ ಕೊಡುತ್ತದೆ ಎಂದು ಆಶಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್.—ಈಗ ಚರ್ಚೆ ಮುಗಿದಿದೆ. ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಅನೇಕ ಮಾನ್ಯ ಸದಸ್ಯರುಗಳು ಮೂರು ಕಡೆ ಪೋಲೀಸ್ ಲಾಕಪ್‌ನಲ್ಲಿ ನಡೆದ ಮರಣದ ವಿಚಾರವನ್ನು ಪ್ರಸ್ತಾಪಿಸಿ, ತಮ್ಮ ಸಂತಾಪ ಸೂಚನೆಯನ್ನು ಮಾಡಿದ್ದಾರೆ ಮತ್ತು ಕೆಲವು ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

(ಮಾನ್ಯ ಸಭಾಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಪೋಲೀಸ್ ಲಾಕಪ್‌ನಲ್ಲಿ ಯಾವುದೇ ವ್ಯಕ್ತಿ ಮರಣಕ್ಕೆ ತುತ್ತಾದಾಗ ಸ್ವಾಭಾವಿಕವಾಗಿ ಜನಸಾಮಾನ್ಯರಲ್ಲಿ ಪೋಲಿಸರ ದೌರ್ಜನ್ಯದಿಂದಲೇ ಈ ಮರಣವಾಯಿತು ಎನ್ನುವಂಥ ಭಾವನೆ ಮಾಡುವುದು ಇಂತಹ ಒಂದು ವಾತಾವರಣವೂ ಕೂಡ ಪೋಲೀಸರಿಗೆ ಒಳ್ಳೆಯ ಹೆಸರು ತರುವುದಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಮತ್ತು ಪೋಲೀಸರ ಬಗ್ಗೆ ಇರುವಂಥ ಅಭಿಪ್ರಾಯ. ಕೆಡಿಸುವುದಕ್ಕೂ ಕೂಡಾ ಇದು ಕಾರಣವಾಗುತ್ತದೆ. ಅದಕ್ಕಾಗಿ ಈ ಪೋಲೀಸ್ ಲಾಕಪ್‌ನಲ್ಲಿ ಈ ತರಹ ದುರದೃಷ್ಟಕರ ಘಟನೆಗಳು ಆದಾಗ ನಿಜವಾಗಿಯೂ ನಾನು ವೈಯಕ್ತಿಕವಾಗಿಯೂ ಮತ್ತು ಮುಖ್ಯಮಂತ್ರಿಯಾಗಿಯೂ ನಾನು ಬಹಳ ಸೀರಿಯಸ್ ಆಗಿ ವಿಚಾರ ಮಾಡಬೇಕು ಎನ್ನುವಂಥ ಒಂದು ಪ್ರವೃತ್ತಿಯನ್ನು ಇಟ್ಟುಕೊಂಡವನು. ಅನೇಕ ಸಲ ಅನೇಕ ಕಾರಣಗಳಿಂದ ಲಾಕಪ್‌ನಲ್ಲಿ ಇರುವಂಥ ವ್ಯಕ್ತಿಯ ಮರಣವಾಗುತ್ತದೆ. ಯಾವುದೇ ದೌರ್ಜನ್ಯದಿಂದ ಈ ಮರಣವಾಗುತ್ತದೆ ಎಂದು ಹೇಳುವುದು ಕಷ್ಟ. ಆದರೆ ಒಂದು ವಿಚಾರವನ್ನು ನಾವು ಇವತ್ತು ತಿಳಿದುಕೊಳ್ಳಬೇಕಾಗುತ್ತದೆ. ಪೋಲೀಸ್ ಲಾಕಪ್‌ನಲ್ಲಿ ಮರಣ ಅಥವಾ ಲಾಕಪ್ ಡೆತ್ಸ್ ಏನು ಆಗಿದೆ ಇದು ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಪ್ರಾರಂಭವಾಯಿತು, ಪೂರ್ವದಲ್ಲಿ ಇರಲಿಲ್ಲ ಎನ್ನುವಂಥಾದ್ದು ಯಾರೂ ಹೇಳಲಿಲ್ಲ, ಬಹುಶಃ ಅದನ್ನು ಹೇಳಲಿಕ್ಕೂ ಸಾಧ್ಯವಿಲ್ಲ. ಇವು ನಡೆದುಕೊಂಡೇ ಬಂದಿವೆ. ಬಹುಶ: ನನ್ನಲ್ಲಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಹೇಳಬೇಕಾಗಿದ್ದರೆ ೧೯೮೮ರಲ್ಲಿ ೧೨ ಪೋಲೀಸ್ ಲಾಕಪ್ ಡೆಥ್ಸ್ ಆಗಿವೆ. ಈ ಅಂಕಿಅಂಶಗಳಿಂದ ಪೋಲೀಸ್ ಲಾಕಪ್ ಡೆತ್ಸನ್ನು ಸಮರ್ಥನೆ ಮಾಡುತ್ತೇನೆ. ಮರಣದ ಸಮರ್ಥನೆ ಮಾಡುತ್ತೇನೆ ಎನ್ನುವ ರೀತಿಯಲ್ಲಿ ಯಾರೂ ತಿಳಿದುಕೊಳ್ಳಬಾರದು, ಆದರೆ ಈ ಪೋಲೀಸ್ ಲಾಕಪ್‌ನಲ್ಲಿ ಈ ಒಂದು ಒಂದೂವರೆ ತಿಂಗಳಿನಲ್ಲಿ ಮೂರು ಈ ತರಹದ ಘಟನೆಗಳಾಗಿವೆ. ಇದು ನಿಜವಾಗಿಯೂ ಬಹಳ ಶೋಚನೀಯವಾದುದು. ಮತ್ತು ಈಗಾಗಲೇ ನಾನು ಮೇಲ್ವರ್ಗದ ಪೋಲೀಸ್ ಅಧಿಕಾರಿಗಳೊಂದಿಗೆ ಇದರ ಬಗ್ಗೆ ನನ್ನ ದುಃಖ ಮತ್ತು ಅಸಮಾಧಾನವನ್ನು ಸೂಚನೆ ಮಾಡಿದ್ದೇನೆ. ಮತ್ತು ಮುಂದೆ ಈ ರೀತಿ ಆಗದಂತೆ ಏನು ಕ್ರಮ ತೆಗೆದುಕೊಳ್ಳಬೇಕು, ಅದರ ಬಗ್ಗೆ ಅವರು ವಿಚಾರ ಮಾಡಬೇಕೆಂದು ಅವರಿಗೆ ಹೇಳಿದ್ದೇನೆ. ಅವರು ಈಗಾಗಲೇ ಒಂದು ಮೀಟಿಂಗ್ ಮಾಡಿದ್ದಾರೆ. ಮೇಲ್ವರ್ಗದ ಅಧಿಕಾರಿಗಳ ಜೊತೆಯಲ್ಲಿ ನಾನು ಒಂದು ಮೀಟಿಂಗ್ ಮಾಡಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೇನೆ, ಏಕೆಂದರೆ, ಇದೀಗ ಹೇಳಿದ ಹಾಗೆ ಪೋಲೀಸ್ ಲಾಕಪ್‌ನಲ್ಲಿ ಯಾರೇ ಸತ್ತರೂ ಸಹ ಅವರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ, ಬಡಿದಿದ್ದಾರೆ, ಅದಕ್ಕೆ ಅವರು ಸತ್ತರು ಎಂಬ ಭಾವನೆ

ಬರುತ್ತದೆ, ಅದರಿಂದ ಜನರು ರೊಚ್ಚಿಗೇಳುತ್ತಾರೆ, ರೊಚ್ಚಿಗೆದ್ದು ಸಾವಿರಾರು ಸಂಖ್ಯೆಯಲ್ಲಿ ಶವ ಇದ್ದಲ್ಲಿಗೆ ಹೋಗುತ್ತಾರೆ ಅಥವಾ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕುತ್ತಾರೆ ಆಗ ಬಹುಶಃ ಲಾ ಅಂಡರ್ ಪ್ರಾಬ್ಲಂ ಬರುತ್ತದೆ. ಆ ವೇಳೆಗೆ ಲಾಠಿ ಚಾರ್ಜ್, ಟಿಯರ್ ಗ್ಯಾಸ್, ಫೈರಿಂಗ್ ಇದೆಲ್ಲಾ ಸ್ವಾಭಾವಿಕವಾಗಿ ಆಗುತ್ತಾ ಬರುತ್ತಿದೆ. ಇದು ಈಗ ಹೊಸದೇನಲ್ಲ. ನಾನು ಬಂದ ಮೇಲೆ ಇದು ಪ್ರಾರಂಭವಾಯಿತು, ಹಿಂದೆ ಇರಲಿಲ್ಲ ಎನ್ನುವಂಥಾದ್ದು ಇಲ್ಲ. ಈಗಾಗಲೇ ನಾನು ಹೇಳಿದ್ದೇನೆ. ಈ ಮೂರು ಲಾಕಪ್ ಮರಣಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು ಎಂದು ನಾನು ಕೇಳಿದ್ದೇನೆ. ಈ ಮೂರು ಲಾಕಪ್‌ಗಳಲ್ಲಿ ಆಗಿರುವಂತಹ ಮರಣಗಳ ಬಗ್ಗೆ ಸರ್ಕಾರ ಒಂದೇ ರೀತಿಯಾದ ಧೋರಣೆ ತಾಳಿಲ್ಲ ಎಂದು ಹೇಳಿದ್ದಾರೆ. ಒಂದು ಕಡೆ ತಮಗೆ ಬೇಕಾದ ಕಡೆ ಜುಡಿಷಿಯಲ್ ಎನ್‌ಕ್ವೈರಿ ಎಂದು ಹೇಳಿದ್ದಾರೆ. ಮತ್ತೊಂದುಕಡೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಲ್ಲ ಎಂದು ಅವರು ಪ್ರಸ್ತಾಪ ಮಾಡಿರುವುದನ್ನು ನಾನು ಕೇಳಿದೆ. ಮತ್ತು ಎನ್‌ಕ್ವೈರಿ ಒಂದೊಂದು ರೀತಿಯಿಂದ ಮಾಡುತ್ತಿದ್ದಾರೆ ಎಂದು ಭಾವನೆ ಬರುವಂತೆ ಅವರು ವಿಚಾರ ವ್ಯಕ್ತಮಾಡಿದರೆಂದು ನಾನು ಕೇಳಿದೆ ಈಗ ಶಹಾಬಾದ್ ಕೇಸ್ ರಿಜಿಸ್ಟರ್ ಆಗಿರುವುದು ಸೆಕ್ಷನ್ ೩೦೭ರಲ್ಲಿ, ಗುಲ್ಬರ್ಗಾ ಕೇಸ್ ರಿಜಿಸ್ಟರ್ ಆಗಿರುವುದು ಸೆಕ್ಷನ್ ೩೦೨ರಲ್ಲಿಯೇ. ಬಳ್ಳಾರಿಯಲ್ಲಿ ಕೇಸ್ ರಿಜಿಸ್ಟರ್ ಆಗಿರುವುದು ಸೆಕ್ಷನ್ ೩೦೪ ರಲ್ಲಿ. ಆದರೆ ಮ್ಯಾಜಿಸ್ಟ್ರೀರಿಯಲ್ ಎನ್‌ಕ್ವೈರಿ ಕಾನೂನು ಪ್ರಕಾರವಾಗಿ ಏನು ಮಾಡಬೇಕಾಗುತ್ತದೆ ಅದು ಅವಶ್ಯಕವಾಗಿದೆ. ಅದು ಮ್ಯಾಂಡೆಟರಿ. ಅದನ್ನು ಮಾಡುವ ಮುನ್ನ ಅಲ್ಲಿ ಏನು ಅವರಿಗೆ ಎವಿಡೆನ್ಸ್ ಬರುತ್ತದೆ, ಅದರ ಮೇಲೆ ಸೆಕ್ಷನ್ ೩೦೪ ಹೋಗಿ ಸೆಕ್ಷನ್ ೩೦೨ ಅಲ್ಲೂ ಆಗಬಹುದು. ಯಾವುದೂ ಉದ್ದೇಶ ಪೂರ್ವಕವಾಗಿ ಮಾಡಿದುದು ಅಲ್ಲ. ಮತ್ತು ಏನೋ ಒಂದು ರೀತಿ ಇಲ್ಲೇ ಸ್ಪೆಷಲ್ ಅಟೆನ್‌ಷನ್ ಕೊಡಬೇಕು. ಉಳಿದ ಕಡೆ ಹೆಚ್ಚು ಗಮನ ಕೊಡಬಾರದು. ಏನೋ ರೋಟಿನ್‌ನಲ್ಲಿ ಆಗಲಿ ಎನ್ನುವ ದೃಷ್ಟಿಯಿಂದ ಸರ್ಕಾರ ಎಂದೂ ನಡೆದುಕೊಂಡಿಲ್ಲ. ನಡೆದುಕೊಳ್ಳುವುದೂ ಇಲ್ಲ. ಅದಕ್ಕಾಗಿ ನಾನು ಹೇಳಿದೆ. ಇದೆಲ್ಲಾ ಬಹಳ ಶ್ರದ್ಧೆಯಿಂದ ನಾವು ಪರಿಶೀಲನೆ ಮಾಡುತ್ತೇವೆ. ಸೀರಿಯಸ್ ಆಗಿ ಇದನ್ನು ನಾವು ನೋಟೀಸ್‌ಗೆ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಇನ್ನು ಒಂದು ಪ್ರಶ್ನೆ ಬರುತ್ತದೆ ಗುಲ್ಬರ್ಗಾದ್ದು ಜುಡಿಷಿಯಲ್ ಎನ್‌ಕ್ವೈರಿ ಏಕೆ ಶಹಾಬಾದ್‌ದ್ದು ಜುಡಿಷಿಯಲ್ ಎನ್‌ಕ್ವೈರಿ ಏಕೆ ಆಗಬಾರದು ಎಂಬ ಪ್ರಶ್ನೆ ಬರುತ್ತದೆ. ಬಹುಶಃ ಇದರ ಬಗ್ಗೆ ಹೇಳುವುದಾದರೆ, ಶಹಾಬಾದ್ ಹಾಗೂ ಗುಲ್ಬರ್ಗಾ ಎರಡೂ ಕೂಡ ನನ್ನ ಜಿಲ್ಲೆಗೆ

೩-೪೦ ಪಿ. ಎಂ.

ಬರುತ್ತದೆ. ಇಲ್ಲಿ ಯಾವುದೂ ವ್ಯತ್ಯಾಸ ಮಾಡಲಿಕ್ಕೆ ಹೋಗಿಲ್ಲ. ಆದರೆ ಗುಲ್ಬರ್ಗಾದಲ್ಲಿ ಏನಾಯಿತು ಎನ್ನುವಂಥಾದನ್ನು ಬಹುಶಃ ಮಾನ್ಯ ಸದಸ್ಯರಾದ ಕಮರುಲ್ ಇಸ್ಲಾಂರವರು ಹೇಳಿದ್ದಾರೆ, ಅಲ್ಲಿ ಜುಡಿಶಿಯಲ್ ಎನ್‌ಕ್ವೈರಿ ಮಾಡಬೇಕಾದ ಅವಶ್ಯಕತೆ ಏನು ಬಂತು ? ಅಲ್ಲಿ ಜುಡಿಶಿಯಲ್ ಎನ್‌ಕ್ವೈರಿ ಮಾಡಬೇಕಾದಂಥ ಅವಶ್ಯಕತೆ ಬಂದಿರುವಂಥಾದ್ದು ಏನೆಂದರೆ, ನನಗೆ ಗೊತ್ತಿದ್ದ ಹಾಗೆ ಅಲ್ಲಿ ಎರಡು ಕಡೆ ಫೈರಿಂಗ್ ಆಗಿದೆ, ಟಿಯರ್ ಗ್ಯಾಸ್ ಆಗಿದೆ, ಲಾಠಿ ಚಾರ್ಜ್ ಆಗಿದೆ. ಕೆಲವರು ಫೈರಿಂಗ್ ೨-೩ ಕಡೆ ಆಗಿದೆಯೆಂದೂ ಇನ್ನು ಕೆಲವರು ಎರಡು ಕಡೆ ಆಗಿದೆ ಎಂದೂ ಹೇಳುತ್ತಾರೆ. ಅಲ್ಲಿನ ಡೆಪ್ಯುಟಿ ಕಮೀಷನರ್ ಅಂದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಫೈರಿಂಗ್‌ಗೆ ಆರ್ಡರ್ ಮಾಡಿಲ್ಲ ಎನ್ನುವಂಥಾದ್ದು ಇದೆ, ಅವರು ನಾನು ಫೈರಿಂಗ್‌ಗೆ ಪರ್ಮಿಷನ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಬಹುಶಃ ಫೈರಿಂಗ್ ಅವರವರೇ ಮಾಡಿಕೊಂಡಿದ್ದಾರೆ ಎನ್ನುವಂಥ ವಾತಾವರಣ ಕೂಡ ಇದೆ. ಮತ್ತು ಅನೇಕರಲ್ಲಿ ಒಂದು ಭಾವನೆ ಏನಿದೆಯೆಂದರೆ, ಅವನು ಕುಡಿದಿದ್ದ ಮಾಡಿದ್ದ, ಅವನಿಗೆ ಎದೆಯಲ್ಲಿ ನೋವು ಬಂತು, ಏಮಿಟಿಂಗ್ ಬಂತು, ಕಾರಿಕೊಂಡ, ಅದಾದಮೇಲೆ ಆಸ್ಪತ್ರೆಗೆ ಒಯ್ದರು. ಅಲ್ಲಿ ಅವನು ತೀರಿಕೊಂಡ ಎನ್ನುವಂಥ ಭಾವನೆ ಇದೆ. ಇದು ಒಂದು ವರ್ಷನ್ ಇದ್ದರೆ, ಇನ್ನೊಂದು ವರ್ಷನ್ ಏನಿದೆಯೆಂದರೆ, ಅಲ್ಲಿ ಅವನನ್ನು ಬಡಿದಾಗ ಸತ್ತು ಹೋದ, ಅದಾದಮೇಲೆ ಡೆಡ್ ಬಾಡಿ ಒಯ್ದು ಅದನ್ನೆಲ್ಲಾ ಸರಿ ಮಾಡಿಕೊಳ್ಳುವುದಕ್ಕೆ, ಹುಷಪ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವಂಥಾದ್ದು ಇದೆ. ಈಗ ನಿಜವಾಗಿ ಏನು ಆಗಿದೆ ಎನ್ನುವುದು ನಮಗೆ ಗೊತ್ತಿಲ್ಲ. ಆದರೆ ಜನರ ಮನಸ್ಸಿನಲ್ಲಿ ಈ ರೀತಿಯ ಶಂಕೆ ಇದ್ದಾಗ, ಆದರಲ್ಲೂ ಅಲ್ಲಿ ಪೋಲೀಸ್ ಫೈರಿಂಗ್ ಆಗಿದೆ, ಪೋಲೀಸರೇ ಫೈರಿಂಗ್ ಮಾಡಿದರು, ಲಾಠಿ ಚಾರ್ಜ್ ಮಾಡಿದರು, ಟಿಯರ್‌ಗ್ಯಾಸ್ ಮಾಡಿದರು. ಬರೇ ಏರ್‌ನಲ್ಲಿ ಮಾಡಿದ್ದಾರೆ. ಬಹುಶಃ ಯಾರಿಗೂ ಏನೂ ಆಗಿಲ್ಲ, ಚಿಂತಾಮಣಿಯ ಹಾಗೆ ಅಂದರೆ ಆ ಮಾತು ಬೇರೆ. ಅದರಿಂದ ಸುಮಾರು ೩ ಜನ ಸತ್ತರು, ಪೋಲೀಸ್ ಲಾಕಪ್‌ನಲ್ಲಿ ಒಬ್ಬ ಸತ್ತ, ನಾಲ್ಕು ಜನ ಆದರು, ಅದಾದಮೇಲೆ ಸುಮಾರು ೯-೧೦ ಜನರಿಗೆ ಗಾಯಗಳಾದವು. ಅವರಲ್ಲಿ ೩ ಜನ ಸೀರಿಯಸ್ ಇದ್ದಾರೆ ಎಂದು ಹೇಳಿದಾಗ ನಾನು ಹೇಳಿದೆ,

ಎಷ್ಟೇ ಖರ್ಚಾದರೂ ಅವರ ಜೀವ ಉಳಿಸಿರಿ, ಒಂದು ವೇಳೆ ಸ್ಥಾನಿಕವಾಗಿ ಔಷಧೋಪಚಾರದ ಅನುಕೂಲತೆ ಇಲ್ಲದೇಹೋದರೆ ಸಮೀಪದಲ್ಲೇ ಹೈದರಾಬಾದ್ ಇದೆ, ಅಲ್ಲಿಗೆ ಸಮ್ಮ ಖರ್ಚಿನಲ್ಲೇ ಅವರನ್ನು ಕರೆದುಕೊಂಡು ಹೋಗಿ ಎಂದು ಆರ್ಡರ್ ಮಾಡಿದೆ ಮತ್ತು ಅರ್ಧ ಅರ್ಧ ಗಂಟೆಗೆ ಅಲ್ಲಿ ಏನು ನಡೆಯುತ್ತಿದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಬಳ್ಳಾರಿಯಲ್ಲಿ ಲಾಠಿ ಚಾರ್ಜ್ ಅಥವಾ ಫೈರಿಂಗ್ ಆಗಿ ಸತ್ತಿದ್ದು ಏನೂ ಇಲ್ಲ. ಆದಕ್ಕಾಗಿ ಅಲ್ಲಿ ಜುಡಿಶಿಯಲ್ ಎನ್‌ಕ್ವೈರಿ ಮಾಡಬೇಕಾದ ಅವಶ್ಯಕತೆ ಇಲ್ಲ. ಅದೇ ರೀತಿ ಶಹಬಾದ್‌ನಲ್ಲೂ ಲಾಕಪ್‌ನಲ್ಲಿ ತೀರಿಕೊಂಡ, ಸ್ವಲ್ಪಮಟ್ಟಿಗೆ ಗಲಾಟೆಯಾಯಿತು. ಅಲ್ಲಿ ಸ್ವಲ್ಪ ಮಟ್ಟಿಗೆ ಪೋಲೀಸರು ಲಾಠಿಚಾರ್ಜ್ ಏನೋ ಮಾಡಿ ಸಮಾಧಾನ ಮಾಡಿದರು. ಅಲ್ಲಿ ಯಾವ ಸಬ್ ಇನ್ಸ್‌ಪೆಕ್ಟರ್ ಇದ್ದ ಅವನ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಅರೆಸ್ಟ್ ಮಾಡಿದರು, ಸಸ್ಪೆಂಡ್ ಮಾಡಿದರು. ಅದನ್ನೆಲ್ಲಾ ಮಾಡಿದ್ದಾರೆ. ಬಳ್ಳಾರಿಯಲ್ಲೂ ಕೂಡ ಹಾಗೆ ಆಯಿತು. ಬಹುಶ: ಗುಲ್ಬರ್ಗಾದಲ್ಲಿ ನಡೆದ ಘಟನೆ ಬಗ್ಗೆ ಒಂದು ಭಾವನೆ ಏನಿದೆಯೆಂದರೆ, ಲಾಕಪ್‌ನಲ್ಲಿ ಒಬ್ಬ ಸತ್ತಿದ್ದ, ಇಮ್ಮಿಡಿಯೇಟಾಗಿ ಕೇಸ್ ರಿಜಿಸ್ಟರ್ ಮಾಡಿ, ಸಸ್ಪೆಂಡ್ ಮಾಡಿ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದ್ದೇವೆ ಎನ್ನುವಂಥ ವದಂತಿ ಹಬ್ಬಿದರೆ ಬಹುಶ: ಇಷ್ಟು ಗಲಾಟೆಗೆ ಅವಕಾಶವಿರುತ್ತಾ ಇರಲಿಲ್ಲ ಎನ್ನುವಂಥಾದ್ದು ಇದೆ. ಜುಡಿಶಿಯಲ್ ಎನ್‌ಕ್ವೈರಿ ನಾವು ಏಕೆ ಮಾಡಿಸುತ್ತೇವೆ ಅಂದರೆ, ನಿಜವಾಗಲೂ ಪೋಲೀಸರಿಂದ ಏನಾದರೂ ಅತ್ಯಾಚಾರ ಆಗಿದೆಯೋ, ಅಧಿಕಾರದ ದುರುಪಯೋಗವಾಗಿದೆಯೋ ಅಥವಾ ಅಧಿಕಾರದ ಹೆಚ್ಚು ಏನಾದರೂ ಆಗಿದೆಯೋ, ಅಂದರೆ ಮನಬಂದಂತೆ ಸ್ವೇಚ್ಛಾಚಾರದಿಂದ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಜನರನ್ನು ತೊಂದರೆಗೆ ಈಡು ಮಾಡಿದ್ದಾರೋ ಎನ್ನುವಂಥಾದ್ದನ್ನ ನಾವು ತಿಳಿದುಕೊಳ್ಳಬೇಕಾಗಿದ್ದರೆ ಒಂದು ಎನ್‌ಕ್ವೈರಿ ಮಾಡಬೇಕಾಗುತ್ತದೆ. ಬಹುಶ: ನನಗೆ ಗೊತ್ತಿದ್ದ ಹಾಗೆ, ಎರಡನೇ ಪಕ್ಷದವರನ್ನು ಕೇಳಿ, ಡಿಮ್ಯಾಂಡ್ ಮಾಡಿ, ಕಾಡಿ, ಬೇಡಿ, ಅದರ ಸಲುವಾಗಿ ಚಳುವಳಿ ಮಾಡಿ ವಾತಾವರಣ ಹದಗೆಡುತ್ತಿತ್ತು. ಅದಕ್ಕೋಸ್ಕರ ಮೊದಲು ಜುಡಿಶಿಯಲ್ ಎನ್‌ಕ್ವೈರಿಗೆ ನಾನೇ ಹೇಳಿದರೆ ಆಯಿತಲ್ಲ ಎಂದು ನಾನು ಹೇಳಿದೆ. ಮತ್ತೆ ಮಾನ್ಯ ಕಮರುಲ್ ಇಸ್ಲಾಂ ರವರು ಮತ್ತು ಇತರೆ ಸದಸ್ಯರು ಜುಡಿಶಿಯಲ್ ಎನ್‌ಕ್ವೈರಿ ಮಾಡಲು ಸುಮ್ಮನೆ ವರ್ಷಾನುಗಟ್ಟಲೆ ಹೋಗುವುದರಲ್ಲಿ ಅರ್ಥವಿಲ್ಲ ತೀವ್ರವಾಗಿ ಮಾಡಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ನಾವು ವಿಚಾರ ಮಾಡುತ್ತಾ ಇದ್ದೇವೆ. ಈಗಾಗಲೇ ನಾವು ಹೈಕೋರ್ಟ್ ರಿಜಿಸ್ಟ್ರಾರ್‌ರವರಿಗೆ ಬರೆದಿದ್ದೇವೆ, ಯಾರನ್ನಾದರೂ ಒಬ್ಬ ಅಧಿಕಾರಿಯನ್ನು ಜುಡಿಶಿಯಲ್ ಎನ್‌ಕ್ವೈರಿ ಮಾಡಲು ನೀವು ಸಲಹೆ ಮಾಡಿ ನಾವು ಎನ್‌ಕ್ವೈರಿಗೆ ಆರ್ಡರ್ ಮಾಡುತ್ತೇವೆ. ಎಂದು ಹೇಳಿದ್ದೇವೆ. ನಾನು ನಿಮಗೆ ಹೇಳಬೇಕಾಗಿದ್ದರೆ, ಇದರ ಬಗ್ಗೆ ಎಷ್ಟು ತೀವ್ರವಾಗಿ ಎನ್‌ಕ್ವೈರಿ ಮುಗಿದು ರಿಪೋರ್ಟ್ ಹೊರಗಡೆ ಬರುತ್ತದೋ ಎಂದು ನಾನು ಬಹಳ ಕಾತುರತೆಯಿಂದ ಇದ್ದೇನೆಯೇ ಹೊರತು ಏನೋ ಜನರಿಗೆ ಸಮಾಧಾನ ಮಾಡುವುದಕ್ಕೆ ಒಂದು ಎನ್‌ಕ್ವೈರಿಗೆ ಆರ್ಡರ್ ಮಾಡಿ ಮುಂದಕ್ಕೆ ಹೋಗಬೇಕು ಎನ್ನುವಂಥ ವಿಚಾರ ನನ್ನದಲ್ಲ. ಇನ್ನೊಂದು ಪ್ರಶ್ನೆ ಏನೆಂದರೆ ಕಾಂಪನ್ಸೇಷನ್, ಪರಿಹಾರಧನ. ಏನಪ್ಪ, ಇಪ್ಪತ್ತೇ ಸಾವಿರ ಕೊಟ್ಟಿರಿ ಎನ್ನುವಂಥ ಪ್ರಶ್ನೆ ಇದೆ. ಬಹುಶ: ಇದಕ್ಕೂ ಹೆಚ್ಚು ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಬಹುದಾಗಿತ್ತು. ಇಲ್ಲ ಎಂದು ನಾನು ಹೇಳುವುದಿಲ್ಲ. ಇದು ಏನಾಗಿದೆಯೆಂದರೆ, ಕೇಂದ್ರ ಸರ್ಕಾರದವರು ಇದರ ಬಗ್ಗೆ ಒಂದು ಕಮಿಟಿ ಮಾಡಿದ್ದರು. ಬಹುಶ: ಕೇಂದ್ರದ ಗೃಹ ಖಾತೆಯ ಮಂತ್ರಿಗಳೇ ಇದಕ್ಕೆ ಛೇರ್ಮನ್ನರಾಗಿದ್ದರು. ಅವರು ಒಂದು ಸ್ಕೇಲ್ ನಿರ್ಧಾರ ಮಾಡಿದ್ದಾರೆ. ಅದು ಈಗ ಮಾಡಿದ್ದಲ್ಲ, ಬಹುಶ: ೧೯೭೭ ರಲ್ಲೇ ಮಾಡಿದ್ದಾರೆ.

ಲಾಕಪ್‌ನಲ್ಲಿ ಸಾವು ಸಂಭವಿಸಿದರೆ, ೨೦ ಸಾವಿರ ಕೊಡಬೇಕು, ಗಾಯಗಳಾದರೆ ಜಖಂ ಆದರೆ ಅವರಿಗೆ ೫ ಸಾವಿರ ಕೊಡಬೇಕು. ಪ್ರಾಪರ್ಟಿ ಹಾನಿಯಾದರೆ ೧೫ ಸಾವಿರ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಸಾಮಾನ್ಯವಾಗಿ ಫೈರಿಂಗ್ ಆದಾಗ ಸಾಯುವವರು ನಿರಪರಾಧಿಗಳು. ಅದಕ್ಕೆ ಸಂಬಂಧ ಇಲ್ಲದೇ ಇರುವವರು ಸಾಯುತ್ತಾರೆ. ಇಂಥ ಸಂದರ್ಭಗಳಲ್ಲಿ ಹೆಚ್ಚಿಗೆ ಹಣ ಕೊಟ್ಟಿರುವಂಥ ಪ್ರಿಸಿಡೆಂಟ್ಸ್ ಇದೆಯೇ ಎಂದು ನಮ್ಮ ಅಧಿಕಾರಿಗಳನ್ನು ಕೇಳಿದೆ. ಅದಕ್ಕೆ ಅವರು ಇಲ್ಲ, ಇದಕ್ಕೆ ಒಂದು ಸ್ಕೇಲ್ ನಿಗದಿ ಮಾಡಿದ್ದಾರೆ, ಇಲ್ಲಿಯವರೆಗೂ ಯಾವ ಡೆತ್‌ನಲ್ಲಿಯೂ ಇದಕ್ಕಿಂತ ಹೆಚ್ಚಿಗೆ ಕೊಟ್ಟಿಲ್ಲ ೨೦ ಸಾವಿರ ರೂಪಾಯಿ ಮ್ಯಾಕ್ಸಿಮಂ ಕೊಡಲಾಗಿದೆಯೆಂದು ಹೇಳಿದರು. ನಾನು ಈ ವಿಚಾರವನ್ನು ತೀರ್ಮಾನ ಮಾಡುವಾಗ ಸ್ಥಳೀಯ ಶಾಸಕರಾದ ಮಾನ್ಯ ಕಮರುಲ್ ಇಸ್ಲಾಂರವರು ಇದ್ದರು. ಖರ್ಗೆಯವರು ಧರ್ಮಸಿಂಗ್‌ರವರು ಹಾಗೂ ಜಿ. ರಾಮಕೃಷ್ಣರವರೂ ಇದ್ದರು, ಅವರುಗಳ ಜೊತೆಯಲ್ಲಿ ಸಮಾಲೋಚನೆ ಮಾಡಿರುತ್ತೇನೆ. ಸತ್ತ ವ್ಯಕ್ತಿಗಳ ಕುಟುಂಬಗಳ ಮನೆಗಳಿಗೆ ಹೋಗಿ ನಾನು ವಿಚಾರ ಮಾಡಿದ್ದೇನೆ. ಸತ್ತ ವ್ಯಕ್ತಿಯ ಮನೆಗೆ ಹೋದಾಗ ಆತ ಲಾರಿ ಡ್ರೈವರ್ ಎಂದು ತಿಳಿಯಿತು, ಅವನ ಆದಾಯದ ಮೇಲೆ ೮-೯ ಜನರ ಜೀವನ ನಡೆಯಬೇಕಾಗಿತ್ತು. ಅವನು ತೀರಿಕೊಂಡ ಮೇಲೆ ಅನ್ನಕ್ಕೂ ಕಷ್ಟವಾಗಿರುವ ವಿಚಾರ ತಿಳಿಯಿತು. ಅವನ ಹೆಂಡತಿ ಚಿಕ್ಕ ವಯಸ್ಸಿ

ನವಳು. ಸುಮಾರು ೨೫–೨೬ ವಯಸ್ಸಿನವಳು ಎರಡು ಮಕ್ಕಳ ತಾಯಿ ಇರಬಹುದು, ಆ ಹೆಣ್ಣು ಮಗಳಿಗೆ ಕೂಡಲೇ ಒಂದು ನೌಕರಿ ಕೊಡಬೇಕೆಂದು ಆಜ್ಞೆ ಮಾಡಿ ಬಂದಿದ್ದೇನೆ. ಯಾವುದಾದರೂ ಒಂದು ಸರ್ಕಾರಿ ಉದ್ಯೋಗ ಕೊಡಬೇಕೆಂದು ಆಜ್ಞೆ ಮಾಡಿ ಬಂದಿರುತ್ತೇನೆ. ಇನ್ನೊಬ್ಬ ಸತ್ತ ವ್ಯಕ್ತಿಯ ಮನೆಗೆ ಹೋಗಿ ವಿಚಾರಿಸಿದಾಗ, ಆತ ಒಂದು ಎಜುಕೇಶನ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದನೆಂದು ತಿಳಿಯಿತು. ಆತನ ಹೆಂಡತಿಯೂ ಕೂಡ ಸಣ್ಣ ವಯಸ್ಸಿನವಳು, ಸುಮಾರು ೨೦–೨೫ ವರ್ಷ ಇರಬಹುದು. ಆ ಸಂಸ್ಥೆಯ ಛೇರ್ಮನ್ ನಮ್ಮ ಸೊಸೈಟಿಯಲ್ಲಿಯೇ ಆಕೆಗೊಂದು ಉದ್ಯೋಗ ಕೊಡುತ್ತೇವೆಂದು ಹೇಳಿದರು. ಮತ್ತೊಬ್ಬರು ಲಾಕಪ್‌ನಲ್ಲಿ ಸತ್ತವರು ಆತ ಕಾಂಗ್ರೆಸ್ ಪುಡಾರಿ, ಯುವ ಕಾಂಗ್ರೆಸ್‌ನ ಜನರಲ್ ಸೆಕ್ರೆಟರಿಯಾಗಿದ್ದವರು. ಅವರ ಮನೆಗೆ ಹೋಗಿ ನಿಮಗೆ ಇರತಕ್ಕ ತೊಂದರೆ ಏನು ಎಂದು ವಿಚಾರಿಸಿದೆ. ಆತನ ಹೆಂಡತಿಗೆ ಉದ್ಯೋಗ ಕೊಡುವುದಕ್ಕೆ ತಯಾರಿದ್ದೇನೆಂದು ತಿಳಿಸಿದೆ. ಅದಕ್ಕೆ ಅವರು ನಮಗೆ ದೇವರು ಕೊಟ್ಟಿದ್ದಾನೆ. ದುರ್ದೈವ ಆತನನ್ನು ಕಳೆದುಕೊಂಡಿದ್ದೇವೆ. ನಮಗೆ ಉದ್ಯೋಗ ಬೇಡ ಎಂದು ಹೇಳಿದರು. ಮತ್ತೊಂದು ಕಡೆ ನನ್ನ ಚಿಂಚೋಳಿ ಕ್ಷೇತ್ರದಲ್ಲಿ ಒಬ್ಬ ಹುಡುಗ ಸತ್ತಿದ್ದಾನೆ, ಆತನಿಗೆ ಡಿಪೆಂಡೆಂಟ್ಸ್ ಯಾರೂ ಇಲ್ಲ. ಅವರ ಕಡೆಯವರು ಬರಲಿಲ್ಲ, ಅದರ ಬಗ್ಗೆ ನಾನು ವಿಚಾರ ಮಾಡಲಿಲ್ಲ. ಆದ್ದರಿಂದ ಎಲ್ಲರಿಗೂ ೨೦,೦೦೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಶಹಬಾದ್, ಬಳ್ಳಾರಿ ಲಾಕಪ್‌ನಲ್ಲಿ ಸತ್ತವರಿಗೂ ೨೦,೦೦೦ ರೂಪಾಯಿಗಳನ್ನು ಕೊಡುವಂತೆ ಆರ್ಡರ್ ಮಾಡಿದ್ದೇನೆ. ಲಾಕಪ್‌ನಲ್ಲಿ ಡೆತ್ ಆದರೆ, ೨೦,೦೦೦ ರೂಪಾಯಿ ಕೊಡುವಂತಿಲ್ಲ. ಆದರೆ ಪೋಲೀಸ್ ಫೈರಿಂಗ್‌ನಲ್ಲಿ ಸತ್ತವರಿಗೆ ೨೦,೦೦೦ ಕೊಡಬೇಕು ಎಂಬ ಸ್ಕೇಲನ್ನು ಕೇಂದ್ರಸರ್ಕಾರದವರು ನಿಗದಿಮಾಡಿರುವ ಪ್ರಕಾರ ನಾವು ಕೊಟ್ಟಿದ್ದೇವೆ. ಈ ರೀತಿಯ ಸಾವುಗಳನ್ನು ಯಾವರೀತಿಯಲ್ಲಿ ತಡೆಗಟ್ಟಬೇಕೆನ್ನುವುದೇ ಈಗ ಇರತಕ್ಕ ಪ್ರಶ್ನೆ. ನಾನು ಈಗಾಗಲೇ ಹೇಳಿದ್ದೇನೆ. ನಾವೆಲ್ಲರೂ ಮನುಷ್ಯರೆ. ಯಾರಾದರೂ ಪೋಲೀಸರ ಅತ್ಯಾಚಾರದಿಂದಾಗಲಿ ಪೋಲೀಸರ ಗುಂಡಿನಿಂದಾಗಲಿ ತೀರಿಕೊಂಡರೆ ಸ್ವಾಭಾವಿಕವಾಗಿ ನಮಗೆಲ್ಲರಿಗೂ ಅನುಕಂಪ ಬರುತ್ತದೆ, ಇಲ್ಲ, ಎಂದು ನಾನು ಹೇಳುವುದಿಲ್ಲ, ಆದರೆ ಪೋಲೀಸ್ ಲಾಕಪ್‌ನಲ್ಲಿ ಸಾಯಲಿ ಅಥವಾ ಫೈರಿಂಗ್‌ನಲ್ಲಿ ಸಾಯಲಿ ನಾವು ಅದರ ಬಗ್ಗೆ ಒಂದು ವಿಚಾರ ಮಾಡಬೇಕಾಗುತ್ತದೆ. ಲಾ ಅಂಡ್ ಆರ್ಡರ್‌ನ ಒಂದು ದೊಡ್ಡ ಜವಾಬ್ದಾರಿಯನ್ನು ಅವರ ಕೈಗೆ ಕೊಟ್ಟಿದ್ದೇವೆ. ಅದು ನಮಗೆ ಬೇಕೋ ಬೇಡವೋ ಗೊತ್ತಿಲ್ಲ. ಲಾ ಅಂಡ್ ಆರ್ಡರ್ ಅಂದರೆ ನಮ್ಮ ದೇಶದಲ್ಲಿ ಆಂತರಿಕವಾಗಿ ಶಾಂತಿ ಕಾಪಾಡಿಕೊಂಡು ಹೋಗುವುದು. ಕರ್ನಾಟಕದ ನಾಲ್ಕು ಕೋಟಿ ಜನರ ಪ್ರಾಣ, ಆಸ್ತಿಪಾಸ್ತಿ ರಕ್ಷಣೆ ಮಾಡುವಂಥ ಜವಾಬ್ದಾರಿ ಪೋಲೀಸ್ ಸಿಬ್ಬಂದಿಯವರ ಮೇಲೆ ಇದೆ ಇದು ಬಹಳ ದೊಡ್ಡತರವಾದ ಜವಾಬ್ದಾರಿ. ಪೋಲೀಸರಿಂದ ಅಲ್ಲಿ, ಇಲ್ಲಿ ಏನಾದರೂ ಅತ್ಯಾಚಾರ ನಡೆದಿದ್ದರೆ ಅದನ್ನು ಖಂಡನೆ ಮಾಡೋಣ. ನಾನು ಡಿಫೆಂಡ್ ಮಾಡಲಿಕ್ಕೆ ಹೋಗುವುದಿಲ್ಲ. ನಾನು ಹೋಮ್ ಮಿನಿಸ್ಟರ್ ಆಗಿರುವವರೆಗೂ ನೀವು ಬೇಕಾದ್ದು ಮಾಡಿ ಎಂದು ಅವರಿಗೆ ಲೈಸೆನ್ಸ್ ಕೊಡಲಿಕ್ಕೆ ಹೋಗುವುದಿಲ್ಲ, ಆ ಪ್ರವೃತ್ತಿ ನನ್ನದಲ್ಲ. ಪೋಲೀಸ್ ಇಲಾಖೆಯಲ್ಲಿ ಮೂರು ನಾಲ್ಕು ಜನರು ಇವೊತ್ತು ದೌರ್ಜನ್ಯ ಮಾಡಿದ್ದಾರೆ ಎಂದು ಇಡೀ ಪೋಲೀಸ್ ಫೋರ್ಸ್‌ನ್ನು ಕಂಡಮ್ ಮಾಡಿದರೆ ಪರಿಸ್ಥಿತಿ ದೀಮಾರಲೈಸ್ ಆಗುತ್ತದೆ. ನಾವು ಏನು ಮಾಡಿದರೂ ಕೂಡ ಯಾರು ಅನ್–ಸೋಷಿಯಲ್ ಇದ್ದಾರೆ ಯಾರು ದುಷ್ಟರಿದ್ದಾರೆ, ಯಾರು ದೌರ್ಜನ್ಯ ಮಾಡುತ್ತಾರೆ ಅವರನ್ನು ಐಸೋಲೇಟ್ ಮಾಡಿ ಕಂಡೆಮ್ ಮಾಡಬೇಕೇ ಹೊರತು ಎಂಟೈರ್ ಪೋಲೀಸ್ ಫೋರ್ಸ್‌ನ್ನು ನಾವು ಕಂಡೆಮ್ ಮಾಡಿದರೆ ಅಲ್ಲಿ ಡೀಮಾರಲೈಸ್ ಬರುತ್ತದೆಂದು ನಾವು ತಿಳಿದುಕೊಳ್ಳಬೇಕು. ಇವೊತ್ತು ಅದರ ಕೈಯಲ್ಲಿ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೇವೆ. ಲಾ ಅಂಡ್ ಆರ್ಡರ್‌ನ್ನು ನೋಡಿಕೊಂಡು ಹೋಗುವುದು, ಸಂರಕ್ಷಣೆ ಮಾಡಿಕೊಂಡು ಹೋಗುವುದು, ಶಾಂತಿಯನ್ನು ಕಾಪಾಡಿಕೊಂಡು ಹೋಗುವುದು, ಇವೆಲ್ಲಾ ಜವಾಬ್ದಾರಿಯನ್ನು ಈ ಒಂದು ದೊಡ್ಡ ಆರ್ಗನೈಸೇಷನ್ ಕೈಯಲ್ಲಿ ಕೊಟ್ಟಾಗ ಅದನ್ನು ಕಂಡೆಮ್ ಮಾಡುವುದರಿಂದ ನಾವು ಶಾಂತಿಯನ್ನು ಕಾಪಾಡುವಂಥ ಸಿಬ್ಬಂದಿ ವರ್ಗವನ್ನು ಯೋಗ್ಯ ರೀತಿಯಲ್ಲಿ ಕಂಡಂತೆ ಆಗುವುದಿಲ್ಲ ಎಂದು ಹೇಳುತ್ತೇನೆ. ಇವೊತ್ತು ಪೋಲೀಸ್ ಫೋರ್ಸ್ ಅಂದರೆ ಅವರೇನು ಆಕಾಶದಿಂದ ಬಂದವರು ಅಲ್ಲ, ಸ್ವರ್ಗದಿಂದ ಕೆಳಗೆ ಇಳಿದು ಬಂದವರು ಅಲ್ಲ. They are also part and Parcel of our society. ಅವರು ನಮ್ಮ ಸಮಾಜದ ಒಂದು ಅಂಗ. ನಮ್ಮ ಸಮಾಜದಿಂದಲೇ ಕೆಲವರು ಕಾನ್‌ಸ್ಟೇಬಲ್ ಆಗುತ್ತಾರೆ, ಕೆಲವರು ಸಬ್‌ಇನ್ಸ್‌ಪೆಕ್ಟರ್ ಆಗುತ್ತಾರೆ ಕೆಲವರ ಒಳ್ಳೆಯ ಶಿಕ್ಷಣವನ್ನು ಪಡೆದಂಥವರು ಐ.ಪಿ.ಎಸ್. ಅಧಿಕಾರಿಗಳು ಆಗಬಹುದು. ಆದರೆ ಅವರೂ ಸಹ ನಮ್ಮ ಸಮಾಜದ ಒಂದು ವರ್ಗವೇ ಹೊರತು ನಮ್ಮ ಸಮಾಜದಿಂದ ಹೊರಗೆ ಇಲ್ಲ, ಸಮಾಜದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಅವರು ಕೆಟ್ಟವರಿದ್ದಾರೆ ಆದ್ದರಿಂದ ಸಮಾಜವೆಲ್ಲಾ ಕೆಟ್ಟದು ಎಂದು ನಾವು ವರ್ಗೀಕರಣ ಮಾಡಲಿಕ್ಕೆ ಹೊರಟರೆ ಬಹುಶಃ ಆ ಒಂದು ಆರ್ಗನೈಸೇಷನ್‌ನಿಂದ ಏನು ಅಪೇಕ್ಷೆ

ಮಾಡುತ್ತೇವೆ, ಆ ಒಂದು ಅಪೇಕ್ಷೆಯ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಒಪ್ಪುತ್ತೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಹೇಳಿದರು ಅದು ಏನೋ ನನಗೆ ಗೊತ್ತಿಲ್ಲ. ಒಂದೂವರೆ ತಿಂಗಳಲ್ಲಿ ಅಂದರೆ ನಾನು ಇವೊತ್ತಿಗೆ ಅಧಿಕಾರ ತೆಗೆದುಕೊಂಡು ೪೭ ದಿವಸಗಳಾಯಿತು. ಇಷ್ಟು ದಿವಸದಲ್ಲಿ ಈಗಾಗಲೆ ಮೂರು ಲಾಕ್‌ಅಪ್ ಡೆತ್ಸ್ ಆಗಿದೆ. ನಾನು ನಿಜವಾಗಿ ಹೇಳಿದ್ದೇನೆ. ನನಗೆ ಹೇಳುವುದರಲ್ಲಿ ನಾಚಿಕೆ ಇಲ್ಲ, ಹಿಂದೆಮುಂದೆ ನೋಡುವುದಿಲ್ಲ. ಇದು ನಮ್ಮ ಹೋಮ್ ಡಿಪಾರ್ಟ್‌ಮೆಂಟಿಗೂ ಶೋಭೆ ತರುವುದಿಲ್ಲ, ನಮ್ಮ ವರ್ಕ್ ಫೋರ್ಸಿಗೂ ಶೋಭೆ ತರುವುದಿಲ್ಲ. ನಮ್ಮ ಆರ್ಗನೈಸೇಷನ್‌ಗೆ ಶೋಭೆ ತರುವುದಿಲ್ಲ, ಮುಖ್ಯಮಂತ್ರಿಯಾಗಿ, ಹೋಮ್ ಮಿನಿಸ್ಟರ್ ಆಗಿ ನನಗೂ ಶೋಭೆ ತರುವುದಿಲ್ಲ. ಇದನ್ನು ನಾನು ಒಪ್ಪಿಕೊಂಡಿದ್ದೇನೆ ಅದರ ಬಗ್ಗೆ ನಾನು ಕಟ್ಟುನಿಟ್ಟಾಗಿ ಹೇಳಿದ್ದೇನೆ, ಪ್ರಶ್ನೆ ಏನೆಂದರೆ, ಎಲ್ಲಾ ಲಾಕಪ್ ಡೆತ್ಸ್ ಪೋಲಿಸರ ಅತ್ಯಾಚಾರದಿಂದ, ದೌರ್ಜನ್ಯದಿಂದ ಆಗಿದೆ ಎಂದು ಊಹೆ ಮಾಡುವುದೂ ತಪ್ಪಾಗುತ್ತದೆ. ಅದನ್ನು ಕಂಡುಹಿಡಿಯಲಿಕ್ಕೆ ಕೇಸುಗಳನ್ನು ರಿಜಿಸ್ಟರು ಮಾಡಿದ್ದೇವೆ. ಮ್ಯಾಜಿಸ್ಟೀರಿಯಲ್ ಎನ್‌ಕ್ವಯಿರಿಗಳು ಆಗುತ್ತಾ ಇವೆ. ಅವರು ತಪ್ಪಿತಸ್ಥರಾಗಿದ್ದರೆ ನಿರ್ದಾಕ್ಷಿಣ್ಯವಾಗಿ ಅವರನ್ನು ಶಿಕ್ಷೆಗೆ ಗುರಿ ಮಾಡಬೇಕೆನ್ನುವುದು ಸರ್ಕಾರದ ನೀತಿಯಾಗಿದೆ. ಇಂತಹ ಘಟನೆಗಳು ಹಿಂದೆಯೂ ಆಗಿವೆ. ಬಹುಶಃ ಮುಂದಕ್ಕೆ ಪೂರ್ತಿಯಾಗಿ ನಿಲ್ಲಿಸುತ್ತೇವೆಂಬ ಗ್ಯಾರಂಟಿ ಯಾರೂ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಈ ತರಹದ ಘಟನೆಗಳು ಆಗಲಾರದಂತೆ ಮತ್ತು ಸಮಾಜದಲ್ಲಿ ಪೋಲೀಸರ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವುದಕ್ಕೆ ಏನೇನು ಅವಶ್ಯವಿದೆಯೊ ಆ ತರಹದ ಕಾರ್ಯಕ್ರಮ ಇಟ್ಟುಕೊಂಡು ಈಗಾಗಲೇ ನಾನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಮತ್ತು ಮುಂದೆ ನಾಲ್ಕೈದು ದಿವಸಗಳಲ್ಲಿಯೇ ಇದರ ಬಗ್ಗೆ ಮತ್ತೆ ಚರ್ಚೆ ಮಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಅದಕ್ಕಾಗಿಯೇ ಈ ವಿಚಾರಗಳನ್ನು ತಮ್ಮ ಮುಂದೆ ನಾನು ಹೇಳಿದ್ದೇನೆ. ತಾವೂ ಸಹ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರೆ, ಆ ಸಲಹೆಗಳನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತು ಅದರ ಬಗ್ಗೆ ತೀವ್ರವಾಗಿ ಗಮನ ಹರಿಸಿ ವಿಚಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

SRI QAMURUL ISLAM.—The Circle Inspector and other Sub-Inspectors have to be transferred from Gulbarga, Why only one has been suspended ? Why others are not transferred ? I want that the others will also be suspended and I request the Hon'ble Chief Minister give an assurance in this regard.

VEERENDRA PATIL.—We have already ordered a judicial enquiry. Transfer and other things, are not at all punishment. When the enquiry is going to the commenced shortly, I think it is not fair on the part of the Government to jump to the conclusion saying simply that because one Sub-Inspector has been suspended, therefore, consequently transfer other officers. I will go by the advice of our local officers. I have already told the DIG and the SP. I have told them that in order to bring good image and good name to the entire police force in the district, whatavar they have to suggest, they must suggest without any fear or favour. I am here to consider their suggestions with utmost sympathy. I have impressed upon them that if they feel thae certain force is to be changed in order to get good image of tht police force, I will not hesitate to give effect to their suggestion.

ಶ್ರೀ ಬಿ. ಹೆಚ್. ಬನ್ನಿಕೋಡ್.—ಇದನ್ನು ವಿಚಾರಣೆ ಮಾಡುವಾಗ ಅಲ್ಲಿ ಅಧಿಕಾರಿಗಳು ಇದ್ದರೆ ಸರಿಯಾದ ವಿಚಾರಣೆ ಆಗಲಿಕ್ಕಿಲ್ಲ. ಅವರು ಒತ್ತಾಯ ತರಬಹುದು. ಪೂರ್ಣವಾದಂತಹ ಪುರಾವೆಯನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಪೋಲೀಸರು ತಮಗೆ ಇರುವ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದುದರಿಂದ ಅಲ್ಲಿನ ಪೋಲೀಸರನ್ನು ಬೇರೆ ಕಡೆಗೆ ಕಳಿಸಿದರೆ ಏನು ಪ್ರಮೋದ ಆಗಲಿಕ್ಕಿಲ್ಲ. ಯೋಗ್ಯ ವಿಚಾರಣೆಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸರ್ಕಲ್ ಇನ್ಸ್‌ಪೆಕ್ಟರ್ ನಿಂಗಪ್ಪನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಚರ್ಚೆ ಅಗತ್ಯವಿಲ್ಲ. ತಾವು ಬರೆದು ಕೊಟ್ಟಿದ್ದೀರಿ. ವಿಚಾರ ಮಾಡಿ ಉತ್ತರ ಕಳಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಜ್ಯುಡಿಷಿಯಲ್ ಎನ್‌ಕ್ವೈರಿ ಕೊಡಿ ಅವರನ್ನು ಸಸ್ಪೆಂಡ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದಿನ ಸರಕಾರದವರು ಮಾತು ಮಾತಿಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಎಷ್ಟೋ ಎನ್‌ಕ್ವೈರಿಗಳು ಸ್ಟಾರ್ಟ್ ಆಗಿಯೇ ಇಲ್ಲ. ಬರೀ ಪೇಪರಿನಲ್ಲಿ ಮಾತ್ರ ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಇದೆ. ಆ ರೀತಿ ಪ್ರತಿಯೊಂದಕ್ಕೂ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಕೇಳುವುದರಲ್ಲೂ ಅರ್ಥವಿಲ್ಲ, ನೋಡೋಣ, ಅಂತಹ ಅವಶ್ಯ ಬಂದರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೇ ಹೊರತಾಗಿ ಇಲ್ಲದೇ ಹೋದರೆ ಅನಾವಶ್ಯಕವಾಗಿ ಎಲ್ಲಕ್ಕೂ ಮಾಡುವುದು ಸರಿಯಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಅಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಅಂಥಾದ್ದರಲ್ಲಿ ಸಸ್ಪೆಂಡ್ ಮಾಡುವುದಿಲ್ಲ ಅಂದರೆ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ಒಬ್ಬರು ಸಸ್ಪೆಂಡ್ ಮಾಡಿ ಎಂದು ಹೇಳುತ್ತಾರೆ, ಒಬ್ಬರು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಬಹುಶಃ ಅವರೇ ಮೈಂಡ್ ಮೇಕಪ್ ಮಾಡಿಕೊಂಡ ಹಾಗೆ ಕಾಣುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಅವರನ್ನು ಅಮಾನತಿನಲ್ಲಿಟ್ಟು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ. ಎರಡೆರಡು ಹೇಳುತ್ತಾ ಇಲ್ಲ, ಒಂದೇ ಹೇಳುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದಕ್ಕೂ ಜುಡಿಷಿಯಲ್ ಎನ್‌ಕ್ವೈರಿ ಕೇಳಲೂ ಬಾರದು, ಮಾಡಲೂ ಬಾರದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಂಬಂಧಪಟ್ಟವರನ್ನು ಸಸ್ಪೆಂಡಿನಲ್ಲಿಟ್ಟು ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ. ಅವರನ್ನು ಅಮಾನತ್ತಿನಲ್ಲಿಡುತ್ತೀರಾ ಎಂದು ಕೇಳುತ್ತಿದ್ದೇನೆ.

ಬೆಳಗಾವಿ ನಗರ ಸಭೆ ಚುನಾವಣೆಯನ್ನು ಮುಂದೂಡುವುದು

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಈ ಸದನ ಇವತ್ತು ಮುಕ್ತಾಯವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಸದನವನ್ನು ಇವತ್ತೇ ಮುಕ್ತಾಯ ಮಾಡುತ್ತೀರಾ ಅಥವಾ ಇನ್ನೊಂದು ದಿವಸ ಸದನವನ್ನು ಮುಂದುವರಿಸುತ್ತೀರೊ ಗೊತ್ತಿಲ್ಲ. ಒಂದು ವೇಳೆ ಮುಂದುವರಿಸಿದರೆ ಸಂತೋಷ. ಈ ಸಂದರ್ಭದಲ್ಲಿ ಒಂದು ಪ್ರಮುಖವಾದಂತಹ ವಿಚಾರವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಬೆಳಗಾವಿ ನಗರ ಸಭೆಯ ಬಗ್ಗೆ ಹೇಳುತ್ತೇನೆ. ಅಲ್ಲಿ ವಿಭಾಗಗಳು ಬಹಳ ಮೋಸದಿಂದ ಕೂಡಿದೆ. ಮರಾಠಿ ಮತದಾರರಿಗೆ ಅನುಕೂಲವಾಗಿರತಕ್ಕಂತಹ ರೀತಿಯಲ್ಲಿ ವಿಭಾಗಗಳು ರಚನೆಯಾಗಿದೆ. ಈಗ ಅಲ್ಲಿಂದ ಜನ ಬಂದಿದ್ದಾರೆ. ಅಲ್ಲಿ ಚುನಾವಣೆ ಬಹಳ ಅಕ್ರಮವಾಗಿ ನಡೆಯುತ್ತದೆ. ಅಲ್ಲಿ ಮರಾಠಿ ಪರವಾಗಿ ಆಗುತ್ತಿದೆ. ಎನ್ನತಕ್ಕಂಥ ಪ್ರಶ್ನೆ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಅಲ್ಲಿಂದ ವರದಿ ತರಿಸಿಕೊಂಡು ಅಲ್ಲಿ ಅನ್ಯಾಯವಾಗಿದ್ದರೆ ಅಲ್ಲಿನ ಚುನಾವಣೆಯನ್ನು ಮುಂದೂಡುವ ಬಗ್ಗೆ ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಡಬೇಕು. ಈಗಾಗಲೇ ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಜನಾಭಿಪ್ರಾಯದ ಬಗ್ಗೆ ದೊಡ್ಡ ಒಂದು ಗೊಂದಲವನ್ನು ಎಬ್ಬಿಸುತ್ತಿದ್ದಾರೆ. ಅವರು ದೆಹಲಿಗೆ ನಿಯೋಗ ಹೋಗಿದ್ದಾರೆ. ಇದರ ಬಗ್ಗೆ ನಿಮ್ಮ ಸರಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕು. ಪತ್ರಿಕೆಯಲ್ಲಿ ಬಂದಿದೆ. ಈ ಸಭೆಯಲ್ಲಿ ಸರಕಾರದ ನಿಲುವು ಈ ಬಗ್ಗೆ ಏನು ಎಂಬುದನ್ನು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನೂ ಕೂಡ ನಿಯಮ ೩೩೪ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಬೆಳಗಾವಿ ವಿಭಾಗದಲ್ಲಿ ಒಂದೊಂದು ವಾರ್ಡ್‌ನಲ್ಲಿ ೮೯೪೦, ೭೭೭೫, ೮೯೫೫, ೬೦೦೦, ೬೦೦೯ ಹೀಗೆ ಮತದಾರರ ಪಟ್ಟಿಯನ್ನು ಮಾಡಿದ್ದಾರೆ. ಆದರೆ ಇನ್ನು ಕೆಲವು ವಾರ್ಡ್‌ಗಳಲ್ಲಿ ೨೭೦೦